ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಸನ್ಮಾನ್ಯ ಸಚಿವರ ಉತ್ತರವನ್ನು ಕೇಳಿದಮೇಲೆ ನಾನು ಒಂದು ಸಲಹೆ ಕೊಡೋಣವೆಂದು ಅನಿಸುತ್ತದೆ. ರಾಜ್ಯದ ಜನತೆಗೆ ತೊಂದರೆಯಾಗದ ರೀತಿಯಲ್ಲಿ ಪ್ರತಿಯೊಂದು ಡಿವಿಜನ್‌ಗಳಲ್ಲಿಯೂ ಅಧಿಕಾರೇತರರ ಸಮಿತಿಗಳನ್ನು ರಚಿಸಿ! ಆ ಮೂಲಕ ನ್ಯಾಯ ಸಿಗುವಂತ ವ್ಯವಸ್ಥೆಯನ್ನು ಮಾಡುವ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡುತ್ತಾರೆಯೆ ?

ಶ್ರೀ ಜಿ. ರಾಮೇಗೌಡ — ಅನ್ಯಾಯವಾಗಿದ್ದಲ್ಲಿ ಅಧಿಕಾರೇತರರ ಸಮಿತಿ ಇರಬೇಕೇ ಹೊರತು ! ನ್ಯಾಯವಾಗಿದ್ದಲ್ಲಿ ಅಧಿಕಾರೇತರರ ಸಮಿತಿ ಅನಾವಶ್ಯಕ ಎಂದು ನನ್ನ ಭಾವನೆ.

Resignation of Sri S. S. Arakeri from Janata Party and joining the Congress I Party.

ANNOUNCEMENT

Mr. Speaker.—I have received a letter dated the 16th April, 1979 from Prof. S. S. Arakeri, Member, Legislative Assembly stating that he has tendered his resignation to Janatha Party and joined the Karnataka Congress (I) Legislature Party. I have also received a letter from Sri D. Jayadevaraj Urs, Secretary, Congress Legislature Party, dated the 16th April, 1979 stating that Prof. S. S. Arakeri has been admitted to Congress (I) Legislature Party on the 11th April, 1979. Arrangements will be made to change the seat of Prof. S. S. Arakeri.

Sri S. R. Bommai.—I would like to say something as a point of information ಅವರ ಮತಕ್ಷೇತ್ರದ ಜನ ಸೇರಿ ಒಂದು ಸಭೆ ಮಾಡಿ ನಿರ್ಣಯ ಮಾಡಿದ್ದಾರೆ. ಅವರು ಜನತಾಪಕ್ಷಕ್ಕೆ ರಾಜಿನಾಮೆ ಕೊಟ್ಟಿದ್ದಾರೆ ! ಅವರು ನಮ್ಮ ಶಾಸನ ಸಭೆಯ ಮತಕ್ಷೇತ್ರದಿಂದ ಆರಿಸಿಹೋಗಿದ್ದಾರೆ. ಅವರು ಅದಕ್ಕೂ ರಾಜೀನಾಮೆ ಕೊಟ್ಟು ಪುನಃ ಕಾಂಗ್ರೆಸ್ (ಐ) ಟೀಕೇಟ್ ಮೇಲೆ ನಿಂತು ಆರಿಸಿ ಹೋಗಲಿ ಎಂದು ಹೇಳಿದ್ದಾರೆ ! ಅವರಿಗೆ ಪಕ್ಷಾಂತರವಾಗುವುದಕ್ಕೆ ಸ್ವತಂತ್ರ್ಯ ಇದೆ. ಆದರೆ, ಜನಾಭಿಪ್ರಾಯಕ್ಕೆ ತಲೆಬಾಗಿ ಅವರು ಕಾಂಗ್ರೆಸ್ (ಐ) ಟೀಕೇಟ್ ಮೇಲೆ ಆರಿಸಿ ಬಂದು ಇಲ್ಲಿ ಕೂತುಕೊಳ್ಳಲಿ ! ಅದುವರೆವಿಗೂ ಇಲ್ಲಿ ಕೂಡುವುದಕ್ಕೆ ಅವರಿಗೆ ನೈತಿಕ ಹಕ್ಕು ಇಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ವಿರೋಧಪಕ್ಷದ ನಾಯಕರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಇದೇ ಸಲಹೆಯನ್ನು ಅವರ ಮೇಲಿನ ಪಕ್ಷದವರಿಗೆ ಸಲ್ಲಿಸಿದ್ದರೆ ಬಹಳ ಉತ್ತಮವಾಗುತ್ತಿತ್ತು. ಇದೇ ರಾಜ್ಯದಿಂದ ಕಾಂಗ್ರೆಸ್ (ಐ) ಪಕ್ಷದಿಂದ ಚುನಾವಣೆಯಲ್ಲಿ ಗೆದ್ದಂತ ಮೂರು ಜನ ಲೋಕ ಸಭಾ ಸದಸ್ಯರು ಜನತಾ ಪಕ್ಷಕ್ಕೆ ಸೇರಿದ್ದಾರೆ ಅವರಿಗೇನಾದರೂ ವಿರೋಧಪಕ್ಷದ ನಾಯಕರು ಅಡ್ವೈಸ ಮಾಡಿದ್ದಾರೋ ತಾವು ನೈತಿಕ ಹಕ್ಕಿನ ವಿಷಯ ಹೇಳಿದ್ದೀರಿ ! ಇದರ ಬಗ್ಗೆ ಏನು ಹೇಳುತ್ತೀರಿ ?

ಅಧ್ಯಕ್ಷರು.—ಎರಡು ಕಡೆಯೂ ಒಪ್ಪಂದವಾಗಿ ಬಿಡಲಿ.

Budget Estimates for 1979-80
Demands for Grants
Demand Nos: 19 and 20

Sri G. Ramegowda (Miniser foro Fod and Forests).—I beg to move :

"That a sum not exceeding Rs, 33,45,43,000 inclusive of the sum granted 'on account' be granted to the Government

to defray the charges which will come in course of payment during the financial year ending 31st day of March 1980 in respect of Demand No. 19. Food and Civil supplies."

"That a sum not exceeding Rs. 26,48,30,000 inclusive of the sum granted 'on account', be granted to the Government to defray the charges which will come in course of payment during the financial year ending 31st day of March 1980 in respect of Demand No. 20 forests"

The Question was Proposed

MR. SPEAKER.—The above two Demands are before the House for discussion. The debate will go on upto 5 P.M. and thereafter the hon'ble Minister will reply to the debate. Now I call Sri H. Gangadharan to initiate the debate.

SRI H. GANGADHARAN.—Mr. Speaker Sir, last year also I had the privilege of initiating the debate on these Demands No. 19 and 20 regarding Food and Civil Supplies and Forests.

ಶ್ರೀ ಪಿ. ಕೆ. ಕಳ್ಳೀಗುಡ್ಡ.—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಬೇಕು.

SRI K. H RANGANATH.—I rise to a point of order. ನಮ್ಮ ರೂಲ್ಸ್ ಪ್ರಕಾರ ಯಾವುದರಲ್ಲಿ ಪ್ರಾರಂಭ ಮಾಡಿದ್ದಾರೆ ಅದರಲ್ಲಿಯೇ ಮುಂದುವರಿಸಬೇಕಾಗುತ್ತದೆ. ಈಗ ಇಂಗ್ಲೀಷಿನಲ್ಲಿ ಪ್ರಾರಂಭ ಮಾಡಿದರು; ಈಗ ನಮ್ಮ ಮಾನ್ಯ ಸದಸ್ಯರಾದ ಕಳ್ಳೀಗುಡ್ಡ ಅವರ ಒತ್ತಾಯ ದಿಂದ ಕನ್ನಡಕ್ಕೆ ಬರಲಿಕ್ಕೆ ಕಾರಣವಿಲ್ಲ.

He has to continue only in English. ಅದು ರೂಲ್ಸ್‌ನಲ್ಲಿದೆ. ನಾನು ಕಾನೂನಿನಲ್ಲಿ ಇರುವುದನ್ನು ಹೇಳಿದೆ.

SRI S. S ARAKERI,—The hon'ble Leader of the Opposition has said something about me. Therefore, I would like to give some clarification I have taken the permission and also the opinion of my Constituency people and then I have joined the Congress(I) party. Therefore he cannot say anything on that matter.

† ಶ್ರೀ ಹೆಚ್. ಗಂಗಾದರನ್ (ಕೃಷ್ಣರಾಜ).—ಅಧ್ಯಕ್ಷರೆ, ಸುಮಾರು ೩೩ ಕೋಟಿ ರೂಪಾಯಿ ಗಳನ್ನು ವೆಚ್ಚ ಮಾಡತಕ್ಕಂತಹ ಈ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಇಲಾಖೆ ಬಗ್ಗೆ ಚರ್ಚೆ ಪ್ರಾರಂಭಿಸಲಿಕ್ಕೆ ಸಂತೋಷಪಡುತ್ತೇನೆ. ಕಳೆದ ವರ್ಷ ಕೂಡ ಈ ವಿಷಯದ ಮೇಲೆ ಚರ್ಚೆಯನ್ನು ನಾನೇ ಆರಂಭ ಮಾಡಿದ್ದೆ. ಈ ವರ್ಷ ಆಗುಹೋಗುಗಳನ್ನು ಕುರಿತು ನಾಲ್ಕು ಮಾತುಗಳನ್ನು ನಿವೇದಿಸಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸುತ್ತೇನೆ. ಕಳೆದ ವರ್ಷ ಅದರ ಹಿಂದಿನ ವರ್ಷ ಸರ್ಕಾರ ರೈತರಿಂದ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳುವ ಬಗ್ಗೆ ಅಭಿಮಾನ ಪೂರ್ವಕವಾಗಿ ಹೆಮ್ಮೆಯಿಂದ ನಾಲ್ಕಾರು ಮಾತುಗಳನ್ನು ಹೇಳುತ್ತಾ ಇದ್ದುದು ಸಾರ್ವಜನಿಕರ ಗಮನಕ್ಕೆ ಬಂದಿದೆ. ಈ ವರ್ಷ ಅದೇ ಧಾಟಿಯಲ್ಲಿ ರೈತರಿಂದ ಧಾನ್ಯಗಳನ್ನು ಕೊಳ್ಳುತ್ತೇವೆಂಬ ಅಭಿಮಾನ ವ್ಯಕ್ತಪಡಿಸಿದ್ದು ಕಂಡುಬರುತ್ತಿಲ್ಲ. ಅದರ ಬಗ್ಗೆ ಕಾರಣ ಗೊತ್ತಾಗುತ್ತಿಲ್ಲ. ಈ ವರ್ಷದ ಪ್ರಕ್ಯೂರ್ ಮೆಂಟ್ ಎರಡೂವರೆ ಲಕ್ಷ ಮೆಟ್ರಿಕ್ ಟನ್ ಇದ್ದರೆ ಒಂದು ಲಕ್ಷದ ಮುವತ್ತೆರಡು ಸಾವಿರದ ಆರುನೂರ ಎಂಬತ್ತೊಂದು ಮೆಟ್ರಿಕ್ ಟನ್ ಮಾತ್ರ ಸಂಗ್ರಹ ಮಾಡಿದ್ದಾರೆ. ಇವರು ಹೆಚ್ಚು ಸಂಗ್ರಹ ಮಾಡಲಿಕ್ಕೆ ಏತಕ್ಕೆ ಸಮರ್ಥರಾಗಿಲ್ಲ ಎನ್ನುವುದು ಗಮನಾರ್ಹವಾದುದು. ಕಳೆದ ವರ್ಷ ಅದರ ಹಿಂದಿನ ವರ್ಷ ನಾಪ್ಪು

ಎಷ್ಟು ಸಂಗ್ರಹ ಮಾಡಿದ್ದೇವೆ ಎಂದು ಅಭಿಮಾನದಿಂದ ಹೇಳಿಕೊಳ್ಳಬೇಕಿದ್ದರೆ ಅದಕ್ಕೆ ನಾನು ಒಂದು ಮಾತನ್ನು ಇಂಗ್ಲೀಷಿನಲ್ಲಿ ಹೇಳಬೇಕಾಗುತ್ತದೆ. When the agriculturists were weeping the Government was laughing. This year when the agriculturists are weeping Government is also weeping to purchase the required quantity of paddy from the growers. ಹಿಂದಿನ ಸಾಲುಗಳಲ್ಲಿ ರೈತರು ಮಾರುಕಟ್ಟೆಯಲ್ಲಿ ಮಾರಿದರೆ ಹೆಚ್ಚು ಬೆಲೆ ಸಿಕ್ಕುವಾಗ ಸರ್ಕಾರ ಒತ್ತಾಯ ಮಾಡಿ ತನ್ನದೇ ನಿಗದಿಯಾದ ಬೆಲೆಗೆ ಕೊಂಡುಕೊಳ್ಳುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿತ್ತು. ಆದರೆ ಈ ವರ್ಷದಲ್ಲಿ ಸರ್ಕಾರಕ್ಕೆ ಸಾಕಷ್ಟು ಧಾನ್ಯವನ್ನು ರೈತರು ಒದಗಿಸಿಕೊಡುವುದಕ್ಕೆ ತಯಾರು ಇದ್ದರೂ, ಸರ್ಕಾರಕ್ಕೆ ಕೊಡಬೇಕಾದ ಕಂದಾಯದ ಸಾಲಕ್ಕೆ ಧಾನ್ಯ ಕೊಡುತ್ತೇವೆಂದು ಮುಂದೆ ಬಂದರೂ ಸರ್ಕಾರ ಕೊಂಡುಕೊಳ್ಳುವುದಕ್ಕೆ ತಯಾರಾಗಿಲ್ಲ. ಇವೊತ್ತು ಆಹಾರ ಪದಾರ್ಥಗಳ ಬೆಲೆ ಬಿದ್ದು ಹೋಗಿದ್ದ ಕಾಲದಲ್ಲಿ ನಿಗದಿಯಾದ ಬೆಲೆಗೆ ಕೊಂಡುಕೊಳ್ಳಲು, ರೈತರ ಕ್ಷೇಮ ಸಂಧಾರಣೆಗಾಗಿ ಸರ್ಕಾರ ಯಾವ ಪ್ರಯತ್ನ ಮಾಡಿಲ್ಲ ಎನ್ನತಕ್ಕದ್ದು ಅವರ ವಾರ್ಷಿಕ ವರದಿಯಿಂದ ಅರ್ಥವಾಗುತ್ತದೆ. ಈ ಅಂಶದನ್ನು ಗಮನಿಸಿದಾಗ ರೈತ ಉತ್ಪಾದನೆ ಮಾಡುವ ಸಂದರ್ಭದಲ್ಲಿ, ಅವನು ಪಡೆಯುವ ಬೆಲೆ ರೈತನ ಜೀವನದಲ್ಲಿ ಏನು ಪರಿಣಾಮ ಉಂಟು ಮಾಡುತ್ತದೆ ಎಂದು ಸರ್ಕಾರ ಯತ್ಕಿಂಚಿತ್ತಾದರೂ ಗಮನ ಹರಿಸಿಲ್ಲ ಎಂದು ನಾನು ಈ ಸಭೆಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ರೈತ ಅನ್ನ ಕೊಡುವ ಅನ್ನದಾತ ಎಂದರೆ ಅನ್ನದಾತರ ಪರಿಸ್ಥಿತಿ ಬೆನ್ನುಮೂಳೆ ಮುರಿದಂತಹ ಪರಿಸ್ಥಿತಿಯಲ್ಲಿ ಇದ್ದಾರೆ. ರೈತ ಪಡೆಯುವ ವಸ್ತುಗಳಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಬೆಲೆ ಬಿದ್ದುಹೋಗಿದೆ. ಸರ್ಕಾರ ನಿಗದಿಯಾದ ಬೆಲೆ ಕೊಡುವುದು ಬಂದಿಲ್ಲ. ಆದರೆ ಇವೊತ್ತು ಅದೇ ರೈತ ಅನ್ನ ಬೆಳೆಯಬೇಕಾಗಿದೆ. ಅನ್ನ ಬೆಳೆಯತಕ್ಕಂತಹ ರೈತನಿಗೆ ಕೊಡುವಂತಹ ಗೊಬ್ಬರದ ಬೆಲೆ ಇಳಿದಿಲ್ಲ, ಅವನಿಗೆ ಬೇಕಾದ ಕಬ್ಬಿಣ, ಉಕ್ಕು, ಪೆಟ್ರೋಲ್, ಸಿಮೆಂಟ್ ಎಲ್ಲಾ ವಸ್ತುಗಳ ಬೆಲೆ ಏರುತ್ತಿವೆ. ಅವನಿಗೆ ಅಗತ್ಯವಾಗಿರತಕ್ಕ ಅವಶ್ಯಕ ವಸ್ತುಗಳು ಸುಲಭ ಬೆಲೆಯಲ್ಲಿ ದೊರೆತು ಅವನು ಉತ್ಪನ್ನ ಮಾಡತಕ್ಕ ಆಹಾರ ಪದಾರ್ಥಗಳ ಬೆಲೆಗೂ ಅವನು ವೆಚ್ಚ ಮಾಡತಕ್ಕ ಇತರ ವಸ್ತುಗಳಿಗೂ ಸರಿದೂಗಿಸುವಂತಹ ಯಾವ ಯೋಜನೆಯನ್ನು ಸರ್ಕಾರ ಮಾಡಿಲ್ಲ ಅಂದಾಗ ರೈತನ ಪರಿಸ್ಥಿತಿ ಇನ್ನೂ ದುಸ್ಥಿತಿಯಾಗುತ್ತದೆ ಇವೊತ್ತು ರೈತ ಬದುಕಬೇಕೋ, ಸಾಯಬೇಕೋ ಎನ್ನುವ ಕಠಿಣ ಪರಿಸ್ಥಿತಿಯಲ್ಲಿದ್ದಾನೆ. ಸರ್ಕಾರ ಯಾವುದಾದರೂ ದೃಷ್ಟಿಯಿಂದ ಕೊಂಡುಕೊಳ್ಳುವ ಬೆಲೆಯಲ್ಲಿ ಹೆಚ್ಚಿಗೆ ಕೊಂಡುಕೊಂಡು ರೈತರಿಗೆ ಬೇಕಾದ ಟ್ರ್ಯಾಕ್ಟರ್ಸ್ ಆಗಲಿ, ಅಥವಾ ಇತರೆ ಯಾವ ವಸ್ತುಗಳಿಗೆ ಆಗಲಿ ಸರ್ಕಾರ ಅವರಿಗೆ ಕೊಡುವಾಗ ಸಬ್ಸಿಡಿ ರೂಪದಲ್ಲಿ ಕೊಡಲು ಯಾವ ಪ್ರಯತ್ನ ಮಾಡದ ಬಗ್ಗೆ ಅನೇಕ ವರ್ಷಗಳಿಂದ ಮಾನ್ಯ ಸದಸ್ಯರುಗಳ ವಿಧಾನ ಸಭೆಯಲ್ಲಿ ಮಂಡಿಸುತ್ತಾ ಬಂದಿದ್ದಾರೆ, ಅದೇ ವಿಷಯವನ್ನು ನಾನೂ ಕೂಡ ಹೇಳುತ್ತೇನೆ. ಇದರ ಜೊತೆಗೆ ಸರ್ಕಾರ ಗಮನ ಹರಿಸಿರತಕ್ಕ ಆಹಾರ ಪದಾರ್ಥಗಳ ವಸ್ತುಗಳಲ್ಲಿ ವೆಜಿಟೆಬಲ್, ಪೊಟಾಟೋ, ಇತ್ಯಾದಿ ವಸ್ತುಗಳನ್ನು ಆಹಾರಪದಾರ್ಥಗಳೆಂದು ಗಮನಿಸಿದಂತೆ ಕಂಡು ಬರುತ್ತಿಲ್ಲ. ಈ ವಸ್ತುಗಳನ್ನು ಬೆಳೆಯತಕ್ಕ ರೈತರು ಸಂಕಟಕ್ಕೆ ಸಿಕ್ಕಿದ್ದಾರೆ. ಅವರಿಂದ ಕೊಳ್ಳುವ ಅಥವಾ ಮಾರುವಂತಹ ವ್ಯವಸ್ಥೆ ಇಲ್ಲ. ಸರ್ಕಾರ ಇದರ ಬಗ್ಗೆ ಗಮನ ಹರಿಸಿಲ್ಲ, ರೈತ ಒಮ್ಮೆ ಬೆಳೆದಂತಹ ತರಕಾರಿಗೆ ಸುವ್ಯವಸ್ಥಿತ ರೀತಿಯಲ್ಲಿ ಬೆಲೆ ಸಿಕ್ಕುವಂತೆ ಮಾಡಿಲ್ಲ. ಅದನ್ನು ಆಹಾರ ಪದಾರ್ಥವೆಂದು ಗಮನಿಸಿಲ್ಲ ಎನ್ನುವ ಯೋಚನೆ ನಮ್ಮ ಮುಂದೆ ಬರುತ್ತದೆ. ಹಿಂದಿನ ವರ್ಷಗಳನ್ನು ನೋಡಿದಾಗ ಕರ್ನಾಟಕ ರಾಜ್ಯದಲ್ಲಿ ಅತ್ಯುತ್ತಮವಾದ ತರಕಾರಿಯನ್ನು ಬೆಳೆಯತಕ್ಕ ಸದವಕಾಶಗಳು ಇದ್ದರೂ, ವಿದೇಶಿವಿನಿಮಯ ದೊರೆಯುತ್ತಿದ್ದು ಇದ್ದರೂ ಅದರ ಕಡೆಗೆ ಗಮನಹರಿಸುವ, ಕೊಳ್ಳುವ, ಮಾರುವ ವ್ಯವಸ್ಥೆಯನ್ನು ಮಾಡಲಿಲ್ಲ. ಇನ್ನು ಕೊಡತಕ್ಕಂತಹ ಪದಾರ್ಥಗಳನ್ನು ವಿತರಣೆ ಮಾಡುವ ಬಗ್ಗೆ ಸರ್ಕಾರದಿಂದ ಕೆಲವು ಅಂಶಗಳನ್ನು ಹೇಳುತ್ತಿದ್ದಾರೆ. ಈಗ ಆಹಾರ ಪದಾರ್ಥಗಳನ್ನು ಸಹಕಾರ ಸಂಘಗಳ ಮೂಲಕ ಹಂಚುತ್ತಿದ್ದೇವೆ, ನ್ಯಾಯಬೆಲೆ ಅಂಗಡಿಗಳ ಮೂಲಕ ಹಂಚುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಬಹುಶಃ ಸಹಕಾರ ಸಂಘಗಳ ಮೂಲಕ ಹಂಚುವ ವ್ಯವಸ್ಥೆಯಲ್ಲೂ ಅನೇಕ ರೀತಿಯಾದ ಕುಂದುಕೊರತೆಗಳು ಇರುವುದು ಗಮನಾರ್ಹವಾದುದು. ಈಗಾಗಲೇ ಸಹಕಾರ ಸಂಘಗಳು ನಡೆಸಿರತಕ್ಕ ಅವ್ಯವಹಾರಗಳ ಬಗ್ಗೆ ಕುರಿತು ಮಾನ್ಯ ಸಚಿವರು ನೆನ್ನೆ ವಿಷದವಾಗಿ ವಿಷಾದನೀಯವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಹಿಂದೆ ಒಂದು ಸಾರಿ ಮಾನ್ಯ ಸಚಿವರೇ ನನ್ನ ಪ್ರಶ್ನೆಗೆ ಉತ್ತರ ನೀಡುತ್ತಾ "ಮೈಸೂರು ಜಿಲ್ಲೆ ಒಂದರಲ್ಲೇ ಸುಮಾರು ೯೩ ಸಹಕಾರ ಸಂಘಗಳು

ಸಾಮಾನ್ಯ ಜನತೆಗೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವ ಕಾರ್ಯದಲ್ಲಿ ಒಂದು ವರ್ಷದಲ್ಲಿ ಸುಮಾರು ೮ ಲಕ್ಷಕ್ಕಿಂತ ಮಿಗಿಲಾಗಿ ಹಣವನ್ನು ನುಂಗಿಹಾಕಿದ್ದಾರೆ" ಎಂದು ಹೇಳಿದ್ದರು. ಕೇವಲ ಮೈಸೂರು ಜಿಲ್ಲೆಯೊಂದರಲ್ಲೇ ಇಷ್ಟು ಹಣವನ್ನು ತಿಂದು ಹಾಕಿದ್ದೆ ಆದರೆ ಇನ್ನು ಇಡೀ ರಾಜ್ಯದಲ್ಲಿ ಸರ್ಕಾರದ ಅಧೀನದಲ್ಲಿರತಕ್ಕ ಸಹಸ್ರಾರು ಸಹಕಾರ ಸಂಸ್ಥೆಗಳು ಇನ್ನೆಷ್ಟು ಕೋಟಿ ರೂಪಾಯಿಗಳನ್ನು ದುರುಪಯೋಗ ಮಾಡಿರಬಹುದು, ಎಂಬುದನ್ನು ಇಲ್ಲಿ ಗಮನಿಸಬೇಕಾದುದು ಅತಿ ಮುಖ್ಯವಾದುದು. ಸಾಮಾನ್ಯ ಜನತೆಗೆ ಅವಶ್ಯಕವಾದ ಈ ಆಹಾರ ಪದಾರ್ಥಗಳನ್ನು ಸಹಕಾರ ಸಂಘಗಳ ಮೂಲಕ ವಿತರಣೆ ಮಾಡಲು ವ್ಯವಸ್ಥೆ ಮಾಡುತ್ತೇವೆಂದು ಸರ್ಕಾರದವರು ಹೇಳುವುದಾದರೆ, ಈ ಮಾರ್ಗವನ್ನು ಬಿಟ್ಟರೆ, ಇನ್ನು ಬೇರೆ ಯಾವ ಮಾರ್ಗದಿಂದಲೂ ಜನತೆಗೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡಲು ಸಾಧ್ಯವೇ ಇಲ್ಲ ಎಂಬುದನ್ನು ಒಪ್ಪಿಕೊಂಡಂತಾಗುತ್ತದೆ. ಈಗ ಸರ್ಕಾರದವರು ಆಹಾರ ಪದಾರ್ಥಗಳ ವಿತರಣೆ ವ್ಯವಸ್ಥೆಯನ್ನು ಏನು ಮಾಡಿದ್ದಾರೆ ಅದೂ ಕೂಡ ಜನತೆ ನಿರೀಕ್ಷಿಸಿದ ಮಟ್ಟದಲ್ಲಿ ಇಲ್ಲದಿರುವುದಕ್ಕೆ ತುಂಬಾ ವಿಷಾದಪಡಬೇಕಾಗಿದೆ. ಇದರ ನೀತಿ ರಾಜ್ಯದಲ್ಲಿರತಕ್ಕ ಕೇವಲ ಕೆಲವೇ ಜನರನ್ನು ತಮ್ಮ ಕೈ ಗೊಂಬೆಗಳನ್ನಾಗಿ ಮಾಡಿಕೊಳ್ಳಲು ಅನುಸರಿಸುತ್ತಿರುವ ದುಶ್ಚಟವಾಗಿದೆ ಎಂದು ಹೇಳದೇ ವಿಧಿಯಿಲ್ಲ. ತಮಗೆ ಬೇಕಾದ ವ್ಯಕ್ತಿಗಳನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ ಅವರನ್ನು ಈ ಸಹಕಾರ ಸಂಸ್ಥೆಗಳಿಗೆ ನಾಮಕರಣ ಮಾಡಿ ಸಾಮಾನ್ಯ ಜನತೆಗೆ ಅವಶ್ಯಕವಾಗಿ ಬೇಕಾದ ಆಹಾರ ಪದಾರ್ಥಗಳನ್ನು ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಆ ವ್ಯಕ್ತಿಗಳ ಕೈಗೆ ಕೊಟ್ಟಿದ್ದಾರೆ. ಇದರಿಂದಾಗಿ ಬಡಜನರಿಗೆ ಬಹಳ ತೊಂದರೆಯಾಗಿದೆಯೆಂದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಸಹಕಾರ ಸಂಸ್ಥೆಗಳು ಬೆಳೆಯಬೇಕೆಂಬ ಬಗ್ಗೆ ಮಾನ್ಯ ಸಚಿವರು ಹೇಳುವ ಮಾತನ್ನು ನಾನೂ ಒಪ್ಪುತ್ತೇನೆ; ಸಾಮಾನ್ಯ ಜನತೆಯೂ ಅದನ್ನು ಸ್ವಾಗತಿಸುತ್ತದೆ. ಆದರೆ ಇವತ್ತು ಏನಾಗಿದೆ ಎಂದರೆ, ನೂರಕ್ಕೆ ಸುಮಾರು ೩೦–೩೫ ಸಹಕಾರಿ ಸಂಸ್ಥೆಗಳು ಕೇವಲ ಕೌಟುಂಬಿಕ ವ್ಯಾಪಾರಿ ಸಂಸ್ಥೆಗಳಾಗಿವೆ ಎನ್ನುವ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಇದು ಹೇಗೆಂದರೆ, ಒಂದೇ ಕುಟುಂಬದವರು ಸಹಕಾರ ಸಂಸ್ಥೆಯನ್ನು ರಚನೆ ಮಾಡಿಕೊಂಡು, ಸರ್ಕಾರದವರು ಕೊಡತಕ್ಕ ಸೌಲಭ್ಯಗಳನ್ನೆಲ್ಲಾ ಪಡೆದು ಕೊಂಡು, ಸಾರ್ವಜನಿಕರಿಗಾಗಿ ಹಂಚಬೇಕಾದ ಆಹಾರ ಪದಾರ್ಥಗಳನ್ನೂ ಸರಿಯಾಗಿ ಹಂಚದೇ ಎಲ್ಲವನ್ನೂ ತಾವೇ ದುರುಪಯೋಗಪಡಿಸಿಕೊಳ್ಳುತ್ತಿವೆ.

ಶ್ರೀ ಸಿ. ಎಂ. ಇಬ್ರಾಹಿಂ.—ಹಿಂದೆ ಸಹಕಾರ ತತ್ವ ಹೇಗಿತ್ತು ಎಂದರೆ "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" ಎಂದು. ಆದರೆ ಇವತ್ತು "ತಾನು ತಮ್ಮವರಿಗಾಗಿ, ಎಲ್ಲರದೂ ತನಗಾಗಿ" ಎನ್ನುವಂತಾಗಿದೆ.

ಶ್ರೀ ಜಿ. ರಾಮೇಗೌಡ.—ನಿನ್ನೆಯ ದಿವಸ ತಾವು ಏಕೆ ಈ ಮಾತನ್ನು ಹೇಳಲಿಲ್ಲ ?

ಶ್ರೀ ಹೆಚ್ ಗಂಗಾಧರನ್.—ನೀವೂ ಇದರಲ್ಲಿ ಕಾಲಿಟ್ಟಿದ್ದೀರಿ. ಆಕಸ್ಮಾತ್ ಜಾರಿಬಿಟ್ಟೀರಿ, ಸ್ವಲ್ಪ ಎಚ್ಚರಿಕೆಯಿಂದ ಇರಿ ಎಂದು ಈಗ ಹೇಳುತ್ತಿದ್ದೇನೆ. ಸರ್ಕಾರದವರು ಸಹಕಾರ ಸಂಘಗಳ ಮೂಲಕ ಆಹಾರ ಪದಾರ್ಥಗಳ ವಿತರಣಾ ನೀತಿಯನ್ನು ಏನು ಇಟ್ಟುಕೊಂಡಿದ್ದಾರೆ ಇದು ಯಾವ ರೀತಿಯಿಂದಲೂ ಯಶಸ್ವಿಯಾಗಿಲ್ಲ. ಇವರ ನೀತಿಯಿಂದ, ಸಾರ್ವಜನಿಕರಿಗೆ, ಸರ್ಕಾರದವರಿಗೆ ಎಷ್ಟು ಕಷ್ಟನಷ್ಟಗಳುಂಟಾಗಿದೆ ಎಂಬುದನ್ನು ಗಮನಿಸಿಲ್ಲವೆಂದು ಕಾಣುತ್ತದೆ. ಆಹಾರ ವಿತರಣಾ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳ ಹಾಗೂ ಆಹಾರ ಸಚಿವರ ಇಬ್ಬರ ಹೊಣೆಗಾರಿಕೆಯೂ ಇದೆ ಎಂಬುದನ್ನು ಇಲ್ಲಿ ಹೇಳಬಯಸುತ್ತೇನೆ. ಆಹಾರ ಪದಾರ್ಥಗಳನ್ನು ಹಂಚಿಕೆ ಮಾಡುವುದರಲ್ಲಿ "ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ"ದವರ ಪಾತ್ರ ಮುಖ್ಯವಾದುದು. ಇವರು ರೈತರಿಂದ ಆಹಾರ ಪದಾರ್ಥಗಳನ್ನು ಕೊಂಡುಕೊಂಡು ಮಾರಾಟ ಮಾಡುತ್ತಿದ್ದಾರೆ. ಇವರ ಕೈ ಕೆಳಗೆ ಅನೇಕ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ. ಈ ಆಹಾರ ಇಲಾಖೆಯ ಬೇಡಿಕೆ ಮೇಲೆ ಈ ಸದನದಲ್ಲಿ ನಾವು ಚರ್ಚೆಯನ್ನು ಆರಂಭ ಮಾಡುವ ಮುನ್ನ ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆಯ ನಿಗಮ-ವು ಕಳೆದ ವರ್ಷ ಎಷ್ಟು ಆದಾಯವನ್ನು ಗಳಿಸಿದೆ, ಅಥವಾ ಎಷ್ಟು ನಷ್ಟವನ್ನು ಅನುಭವಿಸಿದೆ, ಇದಕ್ಕೆ ಕಾರಣಗಳೇನು ಎನ್ನುವ ಬಗ್ಗೆ ಮಾನ್ಯ ಸದಸ್ಯರಿಗೆ ವಿವರಗಳನ್ನು ಒದಗಿಸಿಕೊಟ್ಟಿದ್ದರೆ ಆಮೂಲಾಗ್ರವಾಗಿ ಪ್ರಸ್ತಾಪಿಸಲು ಅನುಕೂಲವಾಗುತ್ತಿತ್ತು. ಆದರೆ ಅಂಥ ಒಂದು ವರದಿಯನ್ನು ಮಾನ್ಯ ಸದಸ್ಯರಿಗೆ ಸರ್ಕಾರದವರು ಒದಗಿಸಿಕೊಟ್ಟಿಲ್ಲ. ಬಹುಶಃ ಈ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು

ನಿಗಮದಲ್ಲಿ ಕೋಟ್ಯಾಂತರ ರೂಪಾಯಿ ಹಣ ನಷ್ಟವಾಗಿರುವುದರಿಂದ ಅದನ್ನೆಲ್ಲಾ ಇಲ್ಲಿ ಸೂಚಿಸುವುದಕ್ಕೆ ನಾಚಿಕೆಪಟ್ಟುಕೊಂಡು ಕೊಟ್ಟಿಲ್ಲವೆಂದು ಕಾಣಿಸುತ್ತದೆ. ಮಾರುಕಟ್ಟೆ ಹಾಗೂ ಸಾರ್ವಜನಿಕರ ಬೇಡಿಕೆಗಳನ್ನು ಸರ್ಕಾರದವರು ಅಧ್ಯಯನ ಮಾಡಿ ಇವತ್ತಿನ ಪರಿಸ್ಥಿತಿಯಲ್ಲಿ ಬೇಳೆಕಾಳು, ಸೀಮೆಎಣ್ಣೆ ಮುಂತಾದುವುಗಳನ್ನು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲವೆಂದು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಕಳೆದ ಅಧಿವೇಶನ ಕಾಲದಲ್ಲಿ ಬೆಂಗಳೂರು ನಗರದಲ್ಲಿ ನಾಗರೀಕರಿಗೆ ಸರಿಯಾದ ಪ್ರಮಾಣದಲ್ಲಿ ಸೀಮೆ ಎಣ್ಣೆ ಸರಬರಾಜಾಗುತ್ತಿಲ್ಲ ಎಂದು ಗಂಟೆಗಟ್ಟಲೆ ಚರ್ಚೆ ಮಾಡಬೇಕಾದ ಪ್ರಸಂಗ ಬಂದಿತ್ತು. ಆದರೆ ಇವತ್ತಿನ ಆಹಾರ ಇಲಾಖೆಯ ಬೇಡಿಕೆ ಬಗ್ಗೆ ಮಾನ್ಯ ಸಚಿವರ ಉತ್ತರವೂ ಸೇರಿದಂತೆ ಕೇವಲ ಎರಡೂವರೆ ಗಂಟೆಗಳಲ್ಲಿ ನಾವು ನಮ್ಮ ಚರ್ಚೆಯನ್ನು ಮಾಡಿ ಮುಗಿಸಬೇಕಾಗಿದೆ. ಮೈಸೂರು ನಗರದಲ್ಲಿ ಸೀಮೆ ಎಣ್ಣೆಯನ್ನು ಚಿಲ್ಲರೆ ಮಾರಾಟಗಾರರಿಗೆ ಕೊಡುತ್ತಿದ್ದೀರಿ. ಅವರು ಏನು ಮಾಡುತ್ತಿದ್ದಾರೆಂದರೆ, ಸಾಬೂನು ಅಥವಾ ಬೇರೆ ಯಾವುದೋ ವಸ್ತುವನ್ನು ಅಳತೆ ಮಾಡುವ ಉಪಕರಣದೊಳಗೆ ಇಟ್ಟು ಹೆಚ್ಚು ನೊರೆ ಬರುವಂತೆ ಮಾಡಿ 3 ಲೀಟರ್ ಅಳೆಯುವುದನ್ನು ಎರಡೂವರೆ ಅಥವಾ ಮೂರು ಲೀಟರ್‌ಗೆ ಅಳೆಯುತ್ತಿದ್ದಾರೆ. ತಾವು ನೋಡಿದರೆ, ಮೈಸೂರಿನಲ್ಲಿ ಈ ಒಗ್ಗೆ ಒಳ್ಳೆಯ ವ್ಯವಸ್ಥೆ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಸೀಮೆ ಎಣ್ಣೆಯನ್ನು ಗಾಡಿಗಳಲ್ಲಿ ಹೊತ್ತು ಮಾರುವವರು ಯಾವ ರೀತಿ ಜನಗಳಿಗೆ ಮೋಸ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಪದೇ ಪದೇ ದೂರುಗಳು ಬರುತ್ತಿದ್ದರೂ ಅದರ ಬಗ್ಗೆ ತಾವು ಯಾವುದೇ ರೀತಿಯ ಕ್ರಮವನ್ನೂ ತೆಗೆದುಕೊಂಡಂತೆ ಕಾಣುತ್ತಿಲ್ಲ. ಇವತ್ತು ಮಕ್ಕಳು ಬರೆಯುವ ನೋಟ್ ಪುಸ್ತಕಗಳು, ವನಸ್ಪತಿ, ಇನ್ನೂ ಮುಂತಾದುವುಗಳು ಸರಿಯಾಗಿ ಸರಬರಾಜಾಗದೆ ಬೆಲೆಗಳು ವಿಪರೀತ ಏರಿಳಿತಗಳಾಗುತ್ತಿರುವುದನ್ನು ಪ್ರತಿನಿತ್ಯ ನಾವು ನೋಡುತ್ತಿದ್ದೇವೆ. ಕಳೆದ ಸಾರಿ ಈ ವಿಚಾರದಲ್ಲಿ ನಾವು ಇಲ್ಲಿ ಪ್ರಸ್ತಾಪ ಮಾಡಿದಾಗ, ತಾವು ಸೂಕ್ತ ವ್ಯವಸ್ಥೆ ಮಾಡುವುದಾಗಿ ಹೇಳಿದ್ದೀರಿ. ಕಳೆದ ಸಾರಿ ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಮಾತನಾಡುತ್ತಾ ಸಸ್ಯಾಹಾರಿಗಳಿಗೆ ಅತಿ ಮುಖ್ಯವಾದ ಬೇಳೆಯನ್ನು ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಬೇಕೆಂದು ಹೇಳಿದ್ದರು. ಆದರೆ ಸರ್ಕಾರದವರು ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಂಡುಬರಲಿಲ್ಲ.

ಮಾನ್ಯ ಅಧ್ಯಕ್ಷರೆ, ಇನ್ನು ಅಡಿಗೆಗೆ ಉಪಯೋಗಿಸುವ ಗ್ಯಾಸ್ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಈ ವರ್ಷ ನಮಗೆ ಗ್ಯಾಸ್ ಬೇಕೆಂದು ಏಜೆಂಟರ ಹತ್ತಿರ ಹೋಗಿ ಬುಕ್ ಮಾಡಿದರೆ ಅದು ನಮಗೆ ಸಿಕ್ಕುವುದು 1981ನೇ ಇಸವಿಯ ಹೊತ್ತಿಗೆ. ಅಂದರೆ ಈ ಅಡಿಗೆಗೆ ಉಪಯೋಗಿಸುವ ಅನಿಲವನ್ನು ಪಡೆಯಲು ಎಷ್ಟು ಕಷ್ಟವಿದೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಇದರ ಕಡೆಗೂ ಸರ್ಕಾರದವರು ತಮ್ಮ ಗಮನ ಹರಿಸಬೇಕು. ಅದೇ ರೀತಿಯಲ್ಲಿ ಕಲ್ಲಿದ್ದಲು, ಹಾಗೂ ಸಿಮೆಂಟ್ ವಿಚಾರದಲ್ಲೂ ಕೂಡ ತಾವು ಸಾಕಷ್ಟು ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇನ್ನು ಸೌದೆ ವಿಷಯದಲ್ಲೂ ಕೂಡ ಇದನ್ನು ಸಹಕಾರ ಸಂಘಗಳ ಮೂಲಕ ನಾಗರೀಕರಿಗೆ ಸರಬರಾಜು ಮಾಡುವುದಾಗಿ ಹೇಳಿದ್ದೀರಿ.

2–30 ಪಿ.ಎಂ.

ಈ ಸಹಕಾರಿ ಸಂಘಗಳನ್ನು ಮಾಡಿ ಕುಟುಂಬ ಸಂಸ್ಥೆಗಳಿಗೆ ತಾವು ಸರ್ಕಾರದಿಂದ ಕೊಡತಕ್ಕಂಥ ಸೌದೆ ಏನು ಇರುತ್ತದೆ ಇದು ಸಾಮಾನ್ಯವಾಗಿ ಹೋಟೆಲ್‌ಗಳಿಗೆ ಸರಬರಾಜು ಆಗುತ್ತಿದೆ ಎಂದು ಕಾಣುತ್ತದೆ. ಇದರ ಬಗ್ಗೆ ಗಮನಹರಿಸಿಲ್ಲವೆಂದು ಹೇಳಬೇಕಾಗಿದೆ. ಸೌದೆಯನ್ನು ತರಲು ಯಾರಿಗೆ ಅನುಮತಿಯನ್ನು ಕೊಟ್ಟಿರುತ್ತೀರಿ ಅವರು ಕಾಡಿನಲ್ಲಿ ಹೋಗಿ ಮರಗಳನ್ನು ತಂದು ಮಾರಾಟ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿರುತ್ತೀರಿ, ಇದರಿಂದ ಅರಣ್ಯ ಇಲಾಖೆಗೆ ಆಗತಕ್ಕಂಥ ನಷ್ಟವನ್ನು ಸರ್ಕಾರದವರು ತೀವ್ರವಾಗಿ ಗಮನಿಸುತ್ತಿಲ್ಲ. ಪ್ರಭಾವಯುತವಾದಂಥವರು ಸೌದೆಯನ್ನು ಕಡಿಯುವಾಗ ಅರಣ್ಯದಲ್ಲಿ ಬೆಳೆದಿರತಕ್ಕಂಥ ಉಪಯುಕ್ತವಾದ ಮರಗಳನ್ನು ಕತ್ತರಿಸಿ ಅದರ ಜೊತೆಯಲ್ಲಿ ಸೇರಿಸಿ ಕಳ್ಳಸಾಗಾಣಿಕೆ ಮಾಡಿ ಅವರು ಶ್ರೀಮಂತರಾಗುತ್ತಿರುವುದಲ್ಲದೆ, ಸರ್ಕಾರಕ್ಕೆ ನಷ್ಟವನ್ನುಂಟುಮಾಡುತ್ತಿರುತ್ತಾರೆ. ಇದರಿಂದ ಅರಣ್ಯದಲ್ಲಿ ಬೆಳೆಯತಕ್ಕಂಥ ಮರಮುಟ್ಟುಗಳಿಗೆ ಉಪಯುಕ್ತವಾದಂಥ ಮರಗಳು ನಾಶವಾಗತಕ್ಕಂಥ ಪರಿಸ್ಥಿತಿ ಉಂಟಾಗಿರುತ್ತದೆ. ಈ ಬಗ್ಗೆ ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಲಿಕ್ಕೆ ಇಚ್ಛಿಸುತ್ತೇನೆ. ಅದೇನೆಂದರೆ ಮರಮುಟ್ಟುಗಳು ಆಗತಕ್ಕಂಥ ಕಾಡನ್ನು ನಿರ್ಮಾಣಮಾಡಿ, ಆ ಕಾಡನ್ನು

ಹೋಗುವ ಮೂಲಕ ಯಾವರೀತಿ ಕೊಂಡುಕೊಳ್ಳುವ ವ್ಯವಸ್ಥೆಯನ್ನು ಮಾಡುತ್ತೀರಿ. ಅದರಂತೆ ಸೌದೆಯನ್ನು ಕೂಡ ಕಾಡಿನಲ್ಲಿ ಸರ್ಕಾರದವರೇ ಕತ್ತರಿಸಿ ಹರಾಜುಮೂಲಕ ಒದಗಿಸತಕ್ಕಂಥ ಒಂದು ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ಎಂದು ಕೇಳುತ್ತೇನೆ. ಈ ರೀತಿ ಮಾಡುವುದರಿಂದ ಸರ್ಕಾರಕ್ಕೆ ಆಗತಕ್ಕಂಥ ನಷ್ಟ, ಅರಣ್ಯ ಇಲಾಖೆಗೆ ಆಗತಕ್ಕಂಥ ನಷ್ಟವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆಂದು ಈ ಸಮಯದಲ್ಲಿ ಸಿವೆ ದಿಸಿ ಕೊಳ್ಳುವುದಕ್ಕೆ ಇಚ್ಛಿಸುತ್ತೇನೆ. ಕಳೆದವರ್ಷ ನಾವು ಒಂದು ಡಿಮ್ಯಾಂಡನ್ನು ಸಭೆಯ ಮುಂದೆ ಇಟ್ಟಿದ್ದೀರಿ. ಅದೇನೆಂದರೆ ರಾಗಿಯನ್ನು ಕೊಂಡು ಸಬ್‌ಸಿಡಿಯಲ್ಲಿ ಮಾರಾಟ ಮಾಡಿದ್ದರಿಂದ ಸರ್ಕಾರಕ್ಕೆ ೪೦ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿರುತ್ತದೆಂದು ಹೇಳಿದ್ದೀರಿ. ಏತಕ್ಕೆ ನಷ್ಟವಾಯಿತು, ಸೂಕ್ತ ವೇಳೆಯಲ್ಲಿ ಏತಕ್ಕೆ ವಿಲೆವಾರಿ ಮಾಡಲಿಲ್ಲ, ಇದನ್ನೆಲ್ಲ ಕೇಳಿದ್ದಕ್ಕೆ ಕಾಲಾವಕಾಶವನ್ನು ಕೊಟ್ಟರೆ ಅದನ್ನೆಲ್ಲ ವಿವರವಾಗಿ ಹೇಳುತ್ತೇವೆಂದು ಹೇಳಿದಿರಿ. ಮಾನ್ಯ ಚಂದ್ರೇಗೌಡರು ಒಂದು ಮಾತನ್ನು ಹೇಳಿದರು ಮಾಂಸಾಹಾರಕ್ಕೆ ಉಪಯೋಗಿಸತಕ್ಕಂಥ ಚಿಕ್ಕೆ ಲವಂಗವನ್ನು ಬೆಳೆಯಲು ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದರು, ಅವರ ಕಷ್ಟ ತಿಳಿದುಕೊಂಡು ಸರ್ಕಾರದವರು ಪ್ರಯತ್ನವನ್ನು ಮಾಡಿದರೆ ಸ್ವಲ್ಪಮಟ್ಟಿಗೆ ಚಕ್ಕೆ ಲವಂಗವನ್ನು ಬೆಳೆಯುವ ಒಳ್ಳೆಯ ಸೂಚನೆ ಕಂಡು ಬರುತ್ತದೆಂದು ಹೇಳಬೇಕಾಗುತ್ತದೆ.

Sri C. M. Ibrahim.—Thank you very much for the concern expressed by a vegetarian.

ಶ್ರೀ ಎಚ್. ಗಂಗಾಧರನ್.—ಇನ್ನು ೧೨೦ನೇ ಡಿಮ್ಯಾಂಡ್ ಬಗ್ಗೆ ಇಪ್ಪತ್ತೈವರೆ ಕೋಟಿ ರೂಪಾಯಿಗಳ ವೆಚ್ಚದ ಬಗ್ಗೆ ಮಂಡಿಸಿದ್ದಾರೆ. ಇದರ ಬಗ್ಗೆ ಕೆಲವು ಅಂಶಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಉಪಯೋಗಿಸತಕ್ಕಂಥ ಭೂಮಿ ಎಷ್ಟು ಎಂದರೆ ೫೪.೨ ಪರ್ಸೆಂಟ್‌ನಷ್ಟು ಇರುತ್ತದೆ. ಒಂದು ಕೋಟಿ ಮೂರು ಲಕ್ಷ ಒಟ್ಟು ಹೆಕ್ಟೇರು ಭೂಮಿಯಲ್ಲಿ ೫೮,೬೬ ೪೮೪ ಹೆಕ್ಟೇರು ಭೂಮಿ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದೇವೆ. ಆದರೆ ೩೫ ಪರ್ಸೆಂಟ್ ಭೂಮಿ ವ್ಯವಸಾಯಕ್ಕೆ ಉಪಯೋಗವಿಲ್ಲದೆ ಕಾಡಾಗಿ ಇರುತ್ತದೆಂದರೆ ಇದು ಒಂದು ಶೋಚನೀಯವಾದ ಸಂಗತಿಯಾಗಿರುತ್ತದೆ. ೩೫ ಪರ್ಸೆಂಟ್ ಭೂಮಿ ನಿರುಪಯುಕ್ತವಾಗಿ ಬಿದ್ದಿರುವ ವಿಷಯವನ್ನು ಗಮನಿಸಬೇಕಾಗಿದೆ. ಯಾವ ದೇಶದಲ್ಲಿ ಅನ್ನದ ಸಮಸ್ಯೆ ಇದ್ದು, ದುಡಿಯತಕ್ಕಂಥ ರೈತನಿದ್ದು ಲಕ್ಷಾಂತರ ಎಕರೆಗಳಷ್ಟು ಭೂಮಿ ನಿರುಪಯುಕ್ತವಾಗಿರುತ್ತದೆಂದರೆ ಇದು ಒಂದು ಶೋಚನೀಯವಾದ ಪ್ರಸಂಗವಾಗಿರುತ್ತದೆ. ಚೈನಾ ದೇಶದಲ್ಲಿ ಇಂಥ ಪರಿಸ್ಥಿತಿ ಇದ್ದಾಗ ಅಣು ಶಕ್ತಿಯನ್ನು ಪ್ರಯೋಗಮಾಡಿ ಎಲ್ಲಿ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತಿಲ್ಲ, ಅಲ್ಲಿ ಭೂಮಿಯನ್ನು ವ್ಯವಸಾಯಕ್ಕೆ ಅನುಕೂಲಮಾಡಿರುತ್ತಾರೆ, ಇಸ್ರೇಲ್‌ನಂತಹ ಮರಳುಗಾಡಿನಲ್ಲಿ ಭೂಮಿಯನ್ನು ಪರಿಶುದ್ಧಮಾಡಿ ಬೆಳೆಯನ್ನು ಬೆಳೆಯತಕ್ಕಂಥ ಯೋಜನೆಯನ್ನು ಮಾಡಿದ್ದಾರೆ. ಇಂಥ ಯೋಜನೆಗಳಿಗೆ ಭಾರತ ದೇಶದಲ್ಲಿಯೂ ಕೂಡ ಅನೇಕ ವಿಧವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. ಭಾರತ ದೇಶದಲ್ಲಿ ೧೬೬ ಮಿಲಿಯನ್ ಹೆಕ್ಟೇರುಗಳಲ್ಲಿ ೪೦ ಮಿಲಿಯನ್ ಹೆಕ್ಟೇರುಗಳಷ್ಟು ಮಾತ್ರ ಭೂಮಿಯನ್ನು ಉಪಯುಕ್ತಮಾಡಿಕೊಳ್ಳುತ್ತಿದ್ದಾರೆ. ಸಾಕಷ್ಟು ಭೂಮಿಯನ್ನು ನಿರುಪಯುಕ್ತವಾಗಿ ಇರುವುದನ್ನು ಸರ್ಕಾರದವರು ಗಮನಿಸಬೇಕೆಂದು ಹೇಳುತ್ತೇನೆ. ಆಲ್ ಇಂಡಿಯಾ ಆವರೇಜ್ ೨೩ ಪರ್ಸೆಂಟ್ ಎನು ಇರುತ್ತದೆ ಇದರಲ್ಲಿ ನ್ಯಾಷನಲ್ ಫಾರೆಸ್ಟ್ ಪಾಲಿಸಿ ಪ್ರಕಾರ ೩೩ ಪರ್ಸೆಂಟ್ ಇಡಬೇಕೆಂದು ಇರುತ್ತದೆ. ಆದರೆ ನಮ್ಮಲ್ಲಿರುವುದು ೧೫.೪ ಪರ್ಸೆಂಟ್ ಮಾತ್ರ. ನಾವು ಮಾಡಿರತಕ್ಕಂಥ ಸಾಧನೆಯ ಬಗ್ಗೆ ಹೇಳುತ್ತಾ ಇದ್ದೇನೆ. In Karnataka so far the plan investment has been very poor and the percentage of investment in the forestry as compared to the total plan investment in the State has been just about 1%. Investments so far made in the forestry sector has not reached even the frings of the problem. ಅರಣ್ಯ ಇಲಾಖೆಯವರು ಬಹಳವಾಗಿ ಕೆಲಸವನ್ನು ಮಾಡುತ್ತಾ ಇದ್ದಾರೆಂದು ಹೇಳಿದಿರಿ. ಆದರೆ ನಾವು ಮಾಡುತ್ತಾ ಇರುವ ಸಾಹಸವೆಲ್ಲವೂ ಬರಿ ಅರಣ್ಯರೋಧನವಾಗಿದೆ ಎಂದು ಹೇಳಬೇಕಾಗಿದೆ. ನಾವು ಫಾರೆಸ್ಟ್ ಬೆಳೆಸುವ ಬಗ್ಗೆ ಹಾಕಿಕೊಂಡಿರುವ ಯೋಜನೆ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದನ್ನು ನೋಡಿದರೆ ಕಾಡನ್ನು ಬೆಳೆಸುವ ಬದಲು ನಾಶವನ್ನು ಮಾಡತಕ್ಕಂಥ ಯೋಜನೆಗಳಿಗೆ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಈ ಯೋಜನೆಯಲ್ಲಿ ಒಟ್ಟು ಡಿಮ್ಯಾಂಡ್‌ನಲ್ಲಿ ಯೂಕಲಿಪ್ಟಸ್ ಬೆಳೆಯುವ ಸಲುವಾಗಿ

೧೧,೭೫೫ ಹೆಕ್ಟೇರುಗಳು, ಕ್ಯಾಶಿನ್ಯೂಗಾಗಿ ೨೩,೦೦೦ ಹೆಕ್ಟೇರುಗಳು, ಮ್ಯಾಚ್‌ವುಡ್ ಬೆಳೆಸುವ ಸಲುವಾಗಿ ೩೦,೦೦೦ ಹೆಕ್ಟೇರುಗಳು, ಯೂಕಲಿಪ್ಟಸ್ ಬೆಳೆಯುವ ಸಲುವಾಗಿ ೭೦,೦೦೦ ಹೆಕ್ಟೇರುಗಳು ಮತ್ತು ಫ್ಯುಯಲ್‌ವುಡ್‌ಗೋಸ್ಕರವಾಗಿ ೧,೮೪,೦೦೦ ಹೆಕ್ಟೇರುಗಳನ್ನು ಉಪಯೋಗಿಸಿಕೊಳ್ಳಲಾಗಿವೆ ಎಂದು ತಿಳಿಸುತ್ತೀರಿ. ಆದರೆ ಶಾಶ್ವತವಾಗಿ ಆದಾಯವನ್ನು ಕೊಡತಕ್ಕಂಥ ಕ್ಯಾಶಿನ್ಯೂ, ಕೋಕೋ ಮತ್ತು ರಬ್ಬರ್ ಇವೇ ಮುಂತಾದ ಬೆಳೆಗಳನ್ನು ಬೆಳೆಸಲು ಕೊಡಬೇಕಾದಷ್ಟು ಆದ್ಯತೆಯನ್ನು ಕೊಡುತ್ತಿಲ್ಲವೆಂಬ ಅಂಶವನ್ನು ಹೇಳಬೇಕಾಗಿದೆ. ಕಳೆದ ಎರಡು ವರ್ಷದ ವರದಿಯಲ್ಲಿ ನೀಡಿದಂಥ ಅಂಕಿಅಂಶಗಳನ್ನು ಗಮನಿಸಿದರೆ ನಿಜವಾಗಿಯೂ Planting experiments, propagation of medicinal plants, Essential oil plants, grass, dehydration scheme, pineaple cultivation scheme ಇಂಥ ಪ್ರಮುಖವಾದ, ಶಾಶ್ವತವಾಗಿ ಆದಾಯವನ್ನು ಕೊಡತಕ್ಕಂಥ ಅಂಶಗಳನ್ನು ಸರ್ಕಾರದವರು ವರದಿಯಲ್ಲಿ ಕೈಬಿಟ್ಟಿದ್ದಾರೆ. ಈ ವರ್ಷ ಅವುಗಳ ಬಗ್ಗೆ ಗಮನಕೊಟ್ಟಂತೆ ಕಾಣುತ್ತಿಲ್ಲವೆಂದು ಹೇಳಬೇಕಾಗಿದೆ. ೧೯೭೫ ರಿಂದ ೭೬ ರವರೆಗೆ ಖರ್ಚು ಎಷ್ಟು ಮಾಡಿರುತ್ತೀರಿ ಎಂದರೆ ೫೫ ಪರ್ಸೆಂಟ್‌ನಷ್ಟು ಖರ್ಚು ಮಾಡಿರುತ್ತೀರಿ. ಅರಣ್ಯ ಸಂಪತ್ತಿನಿಂದ ಎಷ್ಟು ಸಂಪಾದನೆಯನ್ನು ಮಾಡಬಹುದಿತ್ತೋ ಅಷ್ಟು ಸಂಪಾದನೆಯನ್ನು ಮಾಡುತ್ತಾ ಇಲ್ಲ ಎನ್ನುವ ವಿಷಯವನ್ನು ನಿವೇದನೆ ಮಾಡಿಕೊಳ್ಳುತ್ತೇನೆ. ಇನ್ನು ಅರಣ್ಯ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಗಂಧದ ಮರದ ಬಗ್ಗೆ ತಾವು ಹೋದಸಲ ಹೇಳಿದಿರಿ ಇನ್ಶೂರೆನ್ಸ್ ಯೋಜನೆ ಮಾಡಬೇಕೆಂದು ಬೆಳೆಯತಕ್ಕಂಥ ಮರಗಳಿಗೆ ಇನ್‌ಷೂರೆನ್ಸ್ ಮಾಡತಕ್ಕಂಥ ಕಾರ್ಯವನ್ನು ಕೈಬಿಟ್ಟಹಾಗೆ ಕಾಣುತ್ತದೆ. ನಮ್ಮ ರಾಜ್ಯಕ್ಕೆ ಗೌರವವನ್ನು ತಂದಿರತಕ್ಕಂಥ ಗಂಧದ ಮರಗಳ ಬಗ್ಗೆ ಹೆಚ್ಚಿನ ಗಮನಕೊಟ್ಟಂತೆ ಕಾಣುತ್ತಿಲ್ಲ. ೧೯೭೬-೭೭ರಲ್ಲಿ ೧,೧೨೦ ಟನ್‌ನಷ್ಟು ಉತ್ಪಾದನೆಯಿದ್ದುದು ೧೯೭೭-೭೮ರಲ್ಲಿ ೮೫೫ ಟನ್‌ಗೆ ಇಳಿದಿದೆ ಎಂದರೆ ಮುಂದೆ ದೊಡ್ಡ ನಷ್ಟವನ್ನೇ ಅನುಭವಿಸಬೇಕಾಗುತ್ತದೆಂದು ಹೇಳಬೇಕಾಗಿದೆ. ನಮ್ಮ ದೇಶಕ್ಕೆ ಕೀರ್ತಿಯನ್ನು ತಂದಿರತಕ್ಕಂಥ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯನ್ನು ಕೆಲವೇ ವರ್ಷಗಳಲ್ಲಿ ಮುಚ್ಚತಕ್ಕಂಥ ಪರಿಸ್ಥಿತಿ ಸರ್ಕಾರಕ್ಕೆ ಬರುತ್ತದೆಂದು ಹೇಳಬೇಕಾಗಿದೆ. ಕಾರ್ಖಾನೆಗೆ ಸಾಕಷ್ಟು ಗಂಧದ ಮರದ ಸರಬರಾಜು ಆಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಗಂಧದಮರಗಳ ಕಳ್ಳಸಾಗಾಣಿಕೆಯೇ ಕಾರಣವಾಗಿರುತ್ತದೆ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ೧೯೭೮ ಮೊಕದ್ದಮೆಗಳನ್ನು ಕಂಡುಹಿಡಿದು ಹದಿನಾರುವರೆ ಲಕ್ಷ ನಷ್ಟವಾಗಿದೆ ಎನ್ನುವ ಅಂಶವನ್ನು ತಿಳಿಸಿರುವ ವಿಚಾರದ ಕಡೆಗೆ ಗಮನಹರಿಸಬೇಕಾಗಿದೆ. ಇಷ್ಟೊಂದು ನಷ್ಟ ಉಂಟಾಗಲು ಗಂಧದ ಮರಗಳ ಕಳ್ಳತನಕ್ಕೆ ಯಾರದೋ ಕೈವಾಡ ಇರಬೇಕು ಎನ್ನುವುದನ್ನು ಗಮನಿಸಬೇಕಾಗಿದೆ. ಇಷ್ಟೊಂದು ಸಿಬ್ಬಂದಿ ನಮ್ಮಲ್ಲಿದ್ದಾಗ್ಯೂ ಕೂಡ ನಮ್ಮಲ್ಲಿ ಗಂಧದ ಮರದ ಕಳ್ಳತನ ಆಗುತ್ತಿರಬೇಕಾದರೆ ಇದಕ್ಕೆ ಯಾರದೋ ಒಂದು ಕೈವಾಡ ಇರಬೇಕು ಎಂದೆನಿಸುತ್ತದೆ ಅಧಿಕಾರಿಗಳ ಆಶೀರ್ವಾದ ಮತ್ತು ಬೆಂಬಲ ಇದಕ್ಕೆ ಇರಬೇಕೆಂಬ ಶಂಕೆ ಇದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಈ ಗಂಧದ ಮರದ ಕಳ್ಳಸಾಗಾಣಿಕೆಯನ್ನು ತಪ್ಪಿಸುವುದಕ್ಕೆ ಒಂದು ವ್ಯವಸ್ಥೆ ಮಾಡತಕ್ಕದ್ದು ಅಗತ್ಯವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಇನ್ನೊಂದು ಮುಖ್ಯವಾದ ವಿಚಾರವೆಂದರೆ ಕಳೆದ ವರ್ಷ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಮೈಸೂರು ಮೃಗಾಲಯವನ್ನು ಅಭಿವೃದ್ಧಿಗೊಳಿಸುತ್ತೇವೆಂಬ ಮಾತನ್ನು ಹೇಳಿದ್ದರು. ಆದರೆ ಈ ವರ್ಷ ಹೊಸದಾಗಿ ಯಾವುದೇ ಪ್ರಾಣಿಗಳು ಆ ಪ್ರಾಣಿ ಸಂಗ್ರಹಾಲಯಕ್ಕೆ ಬಂದಂತೆ ಕಾಣುತ್ತಿಲ್ಲ. ಹೊಸದಾಗಿ ಅಧಿಕಾರಿಯನ್ನೇನೋ ನೇಮಿಸಿ ಹೊಸ ಹೆಸರನ್ನು ಅವರಿಗೆ ಕೊಟ್ಟಿದ್ದೀರಿ. ಅದರ ಬಗ್ಗೆ ರಾಜಕೀಯ ಏನಿದೆಯೋ ನನಗೆ ಗೊತ್ತಿಲ್ಲ. ಅವರು ಸಮರ್ಥ ಅಧಿಕಾರಿಗಳೆಂದು ನೀವು ಭಾವಿಸಿದ್ದರೆ ಅದರ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಯಾರ ಮೇಲೆ ಸಾರ್ವಜನಿಕರ ದೂರಿತ್ತೋ ಅಂಥ ವ್ಯಕ್ತಿಯನ್ನು ಅಲ್ಲಿಗೆ ಹಾಕಿದ್ದೀರಿ ಎಂಬ ಅಂಶವನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಆ ಮೃಗಾಲಯವನ್ನು ಅಭಿವೃದ್ಧಿಪಡಿಸಿ ಅದನ್ನು ದೇಶದ ಸಂಪತ್ತನ್ನಾಗಿ ಮಾಡಬೇಕಾದುದು ಅಗತ್ಯವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಎಲ್ಲಾ ಕ್ಷೇತ್ರಗಳಲ್ಲೂ ಕಾಲಿಟ್ಟಿದ್ದೇವೆ ಎಂದು ಹೇಳಿದ್ದೀರಿ. ತಾವು ಕಾಲಿಟ್ಟಕೂಡಲೇ ಅನೇಕ ಹುಲಿಗಳು ಸತ್ತವು, ಆನೆಗಳು ಸತ್ತವು. ನಾಗರಹೊಳೆಯಲ್ಲಿ ಆನೆಗಳು ಸತ್ತಿರುವುದರ ಬಗ್ಗೆ ವರದಿ ಕೊಟ್ಟಿದ್ದೀರಿ. ಹಣ ವಸೂಲು ಮಾಡುತ್ತೇವೆ ಎಂದೂ ಹೇಳಿದ್ದೀರಿ. ಸರ್ಕಾರದ ಪ್ರಕಾರವೇ ಒಂದು ಆನೆಯ ಕೊಂಬಿಗೆ ೪೮ ಸಾವಿರ ರೂಪಾಯಿ ಆಗುತ್ತದೆ. ಅಂದಮೇಲೆ ನಾಗರಹೊಳೆಯಲ್ಲಿ ಸತ್ತಂಥ ಆನೆಗಳ ಕೊಂಬಿಗೆ ಬೆಲೆ ಎಷ್ಟಾಗುತ್ತದೆ, ಆದರಲ್ಲಿ ಎಷ್ಟು ಹಣವನ್ನು ಲೆಕ್ಕಾಚಾರ ಹಾಕಿ ಎಷ್ಟು ಹಣವನ್ನು ಸಂಗ್ರಹ ಮಾಡಿದ್ದೀರಿ?

ಯಾರು ಈ ಆನೆ ಸಾಯುವುದಕ್ಕೆ ಕಾರಣಕರ್ತರೋ ಅವರಿಂದ ಎಷ್ಟು ಹಣ ಸಂಗ್ರಹಿಸಿದ್ದೀರಿ ; ಇದನ್ನೆಲ್ಲಾ ಈ ಸದನದ ಗಮನಕ್ಕೆ ತಂದಿಲ್ಲ. ಅರಣ್ಯ ಇಲಾಖೆಯ ಅಧಿಕಾರದಲ್ಲೇ ಕೆಲವು ಸ್ವಯಂಸೇವಾ ಸಂಸ್ಥೆಗಳಿವೆ. ಅವು ಯಾವುವೆಂದರೆ ಕರ್ನಾಟಕ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್, ಕರ್ನಾಟಕ ಕ್ಯಾಷ್ಯೂ ಡೆವಲಪ್ಮೆಂಟ್ ಕಾರ್ಪೊರೇಷನ್, ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ; ಹೀಗೆ ಅನೇಕ ಸಂಸ್ಥೆಗಳ ಮೂಲಕ ವ್ಯವಹಾರವನ್ನು ನಡೆಸುತ್ತಿದ್ದೀರಿ. ಆದರೆ ಈ ಸಂಸ್ಥೆಗಳ ಆಯವ್ಯಯ ಏನು ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಸರ್ಕಾರದ ಒಂದು ಹೊಸ ನೀತಿ ಏನಿದೆಯೆಂದರೆ ಎಲ್ಲದಕ್ಕೂ ಒಂದೊಂದು ಕಾರ್ಪೊರೇಷನನ್ನು ನೇಮಕ ಮಾಡುವುದು. ಬಹುಶಃ ಈ ಎಲ್ಲಾ ಕಾರ್ಪೊರೇಷನ್‌ಗಳ ಆದಾಯ-ವೆಚ್ಚವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಮತ್ತು ಸಾರ್ವಜನಿಕರ ಗಮನಕ್ಕೆ ತರುವುದಕ್ಕೆ ಒಂದು ಕಾರ್ಪೊರೇಷನ್ ಆಫ್ ಕಾರ್ಪೊರೇಷನ್ಸ್ ರಚನೆ ಮಾಡಬೇಕೇನೋ ಎನ್ನಿಸುತ್ತಿದೆ. ಎಲ್ಲಾ ಕಾರ್ಪೊರೇಷನ್‌ಗಳೂ ಸರ್ಕಾರಕ್ಕೆ ನಷ್ಟ ಉಂಟುಮಾಡುವಂಥ ಕಾರ್ಯಕ್ರಮವನ್ನು ಜರುಗಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ವರ್ಷ Rearing of spices and Crocodile Breeding Scheme ಏನಿತ್ತು ಅದನ್ನು ಕೈಬಿಟ್ಟಿದ್ದೀರಿ. ಯಾತಕ್ಕೆ ಇದನ್ನು ಕೈಬಿಟ್ಟಿದ್ದೀರೋ ನನಗೆ ಗೊತ್ತಾಗುತ್ತಿಲ್ಲ. ದೇಶದಲ್ಲಿ ಆನೆಗಳ ಸಂಖ್ಯೆ, ಹುಲಿಗಳ ಸಂಖ್ಯೆ ಮತ್ತು ಇತರ ಮೃಗಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಅರಣ್ಯ ನಾಶವಾಗುತ್ತಿದೆ. ಅರಣ್ಯ ನಾಶವಾದರೆ ಮಳೆ ಬರುವುದು ತಪ್ಪುತ್ತದೆ. ಮಳೆ ಬರುವುದು ತಪ್ಪಿದರೆ ದೇಶದಲ್ಲಿ ಅನ್ನ ಸಿಗುವುದು ಕಷ್ಟವಾಗುತ್ತದೆ. ಈ ರೀತಿಯ ಸಮಸ್ಯೆಗಳನ್ನು ಎದುರಿಸಲು ಸರ್ಕಾರ ಸಾಕಷ್ಟು ಗಮನ ಹರಿಸಿಲ್ಲ. ಕೋಟ್ಯಾಂತರ ರೂಪಾಯಿಯನ್ನು ಖರ್ಚು ಮಾಡತಕ್ಕ ಒಂದು ವರದಿಯನ್ನು ನಮ್ಮ ಮುಂದಿಟ್ಟಿದ್ದೀರಿ. ಇದು ಅಸಮರ್ಪಕವಾದ, ಅಗ್ರಾಹ್ಯವಾದ ಒಂದು ವರದಿ ಎಂದು ಹೇಳಬೇಕಾಗಿದೆ. ಈ ದೃಷ್ಟಿಯಿಂದ ನೀವು ಅರಣ್ಯದ ಸಂಪತ್ತಿನ ಅಭ್ಯುದಯದ ಕಡೆಗೆ ಸರ್ಕಾರ ಸಾಕಷ್ಟು ಗಮನಹರಿಸಿಲ್ಲ ಎಂಬುದನ್ನು ನಿವೇದಿಸಿಕೊಳ್ಳುತ್ತಾ ಇದು ವಿಷಾದದ ಸಂಗತಿಯೆಂದು ತಿಳಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

[ಚೇರ್ಮನ್ (ಶ್ರೀಮಾನ್ ವೀರಪ್ಪ ಮೊಯ್ಲಿರವರು) ಅಧ್ಯಕ್ಷರ ಪೀಠವನ್ನಲಂಕರಿಸಿದರು]

† ಶ್ರೀ ಎಸ್ ವಿ. ನಾಯಕ್ (ಕುಮಟಾ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ಸಭೆಯ ಮುಂದಿಟ್ಟಿರುವ ಅರಣ್ಯ ಮತ್ತು ಆಹಾರ ಇಲಾಖೆ ಮೇಲಿನ ಬೇಡಿಕೆಗೆ ಬೆಂಬಲಿಸಿ ಮಾತನಾಡುತ್ತಾ ಕೀರ್ತಿ ತೊಟ್ಟಿಲನ್ನು ತೂಗುವ ಅರಣ್ಯದ ನಾಶದಿಂದ ನಾವು ವಿನಾಶಕಾರೀ ಮೆಟ್ಟಿಲನ್ನು ಹತ್ತುತ್ತಿದ್ದೇವೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ದೇಶದ ಸಂಸ್ಕೃತಿಯನ್ನು ತೂಗಿ ನೋಡುವ ಅಳತೆಗೋಲು ಆಗಿರುವ ಅರಣ್ಯ ಸಂಪತ್ತನ್ನು ಮತ್ತು ಅದರ ಸ್ಥಾನಮಾನವನ್ನು ಬೆಳೆಸಿಕೊಳ್ಳುವ ದಿಸೆಯಲ್ಲಿ ನಾವು ವಿಚಾರ ಮಾಡಬೇಕಾಗಿದೆ, ಮಹಾಕವಿ ಕಾಳಿದಾಸನಿಂದ ಹಿಡಿದು ವರಕವಿ ಪಂಪ ಮತ್ತು ಕುವೆಂಪುರವರವರೆಗೆ ಎಲ್ಲರೂ ಅರಣ್ಯದಿಂದಲೇ ಸ್ಫೂರ್ತಿಯನ್ನು ಪಡೆದರು ಎಂಬ ಅಂಶವನ್ನು ಗಮನಕ್ಕೆ ತರುತ್ತಾ ವರಕವಿ ಪಂಪ ಹೇಳಿದ ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವನು ಅರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸೀ ದೇಶಮಂ ಎಂದು ಹೇಳಿದ್ದಾನೆ. ಅರಣ್ಯದಿಂದ ಸ್ಫೂರ್ತಿಯನ್ನು ಪಡೆದ ಪಂಪ ಮರಿ ದುಂಬಿಯಾಗಿ ತಾನು ಮರುಜನ್ಮ ಪಡೆದರೂ ಸರಿಯೇ ಈ ನಾಡಿನಲ್ಲಿ ಹುಟ್ಟಬೇಕು ಎಂದು ಹೇಳಿದ್ದಾನೆ. ಮಹಾಕವಿ ಕುವೆಂಪುರವರು ಅರಣ್ಯದ ಒಂದು ವಿಸ್ತಾರವನ್ನು ಮಹಾತ್ಮಗಾಂಧಿಯವರ ಜೀವನಕ್ಕೆ ಹೋಲಿಸಿದರು. "ಅಲೆ ಅಲೆಯಾಗಿ ಮಲೆ ಮಲೆಗಳನ್ನು ತಬ್ಬಿ ತಬ್ಬಿ ದಿಗಂತಗಳಲ್ಲಿಯೂ ಅವಿಶ್ರಾಂತವಾಗಿ ಶೋಭಿಸುವ ಮಹಾರಣ್ಯ ಶ್ರೇಣಿಯಿಂದ ಉದ್ದೀಪನವಾಗುವ ಭೂಮಭಾವದಂತೆ ಭಕ್ತಿಗೌರವಗಳಿಗೆ ಆಸ್ಪದವಾಗಿದೆ'' ಎಂದು ಮಹಾಕವಿಯವರು ಹೇಳಿದ್ದಾರೆ. ಇಂಥ ಅರಣ್ಯ ನಮ್ಮ ದೇಶದ ಸಂಸ್ಕೃತಿಯನ್ನು ಯಾವರೀತಿ ಬಿಂಬಿಸಿದೆ ಎಂದು ಹೇಳಿದರೆ ಅರಣ್ಯವನ್ನು ಕಾಮಧೇನುವಿಗೆ ಹೋಲಿಸಬೇಕಾಗುತ್ತದೆ. ಆದರೆ ಅದರ ಕೆಚ್ಚಲನ್ನು ಕುಯ್ಯುವ ಸಾಹಸವನ್ನು ಮಾತ್ರ ನಾವು ಮಾಡುತ್ತಿದ್ದೇವೇನೋ ಎಂಬ ಭೀತಿ ಎಂದಿಗಿಂತ ಇಂದು ಹೆಚ್ಚಾಗಿ ಆಗುತ್ತಿದೆ. ಕಳೆದ ೨೫ ವರ್ಷಗಳಲ್ಲಿ ಸುಮಾರು ಆರೂವರೆ ಲಕ್ಷ ಎಕರೆ ಅರಣ್ಯವನ್ನು ಕಡಿದಂಥ ಅಥವಾ ಕಳೆದಂಥ ಸಾಹಸ ನಮ್ಮದು ಎಂದು ಹೇಳುವುದಕ್ಕೆ ಬಯಸುತ್ತೇನೆ. ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ ಒಟ್ಟು ಭೂ ಭಾಗದ ⅓ ಭಾಗ ಅರಣ್ಯ ಇರಬೇಕು. ಆದರೆ ನಮ್ಮ ರಾಜ್ಯದಲ್ಲಿ ಶೇಕಡ ೧೫ ರಷ್ಟು ಮಾತ್ರ ಅರಣ್ಯ ಇದೆ. ಅದರಲ್ಲಿ ೨೮ ಲಕ್ಷ ಎಕರೆ ಅರಣ್ಯ ಭೂಮಿ ಇದೆ. ಅದರಲ್ಲೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡ ೬೦ ರಷ್ಟು ಅರಣ್ಯ ಭೂಮಿ ಇದೆ. ಆ ಭಾಗದಲ್ಲಿ ಪ್ರವಾಸ ಮಾಡಿ ಬಂದಿರತಕ್ಕಂಥ ಮಾನ್

ಅರಣ್ಯ ಸಚಿವರಿಗೆ ಗೊತ್ತಿದೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಮನೆಯಿಂದ ಹೊರಗೆ ಕಾಲಿಟ್ಟರೆ ಅರಣ್ಯ ಸಿಗುತ್ತದೆ. ಅತಿ ಕಡಿಮೆ ಅರಣ್ಯ ಪ್ರದೇಶ ಇರುವುದೆಂದರೆ ಬೀದರ್ ಜಿಲ್ಲೆ. ಆ ಜಿಲ್ಲೆಯಲ್ಲಿ ಶೇಕಡ ೧.೭೫ ರಷ್ಟು ಮಾತ್ರ ಅರಣ್ಯ ಪ್ರದೇಶವಿದ್ದರೆ ಮಂಡ್ಯ ಜಿಲ್ಲೆಯಲ್ಲಿ ೧.೮೬ ಪರ್ಸೆಂಟ್ ಇದೆ. ನನ್ನ ಅಭಿಪ್ರಾಯದಲ್ಲಿ ಅರಣ್ಯ ನಾಶಕ್ಕೆ ಮುಖ್ಯ ಆರೋಪಿ ನಮ್ಮ ಸರ್ಕಾರ ಎಂದು ಹೇಳಬಯಸುತ್ತೇನೆ. ಏತಕ್ಕೆಂದರೆ ನಮ್ಮ ಹಲವಾರು ಯೋಜನೆಗಳು ಅಂದರೆ ಜಲವಿದ್ಯುತ್ ಯೋಜನೆ, ಶರಾವತಿ, ಕಾಳಿ, ಚಕ್ರ, ವರಾಹಿ, ಬೇಡ್ತಿ, ಅಗನಾಶಿನಿ ಮುಂತಾದ ಯೋಜನೆಗಳಿಂದ ೨ ಲಕ್ಷ ಎಕರೆ ಅರಣ್ಯ ಭೂಮಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಖನಿಜಸಂಪತ್ತಿನ ಉತ್ಪನ್ನದಿಂದಲೂ ಒಂದು ಲಕ್ಷ ಎಕರೆ ಅರಣ್ಯ ಭೂಮಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಮೂರನೆಯದಾಗಿ ವಿದ್ಯುಚ್ಛಕ್ತಿ ವ್ಯವಸ್ಥೆಗಾಗಿಯೂ ಗಣನೀಯವಾಗಿ ನಾವು ಅರಣ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ನಾನು ಅತ್ಯಂತ ವಿಷಾದದಿಂದ ಒಂದು ವಿಷಯವನ್ನು ಹೇಳಬೇಕಾದರೆ ಕೆಲವು ಅಧಿಕಾರಿಗಳ ಒಂದು ಆಲಸ್ಯ ಮನೋಭಾವನೆ ಅಥವಾ ಆಡಳಿತದಲ್ಲಿ ಕಟ್ಟುನಿಟ್ಟಾದ ಬಿಗಿ ಇಲ್ಲದೇ ಇರುವುದರಿಂದಲೂ ಗಣನೀಯವಾಗಿ ಅರಣ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ಅರಣ್ಯ ಸಂಪತ್ತಿನ ವಿಷಯದಲ್ಲಿ ನಾನು ಪ್ರಶ್ನೆ ಮಾಡುತ್ತೇನೆ, ಇದು ಯಾರಪ್ಪನ, ಯಾರವ್ವನ ಸ್ವತ್ತು? ಅದು ಸಾರ್ವಜನಿಕ ಸ್ವತ್ತು. ಕಾರವಾರ ಫಾರೆಸ್ಟ್ ಡಿವಿಷನ್ನಿನ ಅಂಕೋಲ ರೇಂಜಿನಲ್ಲಿ ಕಳೆದ ವರ್ಷ ಒಂದು ಘಟನೆ ನಡೆಯಿತು. ಅರಣ್ಯಾಧಿಕಾರಿಯೊಬ್ಬರು ಸೀಲನು ಕಂಟ್ರಾಕ್ಟರ್ ಒಬ್ಬರಿಗೆ ಹಾಕಿಕೊಟ್ಟರು. ನೀವು ಅದರ ವರದಿಯನ್ನೂ ತರಿಸಿರಬಹುದು. ಆವ[illegible] ರೇಂಜ್ ಫಾರೆಸ್ಟ್ ಆಫೀಸರ್ ಅವರು ನಿರಪರಾಧಿ ಎಂಬ ನಿರ್ಣಯಕ್ಕೆ ತಾವು ಬಂದಿರಬಹುದೇನೋ. ನಾನು ಒಂದು ನೈತಿಕವಾದ ಹಿನ್ನೆಲೆಯನ್ನು ಇಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಅರಣ್ಯ ಹರಾಜಿನಿಂದ ಗಣನೀಯವಾಗಿ ತಮಗೆ ಆದಾಯ ಬರುತ್ತದೆಂದು ಸ್ಪರ್ಧಾತ್ಮಕವಾದ ಬೆಲೆ ನಿಮಗೆ ಬಂದಾಗೆ ಸಾಕಷ್ಟು ಆದಾಯ ಬರುತ್ತದೆಂಬ ದೃಷ್ಟಿಯಿಂದ ತೆಪ್ಪಗೆ ನೀವು ನಿಟ್ಟುಸಿರು ಬಿಟ್ಟಿರಬಹುದೇನೋ. ಇಂತಹ ಒಂದು ವಂಚನೆ, ಮೋಸದಿಂದ ನಾಯಿಕೊಡೆಯಂತೆ ಹುಟ್ಟಿಕೊಂಡಿರ ವಂತಹ ಹಲವಾರು ಕಾಂಟ್ರಾಕ್ಟ್‌ದಾರರು ಗಣನೀಯವಾಗಿ ಲಾಭವನ್ನು ಪಡೆಯುತ್ತಿದ್ದಾರೆನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಕಾಂಟ್ರಾಕ್ಟ್‌ದಾರನು ೭೦೦ ಮರಗಳನ್ನು ಕಡಿಮೆ ದಾಖಲೆಯನ್ನು ಸ್ಥಾಪಿಸಿದ್ದಾನೆಂದು ಹೇಳುವಂತಹ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಂತಹ ಪ್ರಸಂಗಗಳು ಹೊನ್ನಾವರ ವಿಭಾಗದಲ್ಲೂ ಕೂಡ ನಡೆದಿದೆ. ಇಂತಹ ಪ್ರಸಂಗಗಳನ್ನು ತಮ್ಮ ಗಮನಕ್ಕೆ ತಂದಾಗ ತಮ್ಮ ಇಲಾಖೆಯವರು ಏನು ಮಾಡುತ್ತಾರೆಂದರೆ ಅವರಿಗೆ ದಂಡವನು ಹಾಕಿಬಿಡುತ್ತಾರೆ. ಈ ರೀತಿಯ ದಂಡವನ್ನು ಹಾಕುವುದರಿಂದ ಅವರು ಜಗ್ಗುವುದೂ ಇಲ್ಲ ಬಗ್ಗುವುದೂ ಇಲ್ಲ ಇದರಿಂದ ಅವರಿಗೆ ಮತ್ತೆ ಪುನಃ ಅವಕಾಶವನ್ನು ಕೊಟ್ಟಂತಾಗುತ್ತದೆ. ಇಂತಹ ಮೋಸ ವಂಚನೆ ಮಾಡುವಂತಹ ಕಂಟ್ರಾಕ್ಟ್‌ದಾರರು ಏನಿದ್ದಾರೆ ಅವರಿಗೆ ಯಾವುದಾದರೊಂದು ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕು. ಆ ವಿಚಾರವನ್ನು ತಮ್ಮ ಉತ್ತರದಲ್ಲಿ ಯಾವುದಾದರೊಂದು ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ಅರಣ್ಯ ನಾಶವಾಗುತ್ತದೆ. ಈ ಒಂದು ಅಕ್ರಮವನ್ನು ತಪ್ಪಿಸುವುದಕ್ಕೂ ಸಾಧ್ಯವಾಗುವುದಿಲ್ಲ. ತಾವು ಎಷ್ಟೋ ಸಂದರ್ಭದಲ್ಲಿ ಉತ್ತರ ಕೊಡುವಾಗ ತಮ್ಮ ಒಂದು ಚತುರತ್ವದಿಂದ ನಮ್ಮನ್ನು ಮಂತ್ರಮುಗ್ಧರನ್ನಾಗಿ ಮಾಡಿ ಬಿಡುತ್ತೀರಿ. ತಾವು ಇದರಿಂದ ಜಾರಿಕೊಂಡು ಬಿಡುತ್ತೀರೆಂದು ಹೇಳುತ್ತಿಲ್ಲ. ನಮ್ಮನ್ನು ಮಂತ್ರಮುಗ್ಧರನ್ನಾಗಿ ಮಾಡಿ ಎಷ್ಟೋ ಸಾರಿ ಕೂಡಿಸಿಬಿಡುತ್ತೀರಿ. ಅರಣ್ಯ ನಾಶವಾದರೆ ರೈತನಿಗೆ ಯಾವ ರೀತಿ ಅನ್ಯಾಯವಾಗುತ್ತದೆ ಎಂಬುದು ತಮಗೆ ಇನ್ನೂ ಅರ್ಥವಾಗಿಲ್ಲ. ಅರಣ್ಯ ಜಿಲ್ಲೆಯಿಂದ ಬಂದಂತಹ ನನ್ನ ಮಾತಿಗೆ ಅಲಕ್ಷ್ಯ ಆಗಬಾರದು ಎಂಬ ದೃಷ್ಟಿಯಿಂದ ಇತರ ತಕ್ಕಂತಹ ನಿದರ್ಶನವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದೇ ಸಮಯದಲ್ಲಿ ಇತ್ತೀಚೆಗೆ ನನ್ನ ಮತಕ್ಷೇತ್ರವಾದ ಹೊನ್ನನಗದ್ದೆ ಎಂಬಲ್ಲಿ, ಧಾರವಾಡ ಶಿವಮೊಗ್ಗ ಜಿಲ್ಲೆಗಳಿಂದ ಗಂಧದ ಕಟ್ಟಿಗೆಯನ್ನು ಗಣನೀಯವಾಗಿ ತೆಗೆದುಕೊಂಡು ಹೋಗಿ ಅಲ್ಲಿಂದ ಪರದೇಶಗಳಿಗೆ ಕಳುಹಿಸುವಂತಹ ಒಂದು ಹೊಸ ಜಾಲ ತಯಾರಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ದೃಷ್ಟಿಯಿಂದ ತಾವು ಕರಾವಳಿಯ ಪ್ರದೇಶಗಳಲ್ಲಿ ಇದರ ರಕ್ಷಣೆಗಾಗಿ ಯಾವ ರೀತಿಯ ವ್ಯವಸ್ಥೆಯನ್ನು ಮಾಡಿದ್ದೀರೆಂಬುದು ನನಗೆ ಇನ್ನೂ ಅರ್ಥವಾಗಿಲ್ಲ. ಏಕೆಂದರೆ ನನಗೆ ತಿಳಿದ ಮಟ್ಟಿಗೆ ಪರ್ಷಿಯನ್ ಮೊದಲಾದ ದೇಶಗಳಿಗೆ ನಮ್ಮಿಂದ ಕಲ್ಲುಗಳನ್ನೂ ಕೂಡ ತೆಗೆದುಕೊಂಡು ಹೋಗುತ್ತಿದ್ದಾರೆ. ಇದು ಮಾನ್ಯ ಸಚಿವರಾದ ರೋಡ್ರಿಗ್ಸ್‌ರವರಿಗೂ ಗೊತ್ತಿರಬಹುದು. ಮಂಗಳೂರು ಬಂದರ್‌ನಿಂದ ೪-೫ ಸಾವಿರ ರೂಪಾಯಿಗಳನ್ನು ಕೊಟ್ಟು ನಮ್ಮಂತ

ಕಲ್ಲುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆಂದ ಮೇಲೆ ಗಂಧದ ಕಟ್ಟಿಗೆಗೆ ಎಷ್ಟು ಬೆಲೆಯನ್ನು ಕೊಟ್ಟು ತೆಗೆದುಕೊಂಡು ಹೋಗಬಹುದೆಂಬುದನ್ನು ತಾವೇ ಲೆಕ್ಕಾಚಾರ ಮಾಡಿ ನೋಡಿದರೆ ತಮಗೆ ಸ್ಪಷ್ಟವಾಗುತ್ತದೆ. ಈ ರೀತಿ ಅರಣ್ಯ ಸಂಪತ್ತು ನಾಶವಾಗುವುದಾದರೆ ... ಇದರ ವಿರುದ್ಧ ತಾವು ಉಗ್ರಕ್ರಮ ತೆಗೆದುಕೊಳ್ಳಬೇಕು. ಅವರು ಯಾರೇ ಆಗಿರಲಿ ಕಾನೂನಿನ ಚೌಕಟ್ಟಿನಲ್ಲಿ ಅವರ ಮೇಲೆ ಉಗ್ರ ಕ್ರಮವನ್ನು ಯಾವ ರೀತಿ ತೆಗೆದುಕೊಳ್ಳುತ್ತೀರೆಂಬ ಬಗ್ಗೆ ತಮ್ಮಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕರಾವಳಿಯ ಉದ್ದಕ್ಕೂ ಸುಮಾರು ೧೦೦-೧೨೦ ಮೈಲಿಗಳವರೆಗೆ ತಾವು ಕಾರಿನಲ್ಲಿ ಹೋದರೆ ಪೂರ್ತಿ ಇಳಿಜಾರು ಪ್ರದೇಶ ಇರುವುದು ತಮಗೆ ಕಾಣುತ್ತದೆ. ಆ ಒಂದು ಇಳಿಜಾರು ಪ್ರದೇಶದಲ್ಲಿ ಒಂದು ಇಂಚು ಪ್ರದೇಶವನ್ನು ಕೊಡುವುದಿಲ್ಲ ಎಂಬು ದಾಗಿ ತಮ್ಮ ಇಲಾಖೆ ಆದೇಶವನ್ನು ನೀಡಿದೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ ಗುಜರಾತಿನಲ್ಲಿ ಬಲ್ಸಾರ್ ಎಂಬಲ್ಲಿ ನಮ್ಮಂತಹ ಹವಾಗುಣ ಅಲ್ಲೂ ಇದೆ. ಅಲ್ಲಿ ೨ ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿ, ಮ್ಯಾಂಗೋ ಪಲ್ಪನ್ನು ಪರದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಗುಜರಾತಿ ನಲ್ಲಿರುವ ಬಲ್ಸಾರ್ ಎಂಬಲ್ಲಿ ಈ ಒಂದು ಅನುಕೂಲ ಸಾಧ್ಯವಾಗುವುದಾದರೆ, ಕರಾವಳಿ ಜಿಲ್ಲೆಗಳಲ್ಲಿ ಏಕೆ ಇದು ಸಾಧ್ಯವಾಗಬಾರದು? ಇದನ್ನು ಗಾಳಿ, ಬಿಸಿಲಿಗೆ ಬಿಟ್ಟುಬಿಟ್ಟರೂ ಕೂಡ ಬೆಳೆ ಬಹಳ ಚೆನ್ನಾಗಿ ಆಗುತ್ತದೆ. ಸಾಗುವಳಿಗೆ ಯೋಗ್ಯವಾದ ಭೂಮಿ ಎಲ್ಲೇ ಇದ್ದರೂ ಕೂಡ ಅದನ್ನು ರೈತರ ಅನುಕೂಲ ಕ್ಕಾಗಿ ತಾವು ಅದನ್ನು ಬಿಟ್ಟುಕೊಡಬೇಕು ಎಂಬುದಾಗಿ ತಮ್ಮಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡು ತ್ತೇನೆ. ತಾವು ಎಷ್ಟೋ ಸಂದರ್ಭದಲ್ಲಿ ಇಲಾಖೆಗೆ ಬರುವಂತಹ ಆಧಾಯದ ಕಡೆಗೆ ಗಮನವನ್ನು ತಮ್ಮ ಇಲಾಖೆಯವರು ಕೊಡುತ್ತಾರೆ ಹೊರತು, ಸಾಮಾಜಿಕ ಪಕ್ಷದ ಕಡೆಗೆ ತಮ್ಮ ಗಮನವನ್ನು ಹರಿಸಿದಂತೆ ಕಾಣುತ್ತಿಲ್ಲ. ೧೯೭೭ ರ ಅಂದಾಜು ಸಮಿತಿಯವರು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಯೋಜನೆಗೆ ಅನುಮತಿಯನ್ನು ಕೊಡುವ ಸಂದರ್ಭದಲ್ಲಿ ಅದಕ್ಕೆ ಬದಲಾಗಿ ಅಷ್ಟೇ ಮೊತ್ತದ ಅರಣ್ಯ ವನ್ನು ಬೆಳೆಸಬೇಕು ಎಂಬುದಾಗಿ ಹೇಳುವಂತಹ ಒಂದು ವಾದವನ್ನು ತಾವು ಎಷ್ಟರಮಟ್ಟಿಗೆ ಕಟ್ಟುನಿಟ್ಟಾಗಿ ಅನುಸರಿಸುತ್ತಾ ಬಂದಿದ್ದೀರಿ ಎಂಬುದು ಸಂಶಯಾಸ್ಪದವಾದುದಾಗಿದೆ. ಇದರ ಬಗ್ಗೆ ತಮ್ಮ ಅನುಗ್ರಹ ಇದೆ. ಆ ಅನುಗ್ರಹ ಯಾರ ಮೇಲೆ ಇದೆ ಎಂದರೆ ಬಿರ್ಲಾ ನಂತರ ನಮ್ಮ ದಾಂಡೇಲಿಯಲ್ಲಿರುವ ಕಾಗದದ ಕಾರ್ಖಾನೆ ಇನ್ನಿತರ ಕಾರ್ಖಾನೆಗಳಿಗೆ ಕಚ್ಚಾ ಮಾಲುಗಳನ್ನು ಪೂರೈಸುವ ದೃಷ್ಟಿಯಿಂದ ತಾವು ಎಷ್ಟರ ಮಟ್ಟಿಗೆ ಸಹಕಾರದ ಅಸ್ತ್ರವನ್ನು ನೀಡುತ್ತಿದ್ದೀರೋ, ಅಷ್ಟರ ಮಟ್ಟಿಗೆ ಉರುವಲು ಕಟ್ಟಿಗೆಯನ್ನು ಪೂರೈಸುವ ದೃಷ್ಟಿಯಲ್ಲಿ ಯಾವ ರೀತಿಯ ಕ್ರಮವನ್ನು ಕೈಗೊಂಡಿದ್ದೀರೆಂಬುದನ್ನು ತಾವು ಸ್ಪಷ್ಟಪಡಿಸ ಬೇಕಾಗುತ್ತದೆ. ಇದೇ ರೀತಿಯಲ್ಲಿ ಮನೆಕಟ್ಟುವ ಕಟ್ಟಿಗೆಯ ಬೆಲೆ ತಮಗೆ ಗೊತ್ತಿರುವಂತೆ ಮುಗಿಲು ಮುಟ್ಟಿದೆ. ಅದೇ ರೀತಿಯಲ್ಲಿ ಉರುವಲು ಕಟ್ಟಿಗೆ ಕೂಡ ಸಿಗುವಂತಹ ಪರಿಸ್ಥಿತಿ ಕಾಣುತ್ತಿಲ್ಲ. ಈ ಒಂದು ದೃಷ್ಟಿಯಿಂದ ಯಾವುದೇ ಒಂದು ಯೋಜನೆ ಮಾಡಬೇಕಾದರೆ ಇದನ್ನೆಲ್ಲಾ ಗಮನದಲ್ಲಿಟ್ಟು ಕೊಂಡು ವ್ಯವಸ್ಥಿತವಾದ ಅರಣ್ಯವನ್ನು ಬೆಳೆಸುವುದರ ಜೊತೆಗೆ ನಾನು ಮೊದಲೇ ಹೇಳಿದಂತೆ ನಮ್ಮ ನಾಗರೀಕತೆಯ ತಾತ್ವಿಕ ದೃಷ್ಟಿಯಿಂದ ಅರಣ್ಯವನ್ನು ಸುವ್ಯವಸ್ಥಿತವಾಗಿ ಬೆಳೆಸುವ ದೃಷ್ಟಿಯಿಂದ ಯಾವುದಾದರೊಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಮತ್ತೆ ಉತ್ತರ ಕನ್ನಡ, ಶಿವಮೊಗ್ಗ ಇಂತಹ ಮಲೆನಾಡು ಜಿಲ್ಲೆಗಳಲ್ಲಿ ಸಾಗುವಳಿ ಮಾಡುವುದಕ್ಕಾಗಿ ಅತಿಕ್ರಮಣ ಮಾಡಿದಂತಹ ಜಮೀನು ಏನಿದೆ ಅದನ್ನು ರೆಗ್ಯುಲರೈಸ್ ಮಾಡಬೇಕೆಂದು ನಾನು ಕೇಳುತ್ತಲೇ ಬಂದಿದ್ದೇನೆ. ಆದರೆ ಇದು ಇಲ್ಲಿಯವರೆಗೂ ಅರಣ್ಯ ರೋಧನವಾಗಿದೆ. ತಾವು ಕೂಡ ಇದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿ ದ್ದೀರಿ. ಆದರೆ ಇನ್ನೂ ವರೆಗೆ ಅವರಿಗೆ ಅದು ಸಿಕ್ಕಿಲ್ಲ. ಹಿಂದೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯ ಸಿರಸಿಗೆ ಬಂದಾಗ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದರು. ಯಾರು ಅರಣ್ಯ ಜಮೀನನ್ನು ಸಾಗುವಳಿ ಮಾಡುವುದಕ್ಕೋಸ್ಕರ ಅತಿಕ್ರಮಣ ಮಾಡಿದ್ದಾರೋ ಅಂತಹವರಿಗೇ ಆ ಜಮೀನನ್ನು ಕೊಟ್ಟು ಬಿಡುತ್ತೇವೆನ್ನುವ ಮಾತನ್ನು ಸ್ಪಷ್ಟವಾಗಿ ಅವರು ಹೇಳಿದ್ದರು. ಇದನ್ನು ತೀವ್ರ ಗತಿಯಿಂದ ಪರಿಶೀಲಿಸು ತ್ತೇವೆ ಎನ್ನುವ ಮಾತನ್ನೂ ಕೂಡ ಅಂದು ಅವರು ಹೇಳಿದರು. ಈಗಲಾದರೂ ತಾವು ಇದರ ಬಗ್ಗೆ ಸೂಕ್ತ ಗಮನ ಹರಿಸಿ ತಕ್ಕ ವ್ಯವಸ್ಥೆಯನ್ನು ಮಾಡುತ್ತೀರೆಂದು ಭಾವಿಸಿ, ತಮ್ಮ ಈ ಬೇಡಿಕೆಗೆ ನನ್ನ ಪೂರ್ಣ ಬೆಂಬಲವನ್ನು ಕೊಟ್ಟು, ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ರಾಜಗೋಪಾಲ್ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಆಹಾರ ಮತ್ತು ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಗಳನ್ನು ಏನಿಟ್ಟಿದ್ದಾರೆ ಅದರ ಮೇಲೆ ಈಗಾಗಲೇ ಶ್ರೀಯುತ ಗಂಗಾಧರನ್‌ರವರು ವಿಪುಲವಾಗಿ ಚರ್ಚೆ ಮಾಡಿ ಎಲ್ಲ ವಿಚಾರಗಳನ್ನೂ ಹೇಳಿದ್ದಾರೆ. ಅದನ್ನು ನಾನೂ ಕೂಡ ಅನುಮೋದಿಸುತ್ತೇನೆ. ದೇಶದ ಬೆನ್ನುಲುಬಾದ ರೈತನಿಗೆ ಈ ಬೇಡಿಕೆಗಳಲ್ಲಿ ಯಾವ ಒಂದು ಅನುಕೂಲವೂ ಇಲ್ಲ; ಎಂಬುದಾಗಿ ಹೇಳಿದರೆ, ಇದು ನಿಜಕ್ಕೂ ಶೋಚನೀಯವಾದ ಸಂಗತಿ. ರೈತನ ಅಧೋಗತಿಗೆ ಸರ್ಕಾರದ ನೀತಿ-ನಿಯಮಗಳೇ ಕಾರಣ ಎಂಬುದಾಗಿ ನಾನಾದರೂ ಭಾವಿಸುತ್ತೇನೆ. ರೈತನು ಬೆಳೆದಂತಹ ಎಲ್ಲಾ ವಸ್ತುಗಳಿಗೆ ಧಾರಣೆಗಳು ಕಡಿಮೆಯಾಗುತ್ತಿವೆ. ಆದರೆ ಅದೇ ರೈತನು ತನ್ನ ವ್ಯವಸಾಯಕ್ಕೆ ಅನುಕೂಲವಾದ ಉಪಕರಣಗಳನ್ನು ಕೊಂಡು ಕೊಳ್ಳಬೇಕಾದರೆ ಅವುಗಳು ಬೆಲೆ ಅತಿ ವೇಗದಲ್ಲಿ ಹೆಚ್ಚಿನ ಬೆಲೆಗೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೂ ಬಂದಿದೆ. ಮತ್ತೆ ಜನತೆಯು ಗಮನಕ್ಕೂ ಕೂಡ ಈ ವಿಷಯ ಬಂದಿದೆ. ಆದರೆ ಇದರ ಬಗ್ಗೆ ಸರ್ಕಾರ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಮತ್ತೆ ರೈತನು ಬೆಳೆಯುವಂತಹ ಕಬ್ಬು, ಬತ್ತ, ರಾಗಿ, ಬಾಳೆ ಮತ್ತು ತರಕಾರಿಗಳಿಗೂ ಕೂಡ ಸರಿಯಾದ ಮಾರುಕಟ್ಟೆ ವ್ಯವಸ್ಥೆಯನ್ನು ಏರ್ಪಡಿಸುವುದಕ್ಕೆ ಸರ್ಕಾರ ವಿಫಲವಾಗಿದೆ ಎಂಬುದಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೆ ಸರ್ಕಾರದಿಂದ ತೆಗೆದುಕೊಂಡಂತಹ ಸಾಲಗಳನ್ನು ಮರುಪಾವತಿ ಮಾಡುವುದಕ್ಕೂ ಈ ಒಂದು ದೃಷ್ಟಿಯಲ್ಲಿ ತೊಂದರೆಯಾಗಿದೆ. ಸಾಲ ಮರುಪಾವತಿ ಮಾಡುವುದಿರಲ್ಲಿ, ಆತನು ತೆಗೆದುಕೊಂಡಿರುವ ಹಣಕ್ಕೆ ಬಡ್ಡಿ ಕಟ್ಟುವುದಕ್ಕೂ ಕೂಡ ಸಾಧ್ಯವಾಗದೇ ಇರುವಂತಹ ರೀತಿಯಲ್ಲಿ ರೈತನು ಜೀವನ ಸಾಗಿಸುತ್ತಿದ್ದಾನೆ. ಮತ್ತೆ ಭೂಮಿಯನ್ನಾದರೂ ಮಾರಿ ಸಾಲವನ್ನು ತೀರಿಸೋಣವೆಂದರೆ ಸರ್ಕಾರದ ನೀತಿಯೇ ಅದಕ್ಕೂ ಅಡ್ಡಿಯಾಗಿದೆ ಎಂಬುದಾಗಿ ಹೇಳಿದಾರೆ ತಪ್ಪಾಗಲಾರದು. ಬಹುಶಃ ಇಲ್ಲಿರುವಂತಹ ಶಾಸಕರೆಲ್ಲರೂ ೧೦೦ಕ್ಕೆ ೮೦ ಭಾಗ ರೈತನ ಮಕ್ಕಳೇ ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ರೈತನ ನಿತ್ಯ ಬಳಕೆಯ ವಸ್ತುಗಳು ಆತನಿಗೆ ನೇರವಾಗಿ ಮುಟ್ಟುತ್ತಿಲ್ಲ. ಸೀಮೆ ಎಣ್ಣೆ ಅಭಾವ ಹೇಳತೀರದಾಗಿದೆ. ಸರ್ಕಾರ ಸೀಮೆಎಣ್ಣೆಯನ್ನು ಸಹಕಾರಿ ಸಂಘಗಳ ಮೂಲಕ ಮಾರಾಟ ಮಾಡಬೇಕೆಂದು ಆದೇಶವನ್ನು ನೀಡಿದೆ. ಆದರೆ ಕೆಲವು ಸಹಕಾರಿ ಸಂಘಗಳ ಅಧಿಕಾರ ವರ್ಗದವರು ಸೀಮೆಎಣ್ಣೆಯನ್ನು ತೆಗೆದುಕೊಂಡು ಅದನ್ನು ಅಲ್ಲಿಯೇ ಮಾರಿ ಊರಿಗೆ ಬಂದಾಗ ಸೀಮೆ ಎಣ್ಣೆಯೇ ಬರಲಿಲ್ಲ ಎಂಬುದಾಗಿ ಹೇಳುವಂತಹ ಪರಿಸ್ಥಿತಿ ನಮ್ಮಲ್ಲಿದೆ.

ಇನ್ನು ಮಾರ್ಕೆಟ್ ವಿಚಾರದ ಬಗ್ಗೆ ಹೇಳುವುದಾದರೆ ರೈತನಿಗೆ ಯಾವುದರಲ್ಲೂ ಸಹ ಸರಿಯಾದ ಬೆಲೆ ಸಿಕ್ಕುತ್ತಾ ಇಲ್ಲ. ಕಳೆದ ವರ್ಷ ಮೇಕೆ, ಕುರಿ ಮಾಂಸ ೧೦ ರೂಪಾಯಿ ಇದ್ದುದು ಈವೊತ್ತು ೧೮ಕ್ಕೆ ಹೋಗಿದೆ. ಈವೊತ್ತಿನ ಆಹಾರ ಪದಾರ್ಥಗಳ ಬೆಲೆಗಳ ಧಾರಣೆ ಹೆಚ್ಚಿದ್ದರೂ ಸಹ ರೈತನಿಗೆ, ಬಡವನಿಗೆ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಯಾವ ವಿಧವಾದಂಥಾ ಪ್ರಯೋಜನವಾಗಲಿ ಅಥವಾ ಅನುಕೂಲವಾಗಲಿ ಆಗಿಲ್ಲ ಎಂದು ಹೇಳುತ್ತೇನೆ.

೩-೦೦ ಪಿ. ಎಂ.

ಇನ್ನು ಅರಣ್ಯ ಇಲಾಖೆಯ ವಿಚಾರ ಹೇಳುವುದಾದರೆ ಈ ಕನ್‌ಸರ್ವೇಟರ್ ಅವರ ಒಂದು ಅವಾಂತರದಿಂದ ಕೆಲವೊಂದು ದುರ್ಘಟನೆಗಳು ಆಗುತ್ತಾ ಇದೆ.

ಶ್ರೀ ಜಿ. ರಾಮೇಗೌಡ.—ಮಾನ್ಯ ಸದಸ್ಯರು ಆಹಾರ ಪದಾರ್ಥಗಳ ಬೆಲೆ ಜಾಸ್ತಿಯಾಗಿದೆ ಎಂದು ಹೇಳುತ್ತಾರೋ ಅಥವಾ ಕಡಿಮೆಯಾಗಿದೆ ಎಂದು ಹೇಳುತ್ತಾರೋ?

ಶ್ರೀ ಕೆ. ಆರ್. ರಾಜಗೋಪಾಲ್.—ನಾನು ಹೇಳುವುದು ಏನೆಂದರೆ ಆಹಾರ ಪದಾರ್ಥಗಳ ಬೆಲೆ ಬಗ್ಗೆ ರೈತನಿಗೆ ಸರಿಯಾದಂಥಾ ಒಂದು ವ್ಯವಸ್ಥೆ ಮುಟ್ಟಿಲ್ಲ. ಇದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳುತ್ತೇನೆ. ರೈತನಿಗೆ ನೇರವಾಗಿ ಏನು ಒಂದು ಪ್ರಯೋಜನ ಮುಟ್ಟಬೇಕೋ ಅದು ಮೂರನೇಯವನಿಗೆ ಹೋಗುತ್ತಾ ಇದೆ. ಆ ರೈತನಿಗೆ ಸಿಕ್ಕುವ ಪ್ರಯೋಜನ ನೇರವಾಗಿ ಅವನಿಗೇನೇ ಮುಟ್ಟುವಂತೆ ವ್ಯವಸ್ಥೆ ಮಾಡಬೇಕು ಎಂದು ಕೇಳುತ್ತೇನೆ.

ಇನ್ನು ನಾನು ಮೊದಲೇ ಹೇಳಿದ ಹಾಗೆ ಈ ಅರಣ್ಯ ಇಲಾಖೆಯಲ್ಲಿರುವ ಈ ಕನ್‌ಸರ್ವೇಟರ್ ಅವರ ಅವಾಂತರದಿಂದ ಅರಣ್ಯ ಇಲಾಖೆ ನಾಶವಾಗುತ್ತಿದೆ ವಿನಾ ಇದರಿಂದ ನಮಗೆ ಏನು ಉತ್ಪತ್ತಿ ಬರಬೇಕಾ

ಗಿತ್ತೋ ಅನ್ನ ಬಾರದೇ ಹಾಗೆಯೇ ನಿಂತಿದೆ. ಮತ್ತು ನಮ್ಮ ಮೈಸೂರು ಜೂ ಗಾರ್ಡನ್ ಅಂತರ ರಾಷ್ಟ್ರೀಯವಾದ ಒಂದು ಖ್ಯಾತಿಗೆ ಒಳಪಡಿಸಿ ಅದನ್ನು ಇನ್ನೂ ಉತ್ತಮ ಪಡಿಸಬೇಕು ಅನ್ನುವ ಬಗ್ಗೆ ಏನೋ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರೋ ಅದು ಬಹಳ ಸಂತೋಷ. ಆದರೆ ಕಳೆದ ೨-೩ ವರ್ಷ ದಿಂದ ಈ ಕನ್‌ಸರ್ವೇಟರ್ ಅವರ ಒಂದು ಅವಾಂತರದಿಂದ ಇದನ್ನು ಎಷ್ಟು ಮಟ್ಟಿಗೆ ಅಧೋಗತಿಗೆ ಇಳಿಸಿದ್ದೀರಿ ಎಂದರೆ ಈ ಬಗ್ಗೆ ಹೋದ ವರ್ಷವೂ ಕೂಡ ಬಹಳ ಗಲಾಟೆ ಮಾಡಿದ್ದೇವೆ. ಈವೊತ್ತು ಮಾನ್ಯ ಅರಣ್ಯ ಮಂತ್ರಿಗಳು ಬಹಳ ದೊಡ್ಡ ಮನಸ್ಸು ಮಾಡಿ ಒಳ್ಳೆಯ ಅಧಿಕಾರಿಯನ್ನೇನೋ ಹಾಕಿದ್ದೀರಿ ಆದರೆ ಅವರಿಗೆ ಸರಿಯಾದ ಒಂದು ಅಧಿಕಾರವನ್ನು ಕೊಡದೇ ಹಾಗೆಯೇ ಹಾಕಿದ್ದೀರಿ. ಅಂದರೆ ಅವರಿಗೆ ಈ ಬಗ್ಗೆ ಯಾವ ಅಧಿಕಾರವನ್ನೂ ಸಹ ಕೊಟ್ಟಿಲ್ಲ. ಅವರಿಗೆ ಅಧಿಕಾರ ಇಲ್ಲದೇ ಇದ್ದರೂ ಕೂಡ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ.

ಇನ್ನು ಈ ವಿಚಾರದಲ್ಲಿ ಹೇಳುವುದಾದರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೂ ಮತ್ತು ಜೂ ಇಲಾಖೆಗೂ ಹೊಂದಾಣಿಕೆ ಇರಬೇಕು ಅದು ಬೇರೆ ಇದು ಬೇರೆ ಅಂತ ಇರಬಾರದು. ಮೈಸೂರು ಜೂ ಗಾರ್ಡನ್ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವುದಷ್ಟೇ ಅಲ್ಲದೆ ಇದನ್ನು ಇನ್ನೂ ಅಭಿವೃದ್ಧಿ ಪಡಿಸುವುದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಗೊತ್ತಾಗಿದೆ. ಮೈಸೂರು ಜೂ ಗಾರ್ಡನ್ ಇತಿಹಾಸ ವನ್ನು ತಮ್ಮ ಅವಧಿಯಲ್ಲೇ ಇನ್ನು ಉತ್ತಮವಾದ ರೀತಿಯಲ್ಲಿ ಆಗುವಂತೆ ಮಾಡಬೇಕು ಎಂದು ಕೇಳು ತ್ತೇನೆ. ಅದಕ್ಕಾಗಿ ತಾವು ಇದಕ್ಕೊಂದು ಸಪರೇಟ್ ಡೈರೆಕ್ಟೊರೇಟ್ ಮಾಡಬೇಕು ಎಂದು ಕೇಳಿ ಕೊಳ್ಳುತ್ತೇನೆ. ಮತ್ತು ರೈತರ ಒಂದ ಆಸೆ ಆಕಾಂಕ್ಷೆಗಳು ಏನು ಇವೆಯೋ ಅದನ್ನು ಸಹ ಮನಸ್ಸಿ ನಲ್ಲಿಟ್ಟುಕೊಂಡು ಅವನ ಪರಿಸ್ಥಿತಿಯನ್ನೂ ಸಹ ಉತ್ತಮ ಪಡಿಸುವಂತೆ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಕೆ ಸುಬ್ಬಯ್ಯ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿನ ಆಹಾರ ಸರಬರಾಜು ಮತ್ತು ಅರಣ್ಯಗಳ ಬೇಡಿಕೆಯನ್ನು ಮಾನ್ಯ ಮಂತ್ರಿಗಳು ಏನು ಮಂಡಿಸಿದ್ದಾರೋ ಅದನ್ನು ಸ್ವಾಗತಿಸಿ ಅದರ ಬಗ್ಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

ಮೊದಲನೆಯದಾಗಿ ಹೇಳುವುದಾದರೆ ಇವರ ಇಲಾಖೆ ಸಿಬ್ಬಂದಿ ಏನು ಇದ್ದಾರೋ ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಏನೋ ಹೆಚ್ಚಿನ ಭಿನ್ನಾಭಿ ಪ್ರಾಯ ಇಲ್ಲ. ಈ ಆಹಾರದ ವಿಷಯದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಒಂದು ಮಾತು ಹೇಳ ಬೇಕಾದರೆ ನಾವು ಪ್ರತಿನಿತ್ಯವೂ ಬಳಸುವಂಥಾ ಸೀಮೆ ಎಣ್ಣೆ ಏನು ಇದೆ ಅದರ ಕೊರತೆ ಬಹಳವಾಗಿ ಇದೆ ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಇದರ ಒಂದು ವಿವರಣೆ ಹೇಳಬೇಕಾದರೆ ಎರಡು ವಾರಕ್ಕೊಂದು ಸಾರಿಯೋ ಅಥವಾ ಮೂರು ವಾರಕ್ಕೊಂದು ಸಾರಿಯೋ ಆಗುತ್ತಿದೆ ಜೊತೆಗೆ ಈ ಪೆಟ್ರೋಲ್‌ನ ಒಂದು ಕೊರತೆಯಿಂದ ಇದರ ಸರಬರಾಜು ಕಡಿಮೆಯಾಗಿದೆ. ಆದ್ದರಿಂದ ಇವರು ವಿತರಣೆ ಮಾಡ ತಕ್ಕಂಥಾ ಸೀಮೆಯೆಣ್ಣೆ ಕೇವಲ ೩-೪ ದಿನಗಳು ಮಾತ್ರ ಉಪಯೋಗವಾಗಿ ಇನ್ನು ಬಾಕಿ ದಿನಗಳಿಗೆ ಸೀಮೆ ಯೆಣ್ಣೆ ಇಲ್ಲದೆ ಆ ಜನ ಬಹಳ ಬಳಲುತ್ತಾ ಇದ್ದಾರೆ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ನನಗೂ ಕೂಡ ಈ ಸೀಮೆಯೆಣ್ಣೆಯ ಕೊರತೆ ಇದೆ. ಒಂದು ವಾರದಲ್ಲಿ ೫-೬ ದಿವಸ ಕ್ಯಾಂಡಲ್‌ಗಳನ್ನು ತಂದು ಉಪಯೋಗಿಸುತ್ತಿದ್ದೇನೆ. ಇದಕ್ಕೆ ತಿಂಗಳಿಗೆ ಸುಮಾರು ೨೫ ರೂಪಾಯಿ ಖರ್ಚಾಗುತ್ತಾ ಇದೆ. ಇಷ್ಟೇ ಅಲ್ಲ ವಾಹನಗಳನ್ನು ಓಡಿಸುವವರಿಗೂ ಕೂಡ ಪೆಟ್ರೋಲಿನ ಒಂದು ಕೊರತೆ ಇರುವುದರಿಂದ ದಿನ ನಿತ್ಯದ ಬೇಕಿರು ಸಾಮಾನುಗಳ ಸಾಗಣೆಗೆ ತುಂಬಾ ತೊಂದರೆಯಾಗಿದೆ ತಮಗೆ ಒಂದು ಉದಾಹರಣೆ ಹೇಳಬೇಕಾದರೆ ನಮ್ಮ ಕಡೆ ಕೆಲವರು ಕಾಫಿ ಕುಯಿದುದನ್ನು ಹಾಗೆಯೇ ಒಂದು ಗಡೆ ಹಾಕಿ ಇಟ್ಟು ಕೊಂಡಿದ್ದಾರೆ. ಮತ್ತೆ ಕೆಲವರು ಡಿಪೋಗಳಿಗೆ ಏನು ಸಾಗಿಸಿದ್ದೀರೋ ಅಲ್ಲಿಂದ ವಿತರಣೆ ಮಾಡಲು ಈ ಪೆಟ್ರೋಲ್‌ನ ಕೊರತೆಯಿಂದ ವಾಹನಗಳನ್ನು ಓಡಿಸದೇ ಹಾಗೆಯೇ ಇಟ್ಟುಕೊಂಡಿದ್ದಾರೆ ಈ ಒಂದು ಕೊರತೆಯನ್ನು ನಿವಾರಿಸಲು ಮಾನ್ಯ ಮಂತ್ರಿಗಳು ಹೆಚ್ಚಿನ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಅರಣ್ಯ ಇಲಾಖೆ ಬಗ್ಗೆ ಹೇಳಬೇಕಾದರೆ ಈ ಇಲಾಖೆಯ ಸಿಬ್ಬಂದಿಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಬಹಳ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಇದೇ ಸಂದರ್ಭದಲ್ಲಿ ಇನು

ಕೆಲವು ಕೊರತೆಗಳು ಇವೆ. ಮುಖ್ಯವಾದುದೆಂದರೆ ಸಸಿಗಳ ಬಗ್ಗೆ ಕೊರತೆ ಇದೆ. ಅರಣ್ಯ ಇಲಾಖೆಯವರು ಇದನ್ನು ಸರಿಯಾಗಿ ಸಪ್ಲೈ ಮಾಡುತ್ತಾ ಇಲ್ಲ. ರೈತರಿಗೆ ಎಷ್ಟು ಸಸಿಗಳು ಬೇಕೋ ಅಷ್ಟು ಸರಿಯಾಗಿ ಸಿಗುತ್ತಾ ಇಲ್ಲ. ಈ ಬಗ್ಗೆ ಇನ್ನೂ ಒಂದು ಪಟ್ಟಿ ಮುಂದೆ ಇಟ್ಟು ಹೇಳಬೇಕಾದರೆ ಒಂದು ಕಡೆ ಸರಿಯಾಗಿ ಸಸಿಗಳು ಸಿಗುತ್ತಾ ಇಲ್ಲ. ಇನ್ನೊಂದು ಕಡೆ ಸೊಪ್ಪು ಸೌದೆಗಳು ಏನು ಉಪಯೋಗಕ್ಕೆ ಬರಬೇಕೋ ಅದು ಸರಿಯಾಗಿ ಉಪಯೋಗವಾಗುತ್ತಾ ಇಲ್ಲಾ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಕಳೆದ ವರ್ಷ ಇದನ್ನು ಒಂದು ಗಾಡಿಗೆ ಇಷ್ಟು ರೇಟ್ ಅಂತ ನಿಗದಿ ಮಾಡಿದ್ದರು. ಆದರೂ ಕೂಡ ಅದು ಸರಿಯಾಗಿ ದೊರಕದೇ ಇದ್ದುದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ ಎಂದು ಹೇಳುತ್ತೇನೆ.

ಇನ್ನು ನಮ್ಮ ಕಡೆಯಲ್ಲಿ ನೂರಕಲ್ ಸಾಮಿಲ್ ಅಂತ ಇದೆ. ಅದರ ಒಂದು ಆಡಳಿತ ಅಷ್ಟು ಸರಿಯಾಗಿಲ್ಲಾ. ಬಹಳ ಅತೃಪ್ತಿಕರವಾಗಿದೆ. ಅಲ್ಲಿ ಮರಗಳನ್ನು ಕೊಳ್ಳುವ ಬದಲು ಕಬ್ಬಿಣವನ್ನೇ ತೆಗೆದುಕೊಂಡರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಏಕೆಂದರೆ ಆ ಜಂಗಲ್ ವುಡ್‌ನ ಬೆಲೆ ಬಹಳ ವಿಪರೀತವಾಗಿ ಏರಿಬಿಟ್ಟಿದೆ. ಒಂದು ಕ್ಯೂಬಿಕ್ ಫೀಟ್‌ಗೆ ೧೦೦೦ ರೂಪಾಯಿ ಆಗುತ್ತದೆ. ಒಬ್ಬ ಗರೀಬ ಮನುಷ್ಯನೂ ಕೂಡ ಒಂದು ಸಣ್ಣ ಮನೆ ಕಟ್ಟಿಸಬೇಕಾದರೆ ೨೫೦೦ ಕ್ಯೂಬಿಕ್ ಮೀಟರ್ಸ್ ಮರ ಬೇಕಾಗುತ್ತದೆ. ಅವನು ಇದಕ್ಕೆ ಇಷ್ಟೊಂದು ದುಡ್ಡು ಕಟ್ಟಿ ಮನೆ ಎಲ್ಲಿ ಕಟ್ಟಿಸುವುದಕ್ಕಾಗುತ್ತದೆ. ಇದರಿಂದ ಬಹಳ ತೊಂದರೆಯಾಗಿದೆ. ಈ ಒಂದು ರೀತಿಯಿಂದ ಅಲ್ಲಿ ಸಾಮಿಲ್ ಇದ್ದರೂ ಕೂಡ ಯಾರಿಗೂ ಪ್ರಯೋಜನವಿಲ್ಲಾ. ಇನ್ನು ಯಾರಿಗೆ ಪ್ರಯೋಜನವಾಗುತ್ತದೆ ಎಂದರೆ ಸರ್ಕಾರೀ ಆಫೀಸ್‌ಗಳಿಗೆ ಫರ್ನಿಚರ್ ಮುಂತಾದುವನ್ನು ಮಾಡುವ ಸಾಧ್ಯತೆ ಇರುವುದರಿಂದ ಅದನ್ನು ಮಾಡಿಕೊಟ್ಟು ಅದರ ಪ್ರಯೋಜನ ಪಡೆದುಕೊಳ್ಳಬಹುದು. ಇದರಿಂದ ರೈತನಿಗೆ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ಹೇಳುತ್ತೇನೆ. ಇದೇ ಸಾಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ನೌಕರ ಮರಣ ಹೊಂದಿದ. ಅವನ ಕುಟುಂಬದ ಸ್ಥಿತಿ ನೋಡಿದರೆ ಬಹಳ ಚಿಂತಾಜನಕವಾಗಿದೆ. ಅವರ ಕುಟುಂಬದವರು ಸರಿಯಾಗಿ ಜೀವನವನ್ನು ಸಾಗಿಸದೇ ಬಹಳ ತೊಂದರೆ ಪಡುತ್ತಿದ್ದಾರೆ ಅನ್ನುವುದನ್ನು ವ್ಯಕ್ತಪಡಿಸುತ್ತಿದ್ದಾರೆ. ಆದುದರಿಂದ ತಾವು ಇದನ್ನು ಪರಿಶೀಲನೆ ಮಾಡಿ ಆ ನೊಂದ ಕುಟುಂಬದವರಿಗೆ ಸರಿಯಾದ ಒಂದು ನಿಧಿಯನ್ನು ಕೊಡಲಿಕ್ಕೆ ಏರ್ಪಾಡು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಈ ಫಾರೆಸ್ಟ್ ಇಂಡಸ್ಟ್ರೀಸ್‌ನ ಒಂದು ಅಧೀನದಲ್ಲಿರತಕ್ಕಂಥಾ ಸೌದೆ ಮಾರಾಟದ ಡಿಪೋ ಬೇರೆ ಕಡೆ ಏನು ಇದೆ. ಅಂತಹ ನಮ್ಮ ಕಡೆ ಇಲ್ಲ. ಹುಣಸೂರಿನಲ್ಲಿ ಮಾತ್ರ ಒಂದು ಇದೆ. ಒಂದು ವರ್ಷದ ಹಿಂದೆ ಬಾಳೆಕೊಪ್ಪ ಮತ್ತು ನಾಗರಹೊಳೆಯಲ್ಲಿ ಸೌದೆ ಡಿಪೋ ಮಾಡಬೇಕು ಎಂದು ಹೇಳಿಕೊಂಡಿದ್ದೆವು, ಆದಕ್ಕೆ ತಾವು ಅಪ್ಪಣೆಯನ್ನೂ ಸಹ ಕೊಡಿಸಿದಿರಿ ಆದರೆ ಅದು ಇದುವರೆಗೂ ಕೂಡ ಆ ಕಾರ್ಯಕ್ರಮ ಸರಿಯಾಗಿ ನಡೆದಿಲ್ಲಾ. ಹೆಚ್ಚು ಅರಣ್ಯ ಉತ್ಪತ್ತಿ ಮಾಡತಕ್ಕಂಥಾ ಈ ನಾಗರಹೊಳೆಯಲ್ಲಿನ ಪ್ರದೇಶದಲ್ಲಿ ಸೌದೆ ಇಲ್ಲ ಅಂತ ಹೇಳುವುದಾದರೆ ಇದು ಬಹಳ ನಾಚಿಕೆಗೇಡು ಪ್ರಸಂಗವಾಗುತ್ತದೆ. ಆದುದರಿಂದ ತಾವು ನಮ್ಮ ಕಡೆ ಇಲ್ಲಿಂದ ಹೆಚ್ಚು ಸೌದೆ ಸರಬರಾಜು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಗಿರಿಜನರ ಒಂದು ಅಭಿವೃದ್ಧಿಗಾಗಿ ೧೯೭೮-೭೯ನೇ ಸಾಲಿಗಾಗಿ ೩೧ ಲಕ್ಷ ರೂಪಾಯಿಯನ್ನೂ ಮಂಜೂರು ಮಾಡಿದ್ದೀರಿ. ಈ ವರ್ಷ ಇದಕ್ಕೆ ೪೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ. ಈ ವಿಷಯದಲ್ಲಿ ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಇಷ್ಟು ಹಣ ಮಂಜೂರು ಆಗಿದ್ದರೂ ಸಹ ಅವರ ಸ್ಥಿತಿ ಹಾಗೆಯೇ ಇದೆ. ಕಾರಣ ಏನೆಂದರೆ ಕಳೆದ ವರ್ಷ ನಮ್ಮ ಜಿಲ್ಲೆಗೆ ಈ ಬಗ್ಗೆ ಒಂದು ಲಕ್ಷ ರೂಪಾಯಿ ಹಣ ಮಂಜೂರು ಮಾಡಿದ್ದರಲ್ಲ ೫೭ ಸಾವಿರ ರೂಪಾಯಿ ಮಾತ್ರ ಖರ್ಚಾಗಿದೆ. ಬಾಕಿ ಹಣ ಖರ್ಚು ಮಾಡಲಿಲ್ಲಾ. ಅದು ಲ್ಯಾಪ್ಸ್ ಆಯಿತು. ಆದೇ ಹುಣಸೂರು ಡಿವಿಷನ್ನಿಂದ ಒಂದೂ ಪೈಸೇನೂ ಕೂಡ ಖರ್ಚು ಮಾಡಿಲ್ಲಾ. ಮತ್ತು ಇದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ನಮ್ಮ ಒಂದು ಗಿರಿಜನ ಕೇರಿಗೆ ರಸ್ತೆ ಮಾಡಿಸಬೇಕೆಂದು ಹೋದ ವರ್ಷ ಪಿಡಬ್ಲ್ಯೂಡಿ ೩ ಲಕ್ಷ ರೂಪಾಯಿ ಮಂಜೂರು ಮಾಡಿದ್ದರು. ಪಿ.ಡಬ್ಲ್ಯೂ.ಡಿ. ಇಲಾಖೆಯವರು ಆ ಕೆಲಸವನ್ನು ಮಾಡಿಸಲು ಹುಣಸೂರು ಅರಣ್ಯ ಅಧಿಕಾರಿ, ಅನುಮತಿ ಕೊಟ್ಟಿಲ್ಲ. ಆದುದರಿಂದ ಆ ಹಣ ಲ್ಯಾಪ್ಸ್ ಆಯಿತು. ಮೊನ್ನೆ ತಾನೆ ೧೩ನೇ ತಾರೀಖು ಏಪ್ರಿಲ್‌ನಲ್ಲಿ ಈ ಬಗ್ಗೆ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ಮಾಡಿದ ನಂತರ ಒಪ್ಪಿಸಲಾಗಿದೆ. ನಾವೇನೂ ಈ ರಸ್ತೆಯನ್ನು ಮಾಡಿಸಬೇಕು ಎಂದು ಹೊಸದಾಗಿ ಏನೂ ಕೇಳಿಲ್ಲ. ಹಿಂದಲೇ ಇರುವ ಈ ರಸ್ತೆಯನ್ನು ಉತ್ತಮವಾಗಿ ಮಾಡಿಕೊಡಲು ಹಣ ಮಂಜೂರಾದುದು. ಮೊದಲೇ

ಇದ್ದ ರಸ್ತೆಯನ್ನು ರೂಪಿತವನ್ನಾಗಿ ಮಾಡುವುದಕ್ಕೆ ತೊಂದರೆ ಏನು ಇದೆ ಎಂದು ನಾನು ಕೇಳುತ್ತೇನೆ. ಹೀಗೆ ಮಾಡಿದರೆ ಈ ಗಿರಿಜನರ ಒಂದು ಅಭಿವೃದ್ಧಿಗಾಗಿ ಯಾವ ರೀತಿ ಕೆಲಸ ಮಾಡುತ್ತಾರೆ ಎನ್ನುವ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ.

ನಂತರ ಫಾರೆಸ್ಟ್ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಮಜೂರ್ದರಿಗೆ ಗಂಡಸರಿಗೆ ಐದು ರೂಪಾಯಿಗಳನ್ನು, ಹೆಂಗಸರಿಗೆ ೩–೪೦ ಪೈಸೆಯನ್ನು ಕೊಡುತ್ತಿದ್ದೀರಿ. ಇದು ಅತಿ ಕೆಳಮಟ್ಟದ ಕೂಲಿಯಾಗಿದೆ. ಕಳೆದ ವರ್ಷ ನಾನು ಇದೇ ವಿಷಯದಲ್ಲಿ ಪ್ರಸ್ತಾಪ ಮಾಡಿದಾಗ ತಾವು ಕಾಮಗಾರಿ ಇಲಾಖೆಯಲ್ಲಿ ಯಾವ ರೀತಿ ಮಜೂರಿಯನ್ನು ಕೊಡುತ್ತಾರೋ ಅದೇ ರೀತಿಯಲ್ಲಿ ಇವರಿಗೆ ಕೊಡುತ್ತೇವೆಂದು ಹೇಳಿದ್ದರೂ ಇದುವರೆಗೂ ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು ತಾವು ಆಲೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ತಿತಮತಿ ಅರಣ್ಯದಿಂದ ಈಗಾಗಲೇ ಸುಮಾರು ೨೫೦ ಜನರಿಗೆ ಸ್ಥಳಾಂತರ ಮಾಡಿದ್ದೀರಿ, ಅವರ ಪೈಕಿ ಇನ್ನೂ ೫೭ ಜನರಿಗೆ ಜಾಗ ಸಿಕ್ಕಿಲ್ಲ. ಅವರು ಗುಡಿಸಲುಗಳನ್ನು ಹಾಕಿಕೊಳ್ಳುವುದಕ್ಕೂ ಜಾಗ ಇಲ್ಲವಾಗಿದೆ. ಈ ಜನರಿಗೂ ತಾವು ತಮ್ಮ ಅರಣ್ಯ ಇಲಾಖೆಯಿಂದ ಜಮೀನನ್ನು ನೀಡಿ ಅವರ ಅಭಿವೃದ್ಧಿಗೆ ಸಹಾಯಕರಾಗಬೇಕೆಂದು ಕೇಳಿಕೊಳ್ಳುತ್ತೇನೆ.

ನಂತರ ನಮ್ಮಲ್ಲಿ ಗಂಧದ ಮರದ ಕಳ್ಳತನ ಬಹಳ ಕಡಿಮೆಯಾಗಿದೆ. ಗಂಧದ ಮರದ ಕಳ್ಳತನ ಕಡಿಮೆಯಾಗುವುದಕ್ಕಿಂತ ಅರಣ್ಯದಲ್ಲಿ ಗಂಧದ ಮರವೇ ಇಲ್ಲವೆಂದು ಹೇಳಬಹುದು. ನಮ್ಮ ರಾಜ್ಯದಿಂದ ಈಗ ಕೇರಳಕ್ಕೆ ಯಾವ ಮರವೂ ಕಳ್ಳತನದಿಂದ ಹೋಗುತ್ತಿಲ್ಲ ನಮ್ಮಲ್ಲಿ ಗಂಧದ ಮರವನ್ನು ಬೆಳೆಯುವುದಕ್ಕೆ ತುಂಬಾ ಅವಕಾಶವಿದೆ. ಅದಕ್ಕೆ ಬೇಕಾದ ಫೀಡಿಂಗ್ ಟ್ರೀಸ್ ನಾಗರಹೊಳೆ ರೇಜ್‌ನಲ್ಲಿ ಅತಿ ಹೆಚ್ಚಿನ ಮಟ್ಟದಲ್ಲಿ ನೆಟ್ಟು ಬೆಳಸಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಇನ್ನೂ ಉತ್ತಮ ಮಟ್ಟದಲ್ಲಿ ಬೆಳಸಲು ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು ಎಂದು ನಾನು ಕೇಳಿಕೊಳುತ್ತೇನೆ.

ನಂತರ ಪ್ರಾಣಿಗಳ ರಕ್ಷಣೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ತಾವು ನಮ್ಮಲ್ಲಿಗೆ ಬಂದಾಗ ತಮ್ಮನ್ನು ಈ ಪ್ರಾಣಿಗಳೂ ಆದರದಿಂದ ಕಂಡು ಸ್ವಾಗತ ಮಾಡುತ್ತವೆ. ದಿನೇ ದಿನೇ ಈ ಪ್ರಾಣಿಗಳು ಕಾಡಿನಲ್ಲಿ ಹೆಚ್ಚಾಗುತ್ತಿವೆ. ಆದರೆ ಇವುಗಳ ರಕ್ಷಣೆಗೆ ನಿಮ್ಮ ಇಲಾಖೆಯಲ್ಲಿರುವ ಸಿಬ್ಬಂದಿ ಸಾಕಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಅನೇಕ ಗ್ರಾಮಗಳು ಅರಣ್ಯಕ್ಕೆ ಹೊಂದಿಕೊಂಡು ಇರುವುದರಿಂದ ಅಲ್ಲಿಗೂ ಕೂಡ ಈ ಪ್ರಾಣಿಗಳೂ ಹೋಗುತ್ತವೆ. ಅಂಥ ಸಂದರ್ಭಗಳಲ್ಲಿ ಇವುಗಳನ್ನು ಭೇಟೆಯಾಡಿ ಜನರು ಕೊಲ್ಲತಕ್ಕ ಸಾಧ್ಯತೆ ಇದೆ. ಆದ್ದರಿಂದ ತಾವು ಹೆಚ್ಚಿನ ಸಿಬ್ಬಂದಿಯನ್ನು ಇದಕ್ಕಾಗಿ ನೇಮಕ ಮಾಡಿದರೆ ಇವುಗಳ ನಾಶ ಕಡಿಮೆಯಾಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆನೆಗಳ ಕಾಟದ ಬಗ್ಗೆ ಒಂದು ಮಾತು ನಮ್ಮಲ್ಲಿ ಕಾಡು ಗ್ರಾಮಗಳಿಗೆ ಒತ್ತಡವಾಗಿರುವುದರಿಂದ ಆನೆಗಳ ಉಪದ್ರ ಜಾಸ್ತಿಯಾಗಿದೆ. ನಮ್ಮ ಭಾಗದಲ್ಲಿ ಕಾಫಿ ತೋಟದಲ್ಲಿ ಬೆಳೆಯುವ ಬಾಳೆ, ತೆಂಗು, ಇತ್ಯಾದಿಗಳಿಗೆ ಈ ಆನೆಗಳಿಂದ ಬಹಳ ತೊಂದರೆಯಾಗಿದೆಯೆಂದು ಜನರು ಹೇಳುತ್ತಿದ್ದಾರೆ. ಇಂಥ ಆನೆಗಳನ್ನು ಹೆದರಿಸಲಿಕ್ಕೆ ಸಿಬ್ಬಂದಿಗಳ ಸಹಾಯ ಸಿಕ್ಕುತ್ತಿಲ್ಲ. ನಂತರ ಕೆಲವು ಸಂದರ್ಭದಲ್ಲಿ ಆನೆಗಳಿಂದ ನಷ್ಟ ಹೊಂದಿದವರಿಗೆ ನಷ್ಟ ಧನವನ್ನು ಕೊಡುವುದೂ ತಡವಾಗುತ್ತಿದೆ. ತಡವಾದರೂ ಇದು ಬಹಳ ಕಡಿಮೆ ಪ್ರಮಾಣದಲ್ಲಿ ಕೊಡಲಾಗುತ್ತಿದೆ ಎಂದು ನಮ್ಮ ರೈತರು ಬಹಳ ಬೇಸರ ಪಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ಹೆಚ್ಚಿನ ಧನಸಹಾಯವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಂತೂ ಇಂತೂ ನಾನು ಕೆಲವು ವಿಷಯಗಳನ್ನು ತಮ್ಮ ಇಲಾಖೆಯ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಸಂದರ್ಭಾನುಸಾರವಾಗಿ ಇನ್ನೂ ಕೆಲವು ವಿಷಯಗಳನ್ನು ಅವಕಾಶ ಸಿಕ್ಕಾಗ ತಮ್ಮ ಗಮನಕ್ಕೆ ತರುತ್ತೇನೆ. ಇಷ್ಟು ಕಾಲಾವಕಾಶವನ್ನು ತೆಗೆದುಕೊಂಡು ಹೇಳಿದ ಕೆಲವು ವಿಷಯಗಳನ್ನು ತಾವು ಗಮನಿಸುತ್ತೀರೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಭಾವೂರಾವ್ ದೇಶ ಪಾಂಡೆ (ಧಾರವಾಡ).—ಸನ್ಮಾನ್ಯ ಅಧ್ಯಕ್ಷ ಮಹಾಶಯರೇ, ಇವತ್ತು ನಮ್ಮ ಮುಂದಿರುವ ಅರಣ್ಯ ಹಾಗೂ ನಾಗರೀಕ ಪೂರೈಕೆ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಪೂರೈಕೆಯ ಬಗ್ಗೆ ಇತ್ತೀಚೆಗೆ ಬಂದಿರತಕ್ಕ ವಿಷಯ ಎಂದರೆ, ಸೀಮೆ ಎಣ್ಣೆ ಮತ್ತು ಸಾಬೂನು ಅಭಾವದ ವಿಷಯ. ಸಾಮಾನ್ಯವಾಗಿ ಒಂದು ವಸ್ತು ಹೆಚ್ಚಾಗಿ ಸಿಕ್ಕುತ್ತಾ

ಇರುವಾಗ ಅದರ ವಿತರಣೆಯ ಸಮಸ್ಯೆ ಬರುವುದಿಲ್ಲ, ನಿಜವಾದ ಪರೀಕ್ಷೆಯಾಗುವುದು ಅಭಾವ ಇದ್ದಾಗ; ಮತ್ತು ಸಂಕಟ ಇದ್ದಾಗ ಈಗ ಸೀಮೆ ಎಣ್ಣೆಯ ಅಭಾವ ಇರುವಾಗ, ಎಲ್ಲಾ ಕಡೆಗೂ ಜನಗಳು ಕ್ಯೂ ನಿಂತಿರುವಾಗ ಸರ್ಕಾರಿ ಇಲಾಖೆ ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದೆಯೋ, ಇರತಕ್ಕಂಥ ಯಾವ ರೀತಿಯಲ್ಲಿ ವಿತರಣೆ ಮಾಡುತ್ತಿದೆ ವಿತರಣೆ ಮಾಡಿದಂಥಾದ್ದು ನಗರಗಳಿಗೆ, ಗ್ರಾಮಗಳಿಗೆ ಸರಿಯಾದ ರೀತಿಯಲ್ಲಿ ತಲುಪುತ್ತಿದೆಯೋ ಇಲ್ಲವೋ ಇದು ಈಗ ಪರೀಕ್ಷೆಯಾಗುವ ಸಮಯ. ಈ ಸಮಯದಲ್ಲಿ ನಾವು ನೋಡಿದಾಗ ಬಹಳಷ್ಟು ಕಡೆಗೆ ಈ ಪೂರೈಕೆಯಲ್ಲಿ ಬಹಳಷ್ಟು ಅವ್ಯವಸ್ಥೆಯಾಗಿದೆ ಎಂದು ನಾನು ಹೇಳಬೇಕಾಗುತ್ತದೆ. ವಿಧಾನಸಭೆಯಲ್ಲಿ ಈ ವಿಷಯ ಚರ್ಚೆಯಾದಾಗ ಬೆಂಗಳೂರಿನಲ್ಲಿ ಇದರ ವಿತರಣೆಯ ಬಗ್ಗೆ ಹೆಚ್ಚಿನ ಚರ್ಚೆಯಾಯಿತು. ನಂತರ ನಾನು ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ನೋಡಿದಾಗ, ಕ್ಯೂ ನಿಂತಿರತಕ್ಕ ಜನರಿಗೆ ಸೀಮೆ ಎಣ್ಣೆ ಸಿಕ್ಕದೆ ನಿರಾಶರಾಗಿ ಹೋಗತಕ್ಕ ಸಂದರ್ಭಗಳನ್ನು ನಾನು ನೋಡಿದ್ದೇನೆ. ಇಂಥ ಪರಿಸ್ಥಿತಿಯಲ್ಲಿ ಮಾನ್ಯ ಮಂತ್ರಿಗಳು ಇಲ್ಲಿ ಆಶ್ವಾಸನೆಯನ್ನು ಕೊಟ್ಟ ನಂತರವೂ ಈ ಸಮಸ್ಯೆ ಹಾಗೆಯೇ ಉಳಿದಿದೆ ಅಂದಮೇಲೆ ಮಾನ್ಯ ಮಂತ್ರಿಗಳ ಆಶ್ವಾಸನೆಯನ್ನು ಜನರಿಗೆ ತರತಕ್ಕ ಜವಾಬ್ದಾರಿಯನ್ನು ಇಲಾಖೆಯವರು ಆಗಲೀ ವಿತರಕರಾಗಲೀ ನಿರ್ವಹಣೆ ಮಾಡಿದಂತೆ ಕಾಣಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ ಇದೇ ರೀತಿಯಲ್ಲಿ ಸೌದೆಯನ್ನು ಖಾಸಗಿಯವರು ವಿತರಣೆ ಮಾಡುತ್ತಾರೆ, ಸರ್ಕಾರೀ ಡಿಪೋದವರು ವಿತರಣೆ ಮಾಡುತ್ತಾರೆ. ಇದರಲ್ಲಿ ಸರ್ಕಾರದ ನೀತಿಯೇನೆಂದು ನಮಗೆ ಸ್ಪಷ್ಟವಾಗುವುದಿಲ್ಲ. ಸರ್ಕಾರಿ ಡಿಪೋಗಳಲ್ಲಿ ಕೊಡತಕ್ಕ ಸೌದೆ, ದೊಡ್ಡ ಪ್ರಮಾಣದ್ದು ಮತ್ತು ಅದು ದಿಂಡಿನ ರೂಪದಲ್ಲಿರುತ್ತದೆ. ಸಣ್ಣ ಪ್ರಮಾಣದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಮಧ್ಯಮವರ್ಗದ ಜನರಿಗೆ ಬಡವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಇವರುಗಳು ಖಾಸಗಿ ಡಿಪೋದವರನ್ನೇ ಸೌದೆಗಾಗಿ ಅವಲಂಬಿಸಬೇಕಾಗುತ್ತದೆ ಇದೂ ಹೋಗಲಿ ಇಂಥ ಸರ್ಕಾರಿ ಡಿಪೋಗಳು ಎಷ್ಟು ಇವೆಯೆಂದು ನೋಡಿದರೆ, ಜನಸಂಖ್ಯೆಯ ಪ್ರಮಾಣವನ್ನು ನೋಡಿದರೆ, ಹುಬ್ಬಳ್ಳಿಯಂತಹ ನಗರದಲ್ಲಿ ಕೇವಲ ಎರಡು ಕಡೆಯಲ್ಲಿ ಮಾತ್ರ ಇವೆ. ಈ ಡಿಪೋಗಳನ್ನು ಸರ್ಕಾರದವರು ನಾಲೈದು ಕಡೆಗಳಲ್ಲಿ ಇಟ್ಟರೂ ಸಾಕಾಗುವುದಿಲ್ಲ ಅಲ್ಲದೆ, ಬೆಲೆಯಲ್ಲಿಯೂ ವ್ಯತ್ಯಾಸ ಇರುತ್ತದೆ. ಅನೇಕ ಕಡೆಗಳಲ್ಲಿ ಸೌದೆಯನ್ನು ಸಾಗಿಸುವುದಕ್ಕೂ, ವಿತರಣೆ ಮಾಡುವುದಕ್ಕೂ ಅನೇಕ ತರಹದ ಸಮಸ್ಯೆಗಳು ಇವೆ. ಈ ವಿಷಯದಲ್ಲಿ ಖಾಸಗಿಯವರಿಗೆ ಯಾವ ತರಹದ ನಿರ್ಬಂಧಗಳೂ ಇಲ್ಲ. ಈ ವಿಷಯವನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಾನು ಕಾರವಾರ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ, ಅಲ್ಲಿಯ ಜನರು ನನ್ನ ಮುಂದೆ ಒಂದು ಸಮಸ್ಯೆಯನ್ನು ಇಟ್ಟರು. ಅದೇನೆಂದರೆ, ನಮ್ಮ ಜಿಲ್ಲೆಯಿಂದ ಸರ್ಕಾರಕ್ಕೆ ಸುಮಾರು ೧೩–೧೪ ಕೋಟಿ ರೂಪಾಯಿಗಳ ಆದಾಯ ಸರ್ಕಾರಕ್ಕೆ ಹೋಗುತ್ತದೆ, ಅದಕ್ಕೆ ತಕ್ಕ ಪ್ರತಿಫಲ ನಮಗೇನು ಇದೆಯೆಂದು ಕೇಳುತ್ತಿದ್ದಾರೆ. ತಾನಾಗಿಯೇ ಬಿದ್ದಿರತಕ್ಕ ಸೌದೆಯನ್ನು ತಲೆಯಮೇಲೆ ಹೊತ್ತುಕೊಂಡು ಹೋಗುವುದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕೇ ? ಇದಕ್ಕೂ ಎರಡು ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ಹೀಗಾದರೆ, ಕಾಡು ನಮ್ಮಲ್ಲಿದ್ದು ಯಾವ ಪ್ರತಿಫಲ ನಮಗೆ ಇಲ್ಲ ಎನ್ನುವ ಭಾವನೆಯನ್ನು ಅಲ್ಲಿಯ ಜನಗಳು ಹೊಂದಿದ್ದಾರೆ. ಇಂಥ ವಿಷಯಗಳನ್ನು ಸರ್ಕಾರದವರು ಸರಿಯಾದ ನೀತಿಯನ್ನು ಅನುಸರಿಸಬೇಕಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಜೊತೆಗೆ, ಸರ್ಕಾರದವರು ಅರಣ್ಯ ಇಲಾಖೆಗೆ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಅರಣ್ಯ ಬೆಳವಣಿಗೆಯಾಗಬೇಕು, ಅರಣ್ಯದಲ್ಲಿ ಬೆಳೆದಿರತಕ್ಕ ನಾನಾ ತರಹದ ಮರಗಳ ಉತ್ಪತ್ತಿ ಅನೇಕ ರೀತಿಯಿಂದ ಜನಗಳಿಗೆ, ಉದ್ಯಮಗಳಿಗೆ ಅನುಕೂಲವಾಗುವಂತೆ ತಾವು ನೋಡಿಕೊಳ್ಳಬೇಕು. ಆದರೆ ಇವೊತ್ತು ತಮಗೆ ಹೇಳಬೇಕಾದರೆ ನಮ್ಮ ದುರದೃಷ್ಟದಿಂದ ನಮ್ಮಲ್ಲಿ ಅರಣ್ಯ ವೃದ್ಧಿಯಾಗುವುದಕ್ಕೆ ಬದಲು ಅರಣ್ಯದ ನಾಶ ಹೆಚ್ಚಾಗಿ ಆಗುತ್ತಿದೆ. ಒಳ್ಳೆಯ ರೀತಿಯಲ್ಲಿ ಮಳೆ ಬರಬೇಕಾದರೆ, ಮಳೆಯ ಮೂಲಕ ಕೃಷಿಗೆ ಸಹಾಯವಾಗಬೇಕಾದರೆ ಮತ್ತು ಬೆಳೆ ಚೆನ್ನಾಗಿ ಬರಬೇಕಾದರೆ ಅರಣ್ಯದ ಪ್ರಮಾಣ ಜಾಸ್ತಿ ಇರಬೇಕಾಗುತ್ತದೆ. ಅಂದರೆ ಶೇಕಡಾ ೩೩ರಷ್ಟು ಅರಣ್ಯ ಪ್ರದೇಶ ಇರಬೇಕೆಂದು ತಜ್ಞರು ಹೇಳುತ್ತಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅರಣ್ಯ ಪ್ರದೇಶವಿದ್ದರೂ ಸಹ ಅದನ್ನು ಸರಿಯಾಗಿ ಕಾಪಾಡುತ್ತಿಲ್ಲ. ಈಗ ನಮ್ಮಲ್ಲಿ ಶೇಕಡಾ ೨೫ ರಷ್ಟರವರೆಗೆ ಕಾಡಿನ ಪ್ರದೇಶವಿದೆ. ಇದನ್ನು ಇನ್ನೂ ಅಭಿವೃದ್ಧಿ ಮಾಡಲು ಅವಕಾಶವಿದೆ. ಆದರೆ ಅಭಿವೃದ್ಧಿ ಮಾಡುತ್ತಿಲ್ಲ. ಈಗ ನಮ್ಮಲ್ಲಿ

ಅರಣ್ಯ ಬೆಳೆಸತಕ್ಕಂಥ ಪದ್ಧತಿ ಶಾಸ್ತ್ರೀಯವಾಗಿಲ್ಲ ಅಶಾಸ್ತ್ರೀಯವಾಗಿದೆ. ಇದರಿಂದ ಅರಣ್ಯದ ನಾಶ ಹೆಚ್ಚಾಗುತ್ತಿದೆ. ಕಳೆದ ಸಲ ನಮ್ಮ ಸರ್ಕಾರದವರು ಈ ಇಲಾಖೆಯ ಬಗ್ಗೆ ಕೊಟ್ಟ ವರದಿಯಲ್ಲಿ ವಿವೇಚನಾರಹಿತವಾಗಿ ಮರಗಳನ್ನು ಕಡಿಯುತ್ತಿರುವುದರಿಂದ ಅರಣ್ಯದ ನಾಶ ಹೆಚ್ಚಾಗಿದೆ ಎಂದು ಒಂದು ವಾಕ್ಯವನ್ನು ಸ್ಪಷ್ಟವಾಗಿ ಅದರಲ್ಲಿ ಬರೆದಿದ್ದಾರೆ. ವಿವೇಚನಾರಹಿತವಾಗಿ ಮರಗಳನ್ನು ಕಡಿಯುವುದನ್ನು ನಿಲ್ಲಿಸುವ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ನಾನು ಧಾರವಾಡದ ಪಕದಲ್ಲಿರುವ ಅಡವಿಗೆ ಕೆಲವು ತಜ್ಞರ ಜೊತೆಯಲ್ಲಿ ಹೋಗಿದ್ದಾಗ ಅವರು ಕೆಲವು ವಿಷಯಗಳನ್ನು ನನಗೆ ಹೇಳಿದರು. ಆ ಕಾಡಿನ ಒಂದು ಪಕ್ಕದಲ್ಲಿ ಮರಗಳು ಇವೆ. ಆದರೆ ಮತ್ತೊಂದು ಪಕ್ಕದಲ್ಲಿ ಮರಗಳೇ ಇಲ್ಲದೆ ಬೋಳಾಗಿದೆ. ಇಂತಹ ಕಡೆಯಲ್ಲಿ ಮತ್ತೆ ಮರಗಳು ಬೆಳೆಯುವುದಿಲ್ಲ. ಆದರೆ ಎಲ್ಲಿ ಅರಣ್ಯವಿರುತ್ತದೋ ಅಂತಹ ಕಡೆಗಳಲ್ಲಿ ಹೊಸದಾಗಿ ಮರಗಳು ಹುಟ್ಟಿಕೊಳ್ಳುತ್ತವೆ. ಇಂತಹ ಪರಿಸ್ಥಿತಿ ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ಇದೆ. ಅರಣ್ಯದ ನಾಶ ಹೆಚ್ಚಾಗಿ ನಡೆಯುತ್ತಿದೆ. ಈ ಮೊದಲು ಅರಣ್ಯವನ್ನು ಶಾಸ್ತ್ರೀಯವಾಗಿ ಬೆಳೆಸಲಾಗುತ್ತಿತ್ತು. ಆದರೆ ಈಗ ಆ ರೀತಿ ಬೆಳೆಸುತ್ತಿಲ್ಲ. ಈ ಮೊದಲು ತೇಗ ಹೊನ್ನೆ, ಮತ್ತಿ, ಶ್ರೀಗಂಧ ಮುಂತಾದ ಮರಗಳು ಕಾಡಿನಲ್ಲಿ ಬೆಳೆದರೆ, ಅವುಗಳನ್ನು ಯಾವಾಗ ಕಡಿಯಬೇಕು ಮತ್ತು ಆ ಜಾಗದಲಿ ಮತ್ತೆ ಯಾವಾಗ ಹೊಸದಾಗಿ ನೆಡಬೇಕು ಎಂದು ವಿಚಾರದಲ್ಲಿ ಒಂದು ಶಾಸ್ತ್ರೀಯವಾದಂಥ ನಿಯಮವನ್ನು ಅನುಸರಿಸುತ್ತಿದ್ದರು ಆದರೆ ಈಗ ಈ ನಿಯಮವನ್ನು ಅನುಸರಿಸುತ್ತಿಲ್ಲ. ಈ ನಿಯಮವನ್ನು ಅನುಸರಿಸಿದರೆ ಅರಣ್ಯ ಸದಾ ಕಾಲ ಇರುತ್ತದೆ. ಅದು ನಾಶವಾಗುವುದಿಲ್ಲ. ಆದರೆ ಈಗ ಮರಗಳನ್ನು ಕಡಿಯುವ ವಿಚಾರದಲ್ಲಿ ಕಂಟ್ರಾಕ್ಟ್ ಸಿಸ್ಟಮ್ ಬಂದಿದೆ. ಕಂಟ್ರಾಕ್ಟರ್‌ಗಳು ಯಾವ ಮರಗಳನ್ನು ಕಡಿಯಬೇಕು, ಯಾವ ಮರಗಳನ್ನು ಕಡಿಯಬಾರದೆಂದು ವಿವೇಚನೆ ಮಾಡದೆ ಎಲ್ಲ ಮರಗಳನ್ನು ಪೂರ್ತಿಯಾಗಿ ಕಡಿದುಬಿಡುತ್ತಾರೆ. ಇದರಿಂದ ಎಳೆಯ ಮರಗಳು ಹಾಗೂ ಹಸಿರು ಮರಗಳೆಲ್ಲಾ ಸಂಪೂರ್ಣವಾಗಿ ನಾಶವಾಗಿಬಿಡುತ್ತವೆ. ನಂತರ ಹೊಸ ಸಸಿಗಳು ಅಲ್ಲಿ ಬೆಳೆಯುವುದಿಲ್ಲ. ಈ ರೀತಿಯಿಂದ ಅರಣ್ಯ ನಾಶವಾಗುವುದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನಾದರು ವ್ಯವಸ್ಥೆ ಮಾಡಬೇಕು. ಶಾಸ್ತ್ರೀಯವಾಗಿ ಅರಣ್ಯ ಬೆಳೆಸಿದರೆ ನಮ್ಮ ಅರಣ್ಯ ಉಳಿಯುತ್ತದೆ ಹಾಗೂ ಅದರ ಅಭಿವೃದ್ಧಿಯಾಗುತ್ತದೆ. ಇದು ಒಂದು ಭಾಗವಾದರೆ, ಇನ್ನೊಂದು ಕಡೆ ನಾವು ಒಳ್ಳೆಯ ಬೆಲೆ ಬರುವಂತಹ ಮರಗಳನ್ನು ಬೆಳೆಸುವುದರ ಕಡೆಗೆ ಗಮನ ಕೊಡಬೇಕಾಗುತ್ತದೆ. ಆದರೆ ಈಗ ವಿನಾ ಕಾರಣವಾಗಿ ಕಡಿಮೆ ಬೆಲೆ ಬರುವಂತಹ ನೀಲಗಿರಿ ಮರಗಳನ್ನು ಬೆಳೆಸಲಾಗುತ್ತಿದೆ. ನಮ್ಮ ಅವಶ್ಯಕತೆಯನ್ನು ನೋಡಿಕೊಂಡು ಇದನ್ನು ಬೆಳೆಸಬೇಕೇ ಹೊರತು. ಎಲ್ಲ ಕಡೆಗಳಲ್ಲಿಯೂ ಇದನ್ನು ಬೆಳೆಸುತ್ತಿರುವುದು ಸರಿಯಲ್ಲ. ತೇಗ, ಶ್ರೀಗಂಧ ಮುಂತಾದ ಒಳ್ಳೆಯ ಮರಗಳು ಬೆಳೆಯುವಂತಹ ಜಾಗಗಳಲ್ಲಿ ನೀಲಗಿರಿ ಮರಗಳನ್ನು ಬೆಳೆಸಿದರೆ, ತೇಗ ಶ್ರೀಗಂಧ ಮುಂತಾದ ಒಳ್ಳೆಯ ಮರಗಳು ಚೆನ್ನಾಗಿ ಬೆಳೆಯುವುದಿಲ್ಲ. ಈ ಮರಗಳು ಒಳ್ಳೆಯ ಮರಗಳಿಗೆ ಹಾನಿಕಾರಕವಾಗುತ್ತವೆ. ಆದಕಾರಣ ಅವಶ್ಯಕವಿದ್ದಷ್ಟು ಮಾತ್ರ ನೀಲಗಿರಿ ಮರಗಳನ್ನು ಬೆಳೆಸಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಅರಣ್ಯವನ್ನು ಕಾಪಾಡುವ ದೃಷ್ಟಿಯಿಂದ, ಅರಣ್ಯವನ್ನು ಬೆಳೆಸುವ ದೃಷ್ಟಿಯಿಂದ ಹಾಗೂ ಕಡಿಯುವ ದೃಷ್ಟಿಯಿಂದ ಈ ಇಲಾಖೆಯವರು ಸೂಕ್ತವಾಗಿ ಯೋಚನೆ ಮಾಡಬೇಕು ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲಿಯವರೆಗೆ ಅರಣ್ಯ ಇಲಾಖೆಯವರು ಸೂಕ್ತ ಕ್ರಮ ತೆಗೆದುಕೊಳ್ಳದ ಕಾರಣ ವಿವೇಚನಾರಹಿತವಾಗಿ ಮರಗಳನ್ನು ಕಡಿಯುತ್ತಿದ್ದಾರೆ. ಇದರಿಂದ ಬಹಳಷ್ಟು ಅರಣ್ಯದ ನಾಶವಾಗಿದೆ. ಮತ್ತೊಂದು ಸಂಗತಿ ಎಂದರೆ, ನಮ್ಮಲ್ಲಿ ಈ ಅರಣ್ಯದ ವಸ್ತುಗಳ ಆಧಾರದಿಂದಲೇ ಕೈಗಾರಿಕೆಗಳು ಬೆಳೆಯಬೇಕಾಗಿದೆ. ಕಾರ್ಖಾನೆ ನಡೆಯಬೇಕಾಗಿದೆ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ಕಾರವಾರ ಜಿಲ್ಲೆಯಲ್ಲಿ ಅರಣ್ಯದ ಪ್ರಮಾಣ ಜಾಸ್ತಿ ಇರುವ ಕಾರಣ ಅಲ್ಲಿ ದಾಂಡೇಲಿ ಉದ್ಯಮವಿದೆ. ಅಲ್ಲಿ ಇನ್ನೂ ಬೇಕಾದಷ್ಟು ಉದ್ಯಮಗಳು ಬೆಳೆಯಲು ಅವಕಾಶವಿದೆ. ಆದರೆ ಅಲ್ಲಿ ಯಾವ ಹೊಸ ಉದ್ಯಮಗಳು ಬೆಳೆಯದ ಕಾರಣ ಅಲ್ಲಿಯ ಜನರು ಕೆಲಸಕಾಗಿ ಮುಂಬೈ ಕಡೆಗೆ ಹೋಗಬೇಕಾಗಿ ಬಂದಿದೆ. ಅಲ್ಲಿ ಸರ್ಕಾರದವರು ಇಷ್ಟು ಯಾವ ಹೊಸ ಉದ್ಯಮಗಳನ್ನು ಪ್ರಾರಂಭ ಮಾಡಲಿಲ್ಲ, ಇದರಿಂದ ಅಲ್ಲಿಯ ಜನರು ಕೆಲಸಕ್ಕಾಗಿ ಅಲೆಯುತ್ತಿದ್ದಾರೆ. ಇದೇರೀತಿ ಹೊಸಹೊಸ ಸಮಸ್ಯೆಗಳು ನಮ್ಮ ಭಾಗದಲ್ಲಿ ನಿರ್ಮಾಣವಾಗುತ್ತಿವೆ. ಮುಖ್ಯವಾಗಿ ನಮ್ಮ ಹುಬ್ಬಳ್ಳಿ ಹಾಗೂ ಧಾರವಾಡದ ಭಾಗಗಳಲ್ಲಿ ಬೊಂಬಿನ ಸಮಸ್ಯೆ ಬಂದಿದೆ. ಈ ಭಾಗಗಳಲ್ಲಿ ಸಾವಿರಕ್ಕೂ ಮೇಲ್ಪಟ್ಟು ಮೇದರ ಕುಟುಂಬಗಳಿವೆ. ಇವರ ವೃತ್ತಿಗೆ ಬೊಂಬುಗಳು ಬೇಕಾಗುತ್ತದೆ ಈ ಮೊದಲು ಇವರು ಡಾಂಡೇಲಿ ಕಡೆಯಿಂದ ತರುತ್ತಿದ್ದರು. ಆದರೆ ಈಗ ಅಲ್ಲಿ ಪೇಪರ್ ಮಿಲ್ ಬಂದ ನಂತರ ಇವರಿಗೆ ಬೊಂಬು

ಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿಲ್ಲ. ಇವರಿಗೆ ಬೇರೆ ಕಡೆಗಳಿಂದ ತರಿಸಿ ಕೊಡಲು ಪ್ರಯತ್ನ ಮಾಡುತ್ತಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಇಲ್ಲಿಯವರೆಗೆ ಅದರ ಫಲ ಮಾತ್ರ ಸಿಕ್ಕಿಲ್ಲ. ಇದರಿಂದ ಅವರು ತಮ್ಮ ವೃತ್ತಿಯನ್ನು ನಡೆಸುವುದೇ ಕಷ್ಟವಾಗಿದೆ. ಅವರು ಮೊದಲೇ ಬಡವರು ಜೊತೆಗೆ ಅವರಿಗೆ ರಾಜಕೀಯ ಪ್ರಭಾವವಿಲ್ಲ. ಈ ಕಾರಣದಿಂದ ಅವರನ್ನು ಕೇಳುವವರೇ ಇಲ್ಲದಂತಾಗಿದೆ. ಇದರ ಕಡೆಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕು. ಇಂತಹ ಹಲವಾರು ಸಮಸ್ಯೆಗಳು ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಇವೆ. ಎಲ್ಲವನ್ನೂ ಹೊಂದಿಕೆ ಮಾಡಿಕೊಂಡು ಹೋಗಬೇಕು. ಹಳೆಯ ಉದ್ಯಮಗಳು ಹಾಳಾಗದಂತೆ ನೋಡಿಕೊಳ್ಳಬೇಕು. ಜೊತೆಗೆ ಹೊಸಹೊಸ ಉದ್ಯಮಗಳು ಬರುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಉದ್ಯಮಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆಯಬೇಕಾದರೆ ಕಾಡನ್ನು ನಾವು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಬೇಕಾಗುತ್ತದೆ. ಈಗ ಏನಾಗುತ್ತಿದೆ ಎಂದರೆ, ಒಂದು ಕಡೆ ಕಂಟ್ರಾಕ್ಟದಾರರು ವಿವೇಚನೆ ಇಲ್ಲದೆ ಮರಗಳನ್ನು ಕಡಿಯುತ್ತಿದ್ದರೆ ಮತ್ತೊಂದು ಕಡೆ ಕಳ್ಳತನದಿಂದ ಬೆಲೆ ಬಾಳುವಂತಹ ತೇಗ, ಶ್ರೀಗಂಧ ಮುಂತಾದ ಮರಗಳನ್ನು ಕಡಿದು ಸಾಗಿಸುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಹಾನಿಯಾಗುತ್ತಿದೆ. ಕಂಟ್ರಾಕ್ಟರ್‌ಗಳು ಅವರಿಗೆ ಮೀಸಲಿಟ್ಟ ಕ್ಷೇತ್ರದಲ್ಲಿ ಮರಗಳನ್ನು ಕಡಿಯದೆ ಅದರ ಅಕ್ಕಪಕ್ಕದಲ್ಲಿರುವಂತಹ ಮರಗಳನ್ನು ಕಡಿಯುತ್ತಿರುವ ಕಾರಣದಿಂದಲೂ ಸಹ ಸರ್ಕಾರಕ್ಕೆ ಹೆಚ್ಚಿನ ಹಾನಿಯಾಗುತ್ತಿದೆ. ಕಳ್ಳತನದಿಂದ ಮರಗಳನ್ನು ಕಡಿಯುವ ಜನರನ್ನು ಹಿಡಿಯಲು ಸಾಕಷ್ಟು ಪ್ರಮಾಣದಲ್ಲಿ ಈಗ ಸಿಬ್ಬಂದಿ ಇಲ್ಲ. ಜೊತೆಗೆ ಇವರಿಗೆ ಸಾಕಷ್ಟು ಪ್ರಮಾಣದಲ್ಲಿ ಆಯುಧಗಳನ್ನು ಒದಗಿಸದ ಕಾರಣ ಅವರಲ್ಲಿ ಕಳ್ಳರನ್ನು ಹಿಡಿಯುವಂತಹ ಶಕ್ತಿ ಕಡಿಮೆಯಾಗಿದೆ. ಈ ಕಾರಣದಿಂದ ಕಳ್ಳತನ ಜಾಸ್ತಿ ನಡೆಯುತ್ತಿರುವುದು ಕಾರವಾರ ಧಾರವಾಡ ಮುಂತಾದ ಭಾಗಗಳಲ್ಲಿ ಪ್ರತ್ಯಕ್ಷವಾಗಿ ಕಂಡುಬಂದಿದೆ. ಈ ರೀತಿಯಾಗಿ ಹಲವಾರು ಕುಂದು ಕೊರತೆಗಳು ಈ ಇಲಾಖೆಯಲ್ಲಿರುವುದು ಕಂಡು ಬರುತ್ತಿದೆ. ಇದನ್ನೆಲ್ಲಾ ನಿವಾರಿಸಿ ಜನರಿಗೆ ಬೇಕಾಗುವಂತಹ ಅವಶ್ಯಕತೆಗಳನ್ನು ಪೂರೈಸುವ ರೀತಿಯಲ್ಲಿ ಈ ಇಲಾಖೆಯನ್ನು ಶಾಸ್ತ್ರೀಯವಾಗಿ ಮತ್ತು ದಕ್ಷವಾಗಿ ನಡೆಸಿ ಕೊಂಡು ಹೋಗಬೇಕಾದ ಅವಶ್ಯಕತೆ ಇದೆ. ಆ ರೀತಿ ನಡೆಸಿಕೊಂಡು ಹೋದರೆ ನಾವು ಈ ಇಲಾಖೆಯನ್ನು ನಡೆಸುವುದಕ್ಕೆ ಏನು ಹಣ ಕೊಡುತ್ತೇವೆ ಅದು ಸದುಪಯೋಗವಾಗುತ್ತದೆ. ಇಲ್ಲದಿದ್ದರೆ ಸಾಮಾನ್ಯ ಜನರಿಗೆ ಈ ಹಣದಿಂದ ಯಾವ ಉಪಯೋಗವೂ ಆಗುವುದಿಲ್ಲ; ಏನಿದ್ದರೂ ಕಂಟ್ರಾಕ್ಟದಾರರಿಗೆ ಮತ್ತು ಕಳ್ಳತನದಿಂದ ಮರಗಳನ್ನು ಕಡಿದು ಸಾಗಿಸುವವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಸ್ವಾಭಾವಿಕವಾಗಿ ಇಷ್ಟೊಂದು ಹಣವನ್ನು ಮಂಜೂರು ಮಾಡಬೇಕೋ ಅಥವಾ ಬೇಡವೋ ಎನ್ನುವ ಸಮಸ್ಯೆ ಬರುತ್ತದೆ. ಈ ಕಾರಣದಿಂದ ಹಣವನ್ನು ಮಂಜೂರು ಮಾಡುವಾಗ ನಾಗರೀಕರು ಕೊಟ್ಟಂತಹ ತೆರಿಗೆಯ ಹಣವನ್ನು ಸರಿಯಾಗಿ ಉಪಯೋಗಿಸದಿದ್ದರೆ ನಮ್ಮ ಜನರಿಗೆ ನಮ್ಮ ದೇಶಕ್ಕೆ ಎಷ್ಟು ಉಪಯೋಗವಾಗಬೇಕೋ ಅಷ್ಟು ಉಪಯೋಗವಾಗುವುದಿಲ್ಲ ಆಗ ಹಣದ ಒಂದು ಅಪವ್ಯಯದ ಪ್ರಶ್ನೆ ಬರುತ್ತದೆ. ಅದು ತಪ್ಪಬೇಕು. ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೩.೩೦ ಪಿ. ಎಂ.

ಶ್ರೀ ಎಂ. ಮಾದಯ್ಯ (ಸಂತೇಮಾರಹಳ್ಳಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಆಹಾರ ಮತ್ತು ಅರಣ್ಯ ಶಾಖೆ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ನಾನು ಒಂದೆರಡು ವಿಷಯಗಳನ್ನು ತಮ್ಮ ಮುಂದಿಡುತ್ತೇನೆ. ಆಹಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತನಾಡುತ್ತಾ, ನಮ್ಮ ಅರಣ್ಯ ಮಂತ್ರಿಯವರ ಅಧಿಕಾರಾವಧಿಯಲ್ಲಿ ರಾಜ್ಯದಲ್ಲಿ ಮಳೆ ಚೆನ್ನಾಗಿ ಆಗಿದೆ. ಬೆಳೆಯೂ ಚೆನ್ನಾಗಿ ಆಗಿದೆ. ಆದ್ದರಿಂದ ದವಸಧಾನ್ಯಗಳೂ ಬಹಳ ಸಮೃದ್ಧಿಯಿಂದ ಆಗಿರುವುದು ಸಂತೋಷಕರವಾದ ವಿಷಯ. ಈ ವಿಚಾರದಲ್ಲಿ ನಮಗೆ ಯಾವ ತೊಂದರೆಯೂ ಕಾಣುತ್ತಿಲ್ಲ. ಆಹಾರ ಪದಾರ್ಥಗಳು ನಮ್ಮ ದೇಶದಲ್ಲೇ ಬೆಳೆಯುವುದರಿಂದ ಈ ಬಾಬಿನಲ್ಲಿ ಹೆಚ್ಚಿನ ತೊಂದರೆ ನಮ್ಮ ಜನಕ್ಕೆ ಕಾಣುತ್ತಿಲ್ಲ. ಆದರೆ ಪರದೇಶದಿಂದ ಬರತಕ್ಕ ಸೀಮೆಎಣ್ಣೆ ಬಗ್ಗೆ ಜನರಿಗೆ ಬಹಳ ತೊಂದರೆ ಕಾಣುತ್ತಿದೆ. ಮಾನ್ಯ ಮಂತ್ರಿಯವರು ಹಿಂದಿನ ಅಧಿವೇಶನದಲ್ಲಿ ನಾನು ಹೆಚ್ಚಿನ ಆಸಕ್ತಿ ವಹಿಸಿ ಪ್ರತಿಯೊಬ್ಬರಿಗೂ ಸಾಕಾದಷ್ಟು ಸೀಮೇಎಣ್ಣೆಯನ್ನು ಒದಗಿಸುವ ಹಾಗೆ ಏರ್ಪಾಡು ಮಾಡುತ್ತೇನೆಂದು ಭರವಸೆಯನ್ನು ಕೊಟ್ಟಿದ್ದರು. ಆದರೆ ಆ ಭರವಸೆ ಇಂದೂ ಕೂಡ ಕಾರ್ಯಗತವಾಗಿಲ್ಲ. ಸೀಮೆಎಣ್ಣೆ ಬಗ್ಗೆ ಜನಗಳ ಆತಂಕ ಬಹಳ ಜಾಸ್ತಿ ಆಗುತ್ತಾ ಇದೆ. ಅವರು ಮಾನ್ಯ ಆ ಮಂತ್ರಿಯವರಿಗಷ್ಟೇ ಅಲ್ಲ ನಮಗೂ ತಾವ ಹಾಕುತ್ತಿದ್ದಾರೆ, ಆದುದರಿಂದ

ಈ ಕಾಟದ ತೊರೆಯನ್ನು ಮಾನ್ಯ ಮಂತ್ರಿಯವರು ಆದಷ್ಟು ಬೇಗ ತಪ್ಪಿಸಬೇಕೆಂದು ನಾನು ತಮ್ಮ ಮುಖಾಂತರ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಆಹಾರದ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಎರಡನೆಯದಾಗಿ ಅರಣ್ಯ ಇಲಾಖೆಯ ಬಗ್ಗೆ ಮಾತನಾಡುವಾಗ, ಅರಣ್ಯವು ದೇಶಕ್ಕೆ ಎಷ್ಟು ಮಹತ್ವಪೂರಿತವಾದುದು ಎಂಬುದು ತಮಗೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ನ್ಯಾಷನಲ್ ಫಾರೆಸ್ಟ್ ಪಾಲಿಸಿ ಪ್ರಕಾರ ಆಯಾಯ ದೇಶದ ಭೂ ಭಾಗದ ಮೂರನೇ ಒಂದು ಭಾಗ ಅರಣ್ಯ ಪ್ರದೇಶ ಇರಬೇಕೆಂಬ ಒಂದು ನಿಯಮವಿದೆ. ನಮ್ಮಲ್ಲಿ ಆಲ್ ಇಂಡಿಯಾ ಪ್ರಪೋರ್ಷನ್ ಪ್ರಕಾರ ನಮ್ಮ ದೇಶದಲ್ಲಿ ೨೪ ಪರ್ಸೆಂಟ್ ಅರಣ್ಯ ಪ್ರದೇಶ ಇದೆಯೆಂದು, ನಮ್ಮ ಕರ್ನಾಟಕ ರಾಜ್ಯದಲ್ಲಿ ಭೂ ಭಾಗದಲ್ಲಿ ೧೫ ೪ ಪರ್ಸೆಂಟ್ ಅರಣ್ಯ ಪ್ರದೇಶ ಇದೆಯೆಂದೂ ಗೊತ್ತಾಗಿದೆ. ಕೆಲವು ವರ್ಷಗಳ ಹಿಂದೆ ನಮ್ಮ ರಾಜ್ಯದಲ್ಲಿ ಅರಣ್ಯ ಪ್ರದೇಶವು ೧೬ ಪರ್ಸೆಂಟ್ ಇತ್ತು. ಆದ್ದರಿಂದ ಈಗ ಅರಣ್ಯ ಪ್ರದೇಶ ಬಹಳ ಕಮ್ಮಿಯಾಗುತ್ತಾ ಬರುತ್ತಿದೆ. ಈ ತರಹ ಅರಣ್ಯ ಪ್ರದೇಶವು ಕಮ್ಮಿ ಬರುವುದು ಸಾಮಾನ್ಯವಾಗಿ ವರ್ಷೇವರ್ಷೇ ನಡೆಯುತ್ತಿದೆ. ಅನೇಕ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದರಿಂದ, ನಿರ್ವಸತರಿಗೆ ಮರು ವಸತಿಗಳನ್ನು ನಿರ್ಮಿಸುವ ಕಾರಣದಿಂದ, ಮತ್ತೇ ಅನೇಕ ಅಣೆಕಟ್ಟುಗಳನ್ನು ಕಟ್ಟುವುದರಿಂದ, ಟ್ರಾನ್ಸ್‌ಮಿಷನ್ ಲೈನ್ಸ್ ಟೆಲಿಫೋನ್ ಲೈನ್ಸ್ ಹಾಗೂ ಟೆಲಿಗ್ರಾಫಿಕ್ ಲೈನ್ಸ್‌ಗಳನ್ನು ಹಾಕುವುದರಿಂದ, ಗಣಿ ಕೆಲಸ ವ್ಯಗೈರೆಗೆ ಭೂಮಿಯನ್ನು ತೋಡುವುದರಿಂದ ಅನೇಕ ಭಾಗದಲ್ಲಿ ಕಾಡು ಕಡಿಮೆಯಾಗುತ್ತಿದೆ. ಅಂತೆಯೇ ಇನ್ನು ಮುಂದೆಯೂ ಕಾಡು ಕಡಿಮೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ಜನರು ನಮ್ಮ ಅತ್ಯಮೂಲ್ಯ ಕಾಡನ್ನು ಕಡಿದು ಬಹಳ ನಷ್ಟ ಮಾಡುತ್ತಿದ್ದಾರೆ. ಮಳೆಯಿಂದ ಕಾಡು ಕಾಡಿನಿಂದ ಮಳೆ, ಮಳೆಯಿಂದ ಬೆಳೆ, ಬೆಳೆಯಿಂದ ಜನ, ಜಾನುವಾರುಗಳಿಂದ ಬಾಳೆ ಹೀಗಿರುವಾಗ ನಾವು ಕಾಡನ್ನೆಲ್ಲಾ ಕಡಿದು ಕಡಿಮೆಮಾಡಿದರೆ, ಮಳೆ ಸಕಾಲದಲ್ಲಿ ಆಗುವುದಿಲ್ಲ. ಮಳೆ ಇಲ್ಲವೆ ಬೆಳೆಯೂ ಸಹ ಆಗುವುದಿಲ್ಲ. ಬಾವಿಗಳಲ್ಲಿ ನೀರು ಸಿಕ್ಕುವುದಿಲ್ಲ. ಇದರಿಂದಾಗಿ ಸಂಪಾದನೆಯೂ ಕಡಿಮೆ ಆಗುತ್ತದೆ. ಇಂತಹ ತೊಂದರೆಗಳಾಗುವುದರಿಂದ ನಮ್ಮ ದೇಶದ ಜನಗಳಿಗೆ ಏನು ಪದಾರ್ಥಗಳು ಬೇಕಾಗುತ್ತವ ಅವುಗಳನ್ನು ಅವರಿಗೆ ಒದಗಿಸುವುದರಲ್ಲಿ ಬಹಳ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಜನಗಳಿಗೆ ಕಾಡು ಕಡಿಯುವುದರಿಂದ ಆಗುವ ಅನಾಹುತಗಳ ತಿಳುವಳಿಕೆ ಇಲ್ಲದೇ ಹೋದ ಪಕ್ಷದಲ್ಲಿ ಬಹಳ ಕಷ್ಟವಾಗುತ್ತದೆ. ಆದುದರಿಂದ ಸರ್ಕಾರದವರು ಈಗಿನಿಂದಲೇ ಇದರ ಬಗ್ಗೆ ಒಂದು ಕಡ್ಡಾಯವಾದ ನಿಯಮವನ್ನು ಮಾಡದೇ ಹೋದ ಪಕ್ಷದಲ್ಲಿ ಜನಗಳಿಗೆ ಮರ ಮುಟ್ಟು ಉರುವಲು ವಗೈರೆಗಳನ್ನು ಒದಗಿಸುವುದಕ್ಕೆ ಎಂದೆಂದಿಗೂ ಸಾಧ್ಯವಾಗುವುದಿಲ್ಲ. ಗೃಹ ಬಳಕೆಗಾಗಿ ನಾಲ್ಕೈದು ಜನ ಇರತಕ್ಕ ಒಂದು ಕುಟುಂಬಕ್ಕೆ ಒಂದು ದಿನಕ್ಕೆ ೫ ಕೆ.ಜಿ. ವರೆಗೆ ಸೌದೆ ಬೇಕಾಗುತ್ತದೆ. ಅದರಂತೆ ಒಂದು ತಿಂಗಳಿಗೆ ೧೫೦ ಕೆ.ಜಿ. ಸೌದೆ ಬೇಕಾಗುತ್ತದೆ. ವರ್ಷದಲ್ಲಿ ಅವರಿಗೆ ೧,೮೦೦ ಕೆ.ಜಿ. ಸೌದೆ ಬೇಕಾಗುತ್ತದೆ. ಅಂತಹದ್ದು ನಾವು ಕರ್ನಾಟಕ ರಾಜ್ಯದಲ್ಲಿ ೩ ಕೋಟಿ ಜನ ಇದ್ದೇವೆ. ಲೆಕ್ಕಹಾಕಿ ಎಷ್ಟು ಸೌದೆ ನಮಗೆ ಬೇಕಾಗುತ್ತದೆಂದು ನೋಡಿಕೊಂಡರೆ ಕೊನೆ ಪಕ್ಷ ಒಂದು ಕೋಟಿ ಇಪ್ಪತ್ತು ಲಕ್ಷ ಟನ್ ಸೌದೆ ಬೇಕಾಗುತ್ತದೆ. ಆದ್ದರಿಂದ ಈ ಸ್ಥಿತಿಯಲ್ಲಿ ಇಷ್ಟೊಂದು ಸೌದೆಯನ್ನು ಫಾರೆಸ್ಟ್ ಇಲಾಖೆಯವರು ಒದಗಿಸುವುದು ಕಷ್ಟವಾಗುತ್ತದೆ ಹಾಗೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಹೆಚ್ಚಿಗೆ ಜಮೀನು ಇಟ್ಟುಕೊಂಡಿರುವ ನಮ್ಮ ರೈತಾಪಿ ಜನರು ಕೊನೇ ಪಕ್ಷ ತಮ್ಮ ಗೃಹ ಬಳಕೆಗೆ ಬೇಕಾಗುವ ಉರುವಲಿಗೋಸ್ಕರ ಶೀಘ್ರ ಬೆಳೆಯುತಕ್ಕ ಮರಗಳನ್ನು ತಮ್ಮ ಆಡುವಳಿಯ ಎಂಟನೇ ಒಂದು ಭಾಗದಲಾದರೂ ಬೆಳೆಯುತಕ್ಕ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಮತ್ತೆ ಅದೇ ರೀತಿ ತಮ್ಮ ಜಮೀನಿನಲ್ಲಿರುವ ಬದುವಿನಲ್ಲಿ ಮನೆ ಕಟ್ಟುವುದಕ್ಕೆ ಬೇಕಾಗುವಂತಹ ತೊಲೆ, ತೀರು, ಸರ ಮತ್ತು ಕವೆಗಳನ್ನು ತಯಾರು ಮಾಡುವುದಕ್ಕೆ ಲಾಯಕ್ಕಾಗತಕ್ಕ ಮರಗಳನ್ನು, ಜಾಗ್ರತೆ ಬೆಳೆಯು ತಕ್ಕ ಜಾತಿಯ ಮರಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಹೀಗೆ ಮಾಡದೇ, ಇಂತಹ ಎಲ್ಲ ಮರಗಳಿಗೂ ಫಾರೆಸ್ಟ್ ಇಲಾಖೆಯವರನ್ನೇ ನಂಬಿಕೊಂಡು ಕುಳಿತುಕೊಂಡರೆ ನಮಗೆ ಏನು ಸಿಗುವುದಿಲ್ಲ. ಈ ಸಂದರ್ಭ ನಾನು ಬಡವರ ವಿಷಯವಾಗಿ ಸ್ವಲ್ಪ ಮಾತನಾಡುತ್ತೇನೆ. ಹಿಂದಿನ ಕಾಲದಲ್ಲಿ ಒಬ್ಬ ಬಡವ ತನ್ನ ವಾಸಕ್ಕೆ ಮನೆಯನ್ನೋ ಅಥವಾ ದನಗಳಿಗೆ ಕೊಟ್ಟಿಗೆಯನ್ನೋ ಕಟ್ಟಬೇಕಾಗಿದ್ದ ಸಂದರ್ಭದಲ್ಲಿ ಅವನು ಕಾಡಿಗೆ ಹೋಗಿ ಅದಕ್ಕೆ ಬೇಕಾದ ಒಂದೆರಡು ತೊಲೆ, ಸರ, ಕವೆ ಹಾಗೂ ಬೊಂಬುಗಳನ್ನು ರಹದಾರಿ ಪಡೆದು ತೆಗೆದುಕೊಂಡು ಬರುತ್ತಿದ್ದ. ಆದರೆ ಇವತ್ತು ಅವುಗಳು ಅವನಿಗೆ ಸಿಗುತ್ತಿಲ್ಲ. ಅವನು ಬಡವನಾದ್ದರಿಂದ ಸಿಮೆಂಟ್, ಕಬ್ಬಿಣದಿಂದ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವನು ತಕ್ಕ

ಮಾಟ್ಟಕ್ಕೆ ಮನೆ ಕಟ್ಟಿಕೊಳ್ಳಬೇಕಾದರೆ ಒಂಬತ್ತು ಕವೆ, ೨ ಸರ, ಹಾಗೂ ೨೦-೩೦ ಗಳುಗಳು ಬೇಕಾಗುತ್ತವೆ. ಆದರೆ ಇವತ್ತು ಅಷ್ಟೂ ಆತನಿಗೆ ಸಿಕ್ಕುತ್ತಿಲ್ಲ. ಆದ್ದರಿಂದ ಇವನು ಯಾವ ರೀತಿ ಮನೆಯನ್ನು ಕಟ್ಟಬೇಕು. ಸರ್ಕಾರದವರನ್ನು ಕೇಳಿದರೆ ಅವರು, ಜನಗಳು ಕಾಡಿಗೆ ಹೋದರೆ ಅತಿಯಾದ ನಷ್ಟವನ್ನು ಉಂಟು ಮಾಡುತ್ತಿದ್ದಾರೆ ; ಜಂಗಲ್ಸ್‌ಗಳನ್ನು ಹಾಳು ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾದ್ದು. ಇದನ್ನು ನಾನು ಒಪ್ಪುತ್ತೇನೆ. ಆದರೆ ಈ ಬಡಜನರಿಗೆ ಮನೆ ಕಟ್ಟಿಕೊಳ್ಳಲು ಮರಮುಟ್ಟುಗಳು ಎಲ್ಲಿಂದ ಬರಬೇಕು ? ಶ್ರೀ ಮಾನ್ ರಾಮೇಗೌಡರು ಮರಮುಟ್ಟುಗಳ ಬೇಡಿಕೆಯ ಬಗ್ಗೆ ಅರ್ಜಿಯನ್ನು ಕೊಡಿ. ತರಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ಈ ರೀತಿ ಅರ್ಜಿಯನ್ನು ಬೇರೆ ಬೇರೆಯವರು, ಬೇರೆ ಬೇರೆ ಕಾಲದಲ್ಲಿ ಅವರಿಗೆ ಕೊಟ್ಟಲ್ಲಿ, ಅದು ಸ್ಯಾಂಕ್ಷನ್ ಆಗುವುದು ಯಾವಾಗ ಮತ್ತು ಮರಮುಟ್ಟುಗಳು ಆ ಜನರಿಗೆ ಸೇರುವುದು ಯಾವಾಗ ? ಆದ್ದರಿಂದ ಈ ಬಡಜನರಿಗೆ ಮರಮುಟ್ಟು, ಕವೆಗಳು ಕೇಳಿದ ಸಮಯದಲ್ಲಿ ದೊರೆಯುವಂತೆ ಆಗಲು ಫಾರೆಸ್ಟ್ ಇಲಾಖೆಯವರು ಕೊನೇ ಪಕ್ಷ ಒಂದೊಂದು ಸಾರಿ ೧೦೦ ಜನಗಳಿಗೆ ಬೇಕಾಗುವಷ್ಟು ಸಾಮಾನುಗಳನ್ನು ಡಿಪೋಗಳ ಮೂಲಕ ಮಾರಾಟ ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ಮಂತ್ರಿವರ್ಯರು ಕೂಲಂಕುಶವಾಗಿ ವಿಚಾರ ಮಾಡಿ ಬಡಜನರಿಗೆ ಇಂಥ ಸಣ್ಣಪುಟ್ಟ ಪದಾರ್ಥಗಳನ್ನು ದೊರಕಿಸಿ, ಅವರ ಕಷ್ಟ ನಿವಾರಣೆ ಆಗುವ ಹಾಗೆ ಏರ್ಪಾಡು ಮಾಡುತ್ತಾರೆಂದು ನಂಬಿ ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ,

ಇನ್ನು ಮೂರನೆಯದಾಗಿ ಹೇಳುವುದಾದರೆ ಕಾಡುಗಳನ್ನು ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ಕಡಿದು ಒಂದೇ ರೀತಿಯ ಗಿಡಗಳನ್ನು ಬೆಳೆಸುತ್ತಿದ್ದಾರೆ. ಅನೇಕ ಅತ್ಯಮೂಲ್ಯವಾದಂತಹ ಬೀಟೆ, ನಂದಿ, ಹೊನ್ನೆ, ಮತ್ತಿ, ತೇಗದ ಮರಗಳನ್ನು ಮತ್ತು ಹೆಚ್ಚು ದಿನಗಳು ಬಾಳಿಕೆ ಬರತಕ್ಕಂತಹ ಇತರೆ ಮರಗಳನ್ನು ಕಡೆದು ಅಲ್ಲಿ ನೀಲಗಿರಿ ಮರಗಳನ್ನು ನೆಡೆಸುತ್ತಿರುವುದು ಶೋಚನೀಯವಾದ ವಿಷಯ. ಅತ್ಯಮೂಲ್ಯವಾದ ಮರಗಳನ್ನು ಬೆಳೆಸಬಹುದಾದ ಜಾಗದಲ್ಲಿ, ಬೆಲೆಬಾಳುವ ಮರಗಳನ್ನು ಕಡೆದು ಸೌದೆಗೆ ಬೇಕಾಗುವಂತಹ ಮರಗಳನ್ನು ಬೆಳೆಯುವುದು ವಿವೇಚನೆಯಿಲ್ಲದ ಕೆಲಸವೆಂದು ಹೇಳಬೇಕಾಗುತ್ತದೆ. ಈ ಮರಗಳನ್ನು ಡ್ರೈಡಸಿಡ್ಯುಯಸ್ ಫಾರೆಸ್ಟ್‌ಗಳಲ್ಲಿ, ಸ್ಕಬ್ ಫಾರೆಸ್ಟ್‌ಗಳಲ್ಲಿ ಎಷ್ಟು ಬೇಕಾದರೂ ಬೆಳೆಯಬಹುದು. ಹೈ ಮತ್ತು ಸೆಮಿಡೆಕಾಡ್ಯುಯಸ್ ಫಾರೆಸ್ಟ್‌ಗಳಲ್ಲಿ ಒಳ್ಳೆಯ ಹವಾಗುಣ ಇರತಕ್ಕ ಕಡೆ ಈ ನೀಲಗಿರಿ ಮರಗಳನ್ನು ಬೆಳೆಸುವುದರಿಂದ ಏನೂ ಅರ್ಥವಿಲ್ಲವೆಂದು ನನ್ನ ಮನಸ್ಸಿಗೆ ಕಾಣುತ್ತದೆ. ಒಂದು ವೇಳೆ ಅಲ್ಲೂ ಬೆಳೆಸಲೇಬೇಕು ಎನ್ನುವುದಾದರೆ ಇಂಟರ್ ಪ್ಲಾಂಟೇಷನ್ ಮಾಡಲಿ. ಒಂದು ಸಾಗುವಾನಿ, ಒಂದು ಯೂಕಲಿಟ್ಟಸ್, ಹೀಗೆ ಅದೂ ಇದೂ ಎರಡನ್ನೂ ಮೇಂಟೈನ್ ಮಾಡದೇ ಹೋದರೆ ಅಮೂಲ್ಯವಾದಂಥ ಸಾಗುವಾನಿ, ಬೀಟೆ ಮರಗಳನ್ನು ನಿರ್ಮೂಲ ಮಾಡಿದಂತೆ ಆಗುತ್ತದೆ. ಆದುದರಿಂದ ಈ ರೀತಿ ಇಂಟರ್ ಪ್ಲಾಂಟೇಷನ್ ಮಾಡುವುದು ಸೂಕ್ತ ಎಂದು ನನಗೆ ತೋರುತ್ತದೆ. ಒಂದು ವೇಳೆ ಈ ರೀತಿ ಮಾಡಿದ್ದರೆ ಎಷ್ಟು ಮಾಡಿದ್ದಾರೆ, ಯಾವ ಯಾವ ಕಡೆ ಏನೇನು ರಿಸಲ್ಟ್ ಬಂದಿದೆ, ಇದು ಮುಂದೆ ಅನುಸರಿಸುವುದಕ್ಕೆ ಯೋಗ್ಯವಾದ ಯೋಚನೆಯೇ ಎನ್ನುವುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುತ್ತಾರೆ ಎಂದು ನಾನು ನಂಬಿದ್ದೇನೆ.

ಎರಡನೆಯದಾಗಿ ಹೇಳುವುದಾದರೆ, ಅಮೂಲ್ಯವಾದ, ಗಂಧದ ಮರಗಳ ಕಳ್ಳಸಾಗಾಣಿಕೆಯನ್ನು ವಿಷಯವನ್ನು ಪ್ರತಿ ದಿನವೂ ನಾವು ಪೇಪರಿನಲ್ಲಿ ನೋಡುತ್ತೀವೆ. ಇವತ್ತು ಇಷ್ಟು ಹೋಯಿತು, ನಿನ್ನೆ ಇಷ್ಟು ಹೋಯಿತು, ಇಲ್ಲಿ ಹಿಡಿದರು, ಅಲ್ಲಿ ಹಿಡಿದರು ಎಂದು ಪೇಪರಿನಲ್ಲಿ ನೋಡುತ್ತಿರುತ್ತೇವೆ. ಹೀಗೆ ಆಗುವುದಕ್ಕೆ ಕಾರಣವೇನು ? ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಈ ಕಳ್ಳತನವನ್ನು ನೂರಕ್ಕೆ ೭೫ ಪರ್ಸೆಂಟಷ್ಟು ನಿಲ್ಲಿಸಬಹುದು ಎಂದು ನಾನು ಖಾತರಿಯಾಗಿ ಹೇಳಬಲ್ಲೆ. ಹಾಗೆಂದರೆ ಅರಣ್ಯ ಇಲಾಖೆಯಲ್ಲಿರತಕ್ಕವರೆಲ್ಲರೂ ಡಿಸ್ ಹಾನೆಸ್ಟ್ ಪೀಪಲ್ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬೇರೆ ಇಲಾಖೆಗಳಲ್ಲಿರುವ ಹಾಗೆ ಇಲ್ಲೂ ಕೂಡ ದುರಾಶೆಯಿರುವಂಥ ಮನುಷ್ಯರು ಇದ್ದಾರೆ. ಇವರು ಕೆಳದರ್ಜೆಯವರೇ ಹೊರತು ಮೇಲ್ಮಟ್ಟದವರಲ್ಲ. ಇವರನ್ನು ಕಂಟ್ರೋಲಿಗೆ ತರುವುದು ದೊಡ್ಡ ಕೆಲಸವೇನಲ್ಲ ಸಾಮಾನ್ಯವಾಗಿ ಕಳ್ಳತನ ಎಲ್ಲಿ ನಡೆಯುತ್ತದೆ ಎಂದು ಚೆನ್ನಾಗಿ ತನ್ನ ಸ್ವಂತ ಬುದ್ಧಿಯನ್ನು ಉಪಯೋಗಿಸಿ ನಿಲ್ಲಿಸಬೇಕು, ಸದಭಿಪ್ರಾಯ ಅವರಲ್ಲಿರುವುದಾದರೆ ಕಳ್ಳರನ್ನು ಹಿಡಿಯುವುದು ಕಷ್ಟವೇನಲ್ಲ. ಓಡಾಡುವುದರಲ್ಲೇ ಇಂಥವನೇ ಕಳ್ಳ ಎಂದು ತಿಳಿದುಕೊಳ್ಳಬಹುದು, ಅವರ ಚಲನವಲನಗಳ ಬಗ್ಗೆ ನಿಗಾ

ಇಟ್ಟರೆ ಇಂಥಾ ದಿವಸವೇ ಕಳ್ಳತನಕ್ಕೆ ಹೋಗುತ್ತಾನೆ, ಇಂಥಾ ಕಡೆಯೇ ಕಳ್ಳಸಾಗಾಣಿಕೆ ಮಾಡುತ್ತಾನೆ ಎಂದು ಅರಿತುಕೊಳ್ಳಬಹುದು, ಇದೇನು ಭಾರಿ ಕೆಲಸವಲ್ಲ. ಆದರೆ ನಮ್ಮಲ್ಲಿ ಆ ಪ್ರಾಮಾಣಿಕತೆ ಇರಬೇಕು, ಅದು ಇಲ್ಲದೇಹೋದರೆ ನಮ್ಮ ಫಾರೆಸ್ಟ್ ಉಳಿಯುವುದಿಲ್ಲ, ಎಷ್ಟೇ ಸಂಬಳ ಕೊಟ್ಟರೂ ಪ್ರಾಮಾಣಿಕತೆ ಫಸ್ಟ್, ಅನುಸರಿಸುವ ಮಾರ್ಗ ಎರಡನೆಯದು. ಸಾಮಾನ್ಯವಾಗಿ ಅರಣ್ಯ ಇಲಾಖೆಯ ಆಡ್ಮಿನಿಸ್ಟ್ರೇಷನ್ ತಹಬಂದಿಗೆ ತರಬೇಕಾದರೆ ಮೂಲಭೂತವಾಗಿ ಕೆಲವು ಏರ್ಪಾಡುಗಳನ್ನು ಮಾಡಿಕೊಂಡಿಲ್ಲ. ಹಿಂದೆ ಇತ್ತು, ಈಗ ಅದನ್ನು ಅನುಸರಿಸುತ್ತಾ ಇರುವಹಾಗೆ ಕಾಣುತ್ತಾ ಇಲ್ಲ. ಪ್ರತಿಯೊಬ್ಬ ಗಾರ್ಡ್‌ಗೆ ೯-೧೦ ಸ್ಕ್ವೇಯರ್ ಮೈಲಿ ವಿಸ್ತೀರ್ಣದ ಒಂದು ಬೀಟು ಫಿಕ್ಸ್ ಮಾಡುತ್ತಿದ್ದರು. ಪ್ರತಿಯೊಂದು ಬೀಟಿನ ಸುತ್ತಲು ಒಂದು ಲೈನನ್ನು ಕಡಿದು ಅದರ ಒಳಗಡೆ ಇರುವ ಮರಗಳನ್ನೆಲ್ಲ ಎನುಮರೇಟ್ ಮಾಡಿಸಿ ಪುಸ್ತಕಕ್ಕೆ ಬರೆದು ಗಾರ್ಡ್‌ಗೆ ಚಾರ್ಜ್‌ಕೊಟ್ಟು ಇಷ್ಟು ಮರಗಳಿಗೆ ನೀನು ಜವಾಬ್ದಾರಿ ಎಂದು ಅವನಿಗೆ ಜವಾಬ್ದಾರಿ ಹೊರಿಸಿ ಅವನು ಮುಂದೆ ಬೇಕೆಂದ ಕಡೆ ವರ್ಗವಾದಾಗ ಇನ್ನೊಬ್ಬರಿಗೆ ಚಾರ್ಜ್ ಕೊಡುವವರೆಗೆ ಮಧ್ಯೆ ಮಧ್ಯೆ ಬೀಟುಗಳನ್ನು ಚೆಕ್ ಮಾಡುತ್ತಾ ಬಂದರೆ ಬಹಳ ಮಟ್ಟಿಗೆ ಕಳ್ಳಸಾಗಾಣಿಕೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಭಾವನೆ. ಇಂತಹ ಸಂದರ್ಭದಲ್ಲಿ ಫಾರೆಸ್ಟ್ ನೌಕರರ ಜೀವನದ ಬಗ್ಗೆ ಯೋಚನೆ ಮಾಡುವುದಾದರೆ ಅವರ ಜೀವನ ಅಷ್ಟು ಸುಗಮವಾದುದಲ್ಲ. ಬಹಳ ಕಷ್ಟಯುತವಾದುದು, ಇವರ ಕೆಲಸ ಮಿಲಿಟರಿ ಸೇವೆಗೆ ಎರಡನೆಯದು. ಫಾರೆಸ್ಟ್ ನೌಕರರು ಬೆಟ್ಟ ಹತ್ತಬೇಕು. ಬೆಟ್ಟ ಇಳಿಯಬೇಕು, ಆನೆ, ಹುಲಿ, ಚಿರತೆ. ಮುಂತಾದ ದುಷ್ಟ ಮೃಗಗಳಿರುವ ಕಡೆ ನಡೆದುಕೊಂಡು ಹೋಗಬೇಕು. ಯಾವ ಸಂದರ್ಭದಲ್ಲಿ ಏನಾಗುತ್ತದೋ ಎಂಬುದೇ ಗೊತ್ತಿರುವುದಿಲ್ಲ. ಕಳ್ಳರ ಕಾಟ ಬೇರೆ ಇರುತ್ತದೆ. ವಾಹನಗಳ ಓಡಾಟ ಬೇರೆ ಇರುತ್ತದೆ. ಕಳ್ಳರು ಡಂ ಅಂತಹ ಶಬ್ದ ಬರುವಂತಹ ಬಂದೂಕಗಳನ್ನು ಇಟ್ಟುಕೊಂಡಿರುತ್ತಾರೆ. ಇಂತಹ ಅಪಾಯಕಾರಿಯಾದ ಜೀವನವನ್ನು ನಡೆಸಬೇಕಾದರೆ ನಿಜವಾಗಿಯೂ ಫಾರೆಸ್ಟ್ ನೌಕರರು ಮನೋಧೈರ್ಯದಿಂದ, ಶ್ರದ್ಧೆಯಿಂದ ಕೆಲಸ ಮಾಡಬೇಕಾಗುತ್ತದೆ. ಇಂತಹವರಿಗೆ ಎಷ್ಟು ಪ್ರೋತ್ಸಾಹಗಳನ್ನು ಕೊಡಬೇಕೋ ಅಷ್ಟೂ ಕೊಡಬೇಕು. ಮೈದಾನದ ಬೀಟಿನ ಗಾರ್ಡುಗಳಿಗಿಂತ ಬೆಟ್ಟಗುಡ್ಡಗಳಿರುವ ಬೀಟಿನ ಫಾರೆಸ್ಟ್ ಗಾರ್ಡ್‌ಗಳಿಗೆ ೧೦-೧೫ ರೂಪಾಯಿ ಅಲೋಯನ್ಸ್ ಕೊಡಬೇಕು. ಒಂದು ಕೇಸ್ ಹಿಡಿದರೆ ಅದರಿಂದ ಬರತಕ್ಕಂಥ ಜುಲ್ಮಾನೆಯಲ್ಲಿ ೨೫ ಪರ್ಸೆಂಟ್ ರಿವಾರ್ಡ್ ಕೊಡಬೇಕು. ವಿದ್ಯಾಭ್ಯಾಸಕ್ಕಾಗಿ ದಿನವಹಿ ಪಟ್ಟಣಕ್ಕೆ ಬರುವಂಥ ಗಾರ್ಡ್ ಮಕ್ಕಳು ಮರಿಗಳಿಗೆ ಹಾಸ್ಟೆಲನ್ನು ಏರ್ಪಾಡು ಮಾಡಬೇಕು. ಬೀಟುಗಳಲ್ಲಿರುವ ಗಾರ್ಡ್‌ಗಳಿಗೆ ಬೇಕಾದ ಆಹಾರ ಪದಾರ್ಥಗಳನ್ನು ಇಲಾಖೆಯವರೇ ತೆಗೆದುಕೊಂಡು ಹೋಗಿ ಕೊಟ್ಟರೂ ಏನೂ ತೊಂದರೆ ಇಲ್ಲ. ಔಷಧೋಪಚಾರಗಳನ್ನು, ಆಸ್ಪತ್ರೆ ಸೌಲಭ್ಯಗಳನ್ನು ಸಾಮಾನು ಸರಂಜಾಮುಗಳನ್ನು ಸರ್ಕಾರದವರು ಒದಗಿಸಿಕೊಟ್ಟರೆ ಅವರು ಪಟ್ಟಣದ ಕಡೆಗೆ ಬರಬೇಕು ಎನ್ನುವ ಯೋಚನೆ ಇಟ್ಟುಕೊಳ್ಳುವುದಿಲ್ಲ. ಸದಾ ತಮ್ಮ ಬೀಟಿನ ಉಸ್ತುವಾರಿಯಲ್ಲಿರುತ್ತಾನೆ. ಕಳ್ಳರು ಬಂದೂಕದಲ್ಲಿ ಹೊಡೆದಾಗ ಆಕಸ್ಮಾತ್ತಾಗಿ ಯಾರಾದರೂ ಸಿಕ್ಕಿ ಸಾಯಬಹುದು; ಎಲ್ಲರನ್ನೂ ಹೊಡೆಯುತ್ತಾರೆ, ಎಲ್ಲರೂ ಸಾಯುತ್ತಾರೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಯುದ್ಧಕ್ಕೆ ಹೋದವರೆಲ್ಲರೂ ಸಾಯುವುದಿಲ್ಲ. ಎಲ್ಲೋ ಯಾರೋ ಸಾಯಬಹುದು. ಒಟ್ಟಿನಲ್ಲಿ ಇದಕ್ಕೆ ಹೆದರಬಾರದು. ಒಂದು ವೇಳೆ ಯಾರಾದರೂ ಇಂಥ ಮರಣಕ್ಕೆ ತುತ್ತಾದರೆ ಅಂಥವರ ಕುಟುಂಬಕ್ಕೆ ೧೦ ಸಾವಿರ ರೂಪಾಯಿಗಳನ್ನು ರಿವಾರ್ಡ್ ರೂಪದಲ್ಲೋ, ಗ್ರ್ಯಾಂಟ್ ರೂಪದಲ್ಲೋ, ಯಾವುದೋ ಒಂದು ರೂಪದಲ್ಲಿ ಕೊಟ್ಟರೆ ಕಾಲಕ್ರಮೇಣ ಈ ಕಳ್ಳಸಾಗಾಣಿಕೆಯನ್ನು ತಪ್ಪಿಸುವುದರಲ್ಲಿ ಏನೂ ಸಂಶಯವಿಲ್ಲ.

ನಾನು ಇನ್ನು ಕೆಲವು ವಿಷಯಗಳನ್ನು ಹೇಳಬೇಕು ಎಂದು ಇದ್ದೇನೆ. ಮಾಫಿ ಪಾಸ್ ಕೊಡತಕ್ಕ ವಿಚಾರದಲ್ಲಿ ಇವತ್ತು ರೈತರು ನಾನಾ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಇದನ್ನು ಸಿಂಪ್ಲಿಫೈ ಮಾಡಿದರೆ ಬಹಳ ಒಳ್ಳೆಯದು. ಮೊದಲು ತಹಶೀಲ್ದಾರರಿಗೆ ಅರ್ಜಿಕೊಟ್ಟರೆ ರೆವಿನ್ಯು ಇನ್ಸ್‌ಪೆಕ್ಟರ್ ಜಮೀನು ಅಜಮಾಯಿಷಿ ಮಾಡಿ ಫಾರೆಸ್ಟ್ ಇಲಾಖೆಗೆ ಕೊಟ್ಟು ಕಳುಹಿಸುತ್ತಿದ್ದರು. ನಂತರ ಫಾರೆಸ್ಟ್ ಇಲಾಖೆಯವರು ಹೋಗಿ ಮರವನ್ನು ಕತ್ತರಿಸುವುದಕ್ಕೆ, ಸಾಗಣೆ ಮಾಡುವುದಕ್ಕೆ ಅನುಮತಿ ಕೊಡುತ್ತಿದ್ದರು. ಈಗ ನಾನಾ ರೀತಿಯ ದಾಖಲೆಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ, ೧೫ ದಿವಸದಲ್ಲಿ ಆಗುವ ಕೆಲಸವನ್ನು ೨-೩ ತಿಂಗಳು ಮಾಡುತ್ತಾರೆ. ಫಲವನ್ನು ಬಿಡದೇ ಇರತಕ್ಕಂಥ, ವಯಸ್ಸಾಗಿರುವಂಥ ಮರಗಳನ್ನು ತೆಗೆದುಕೊಂಡು ಬರುವುದಕ್ಕೆ ನೇರವಾದ ಕ್ರಮವನ್ನು ಅನುಸರಿಸದೇ ಇರುವುದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಇನ್ನೊಂದು ಕಂಡೀಷನ್ ಏನೆಂದರೆ, ಇಂತಹ ಕಡೆ

೧೦ ಮರಗಳನ್ನು ನಡೆಸಬೇಕು ಎಂದು ಮುಚ್ಚಳಿಕೆ ಬರೆದು ಕೊಡಬೇಕು. ನಾನು ಹೇಳುವುದೇನೆಂದರೆ, ಕಡಿಯುವುದಕ್ಕೆ ಮೊದಲೇ ೧೦ ಮರಗಳನ್ನು ನೆಡಬೇಕು. ಆಮೇಲೆ ಅಪ್ಲಿಕೇಷನ್ ಕೊಡಬೇಕು ಎಂದು ನಿಯಮ ಮಾಡಿ. ಈಗಿನ ನಿಯಮಗಳಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಾ ಇದೆ. ಸ್ವಂತ ಜಮೀನಿನಿಂದ ಮರವನ್ನು ತರುವುದಕ್ಕೆ ಇವತ್ತು ಜನರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಅರಣ್ಯ ಮಂತ್ರಿಗಳು ಸಿಗಾ ಕೊಡಬೇಕು ಎಂದು ಹೇಳುತ್ತೇನೆ. ಕೆಲವು ಕಾಲದ ಹಿಂದೆ ಬೆಂಗಳೂರು ಸಿಟಿ, ಮೈಸೂರು ಸಿಟಿ ಕಡೆಗಳಲ್ಲಿ ಹಿಡುವಳಿ ಜಮೀನು, ಮತ್ತು ಇತರ ಎಲ್ಲಾ ತರಹೆಯ ಜಮೀನಿನಲ್ಲಿ ಕೂಡ ಗಂಧದ ಮರಗಳನ್ನು ಎನುಮರೇಟ್ ಮಾಡಿಸಿದರು. ಈ ಮರಗಳು ಏನಾದವು ಆ ಪೈಕಿ ಎಷ್ಟು ರಿಮೂವ್ ಮಾಡಿದರು, ಎಷ್ಟು ಉಳಿದಿವೆ, ಎಷ್ಟು ಮೆಚ್ಯೂರ್ ಆಗಿವೆ ಎನ್ನುವ ಲೆಕ್ಕವನ್ನು ಯಾರು ಇಟ್ಟುಕೊಂಡಿದ್ದಾರೆ – ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರದಲ್ಲಿ ತಿಳಿಸಬೇಕು ಎಂದು ನಾನು ಅಪೇಕ್ಷೆ ಪಡುತ್ತೇನೆ. ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಗಂಧದ ಮರಗಳಿವೆ, ಯಾರ ಸುಫರ್ದಿಗೆ ಕೊಟ್ಟರು, ಯಾರು ಎಕ್ಸ್‌ಪ್ಲಾಯಿಟ್ ಮಾಡಿದರು, ಎಲ್ಲಿ ಹೋದುವು ಎನ್ನುವ ಲೆಕ್ಕಾಚಾರ ಏನಿದೆ ಅದನ್ನು ಮಾನ್ಯ ಮಂತ್ರಿಗಳು ಉತ್ತರಕೊಡುವಾಗ ತಿಳಿಸುತ್ತಾರೆಂದು ನಾನು ನಂಬಿದ್ದೇನೆ. ಒಟ್ಟಿನಲ್ಲಿ ಫಾರೆಸ್ಟ್ ಇಲಾಖೆ ಬಹಳ ಮುಂದುವರೆದಿದೆ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ ಜನಗಳಿಗೆ ಸೌದೆಯನ್ನು ಒದಗಿಸುವುದರಲ್ಲಿ ಮಾತ್ರ ಎಡವಟ್ಟಾಗಿಬಿಟ್ಟಿದೆ. ನಮ್ಮ ಊರಿನಲ್ಲಿ ನನಗೇ ಸೌದೇ ಸಿಕ್ಕುವುದಿಲ್ಲ. ಅಲ್ಲಿ ಒಂದು ಡಿಪೋ ಇಟ್ಟಿದ್ದಾರೆ ೧೦೦ ಕೆ.ಜಿ. ಸೌದೆ ಕೊಡಿ ಎಂದರೆ ೨೫ ಕೆ. ಜಿ. ಕೊಡುತ್ತಾರೆ. ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ ಎಂ. ಇಬ್ರಾಹಿಂ (ಶಿವಾಜಿನಗರ).— ಸನ್ಮಾನ್ಯ ಸಭಾಪತಿಗಳೇ, ಇವತ್ತು ನಮ್ಮ ಮುಂದಿರತಕ್ಕ ಚರ್ಚೆ ಬಹಳ ಮಹತ್ತರವಾದ ಚರ್ಚೆ. ಮಾನ್ಯ ಜಂಗಲಿ ಮಂತ್ರಿಗಳವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು, ನಾನು ಕಾಲಿಡದೇ ಇರತಕ್ಕ ಜಾಗವಿಲ್ಲಾ ಅಂತ. ಬಹುಶಃ ನೀವು ಈ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಕಾಲಿಡದೇ ಕೈ ಇಟ್ಟಿದ್ದರೆ ಏನಾದರೂ ಸಿಗುತ್ತಿತ್ತೇನೋ ಎಂದು ಅನ್ನಿಸುತ್ತಿದೆ, ನೀವು ಏನೋ ಪ್ರಾಮಾಣಿಕರಾಗಿದ್ದೀರಿ ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ನನ್ನ ಅನುಭವದ ಬಗ್ಗೆ ಹೇಳುವುದಾದರೆ, ಈ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ರಾಕೆಟ್ ಇದೆ. ಈ ರಾಜ್ಯದ ಶೇಕಡ ೫೦ ರಷ್ಟು ಪೊಲಿಟಿಕಲ್ ಪವರ್ ಕಂಟ್ರೋಲ್ ಮಾಡತಕ್ಕ ಡಿಪಾರ್ಟ್‌ಮೆಂಟ್ ಈ ನಿಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟ್. ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ನಡೆಯತಕ್ಕ ಕಳ್ಳ ಸಾಗಾಣಿಕೆ ಅಕ್ರಮ ವ್ಯವಹಾರ ಇದಕ್ಕೆಲ್ಲಾ ಮುಖ್ಯ ಹೊಣೆ ನಿಮ್ಮ ಅಧಿಕಾರಿಗಳು. ಒಂದು ಜಾಗದಲ್ಲಿ ೫೦ ಎಕರೆ ಜಮೀನನ್ನು ಕಡೆಯಲು ಒಬ್ಬ ಕಂಟ್ರ್ಯಾಕ್ಟ್‌ರ್‌ರವರಿಗೆ ಕೊಟ್ಟರೆ, ಅಲ್ಲಿ ಕಡೆಯಲು ಬಿಡದೇ ಬೇರೆ ಒಂದು ಕಡೆಯಲ್ಲಿ ಮರಗಳನ್ನು ಕಡೆಸಿ. ಆ ಒಂದು ೫೦ ಎಕರೆಯ ಹೆಸರಿನಲ್ಲಿ ಪರ್ಮಿಟ್‌ಗಳನ್ನು ಕೊಟ್ಟಿರತಕ್ಕ ಎಷ್ಟೋ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿವೆ ಸ್ವಾಮಿ ಮಾನ್ಯ ಮಿತ್ರರೊಬ್ಬರು ಮಾತನಾಡುತ್ತಾ ಈ ಗಂಧದ ಕಳ್ಳಸಾಗಾಣಿಕೆಯ ಬಗ್ಗೆ ಹೇಳಿದರು, ನಿಮ್ಮ ಫಾರೆಸ್ಟ್‌ನಲ್ಲಿರತಕ್ಕ ಗಾರ್ಡ್‌ಗಳೇನಿದ್ದಾರೆ ಅವರೇನು ಅಸಮರ್ಥರಲ್ಲ ರೇಂಜರುಗಳು ಅಸಮರ್ಥರಲ್ಲ ಆದರೆ ಮೇಲ್ಗಡೆ ಕುಳಿತಿರತಕ್ಕ ಹಿರೀಕ ಅಧಿಕಾರಿಗಳೇನಿದ್ದಾರೆ ಅವರಿಗೆ ಸಮರ್ಥ ರೀತಿಯಲ್ಲಿ ಕಳ್ಳತನ ಮಾಡುವುದು ಹೇಗೆ ಎಂಬುದು ಗೊತ್ತಿದೆ, ನಾನು ಶಿವಾಜಿನಗರದಿಂದ ಆರಿಸಿ ಬಂದಿದ್ದರೂ ನನ್ನ ಸ್ವಂತ ಊರು ಭದ್ರಾವತಿ. ಭದ್ರಾವತಿ, ಮಲೆನಾಡು ಪ್ರದೇಶವೆಲ್ಲಾ ಈಟ್ ಈಚ್ ಎ ರಿಜರ್ವ್ ಆಫ್ ಸ್ಯಾಂಡಲ್ ವುಡ್. ಆದರೆ ಅಲ್ಲಿ ಪ್ರತಿನಿತ್ಯ ನೂರು ಟನ್ ಗಂಧದ ಮರಗಳು, ಭದ್ರಾವತಿ, ಸಾಗರ್, ಶಿವಮೊಗ್ಗ ಪ್ರದೇಶಗಳಿಂದ ಕಳ್ಳತನವಾಗಿ ಹೋಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳೇ ಗಾರ್ಡ್ ಮಾಡಿಕೊಂಡು ಅವರನ್ನು ನಮ್ಮ ಬಾರ್ಡರ್ ಆಚೆ ಕಡೆಗೆ ಹೋಗಿ ಬಿಟ್ಟು ಬರುತ್ತಿದ್ದಾರೆ. ಇಂಥಾ ನಿದರ್ಶನಗಳು ಸರ್ಕಾರದ ಗಮನಕ್ಕೂ ಬಂದಿದೆ. ಇಂಥಾ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಅಸಹಾಯಕತೆ ಇರಬಹುದು, ಆದರೆ ನನಗೆ ಒಂದು ವಿಶ್ವಾಸವಿದೆ. ನಿಮ್ಮ ಕಾಲಿನ ಭಾರವನ್ನು ಸ್ವಲ್ಪ ಜಾಸ್ತಿ ಮಾಡಬೇಕಾಗಿದೆ ತಾವು ಕಾಲಿಡದೇ ಜಾಗವಿಲ್ಲವೆಂದು ಹೇಳಿದಿರಿ ಆದರೆ ನಿಮ್ಮ ಕಾಲನ್ನು ಸ್ವಲ್ಪ ಯಾರು ಈ ಭ್ರಷ್ಟಾಚಾರಿ ಅಧಿಕಾರಿಗಳು ಇದ್ದಾರೆ, ಕಳ್ಳತನಕ್ಕೆ ಸಹಾಯಕರಾಗಿದ್ದಾರೆ ಅಂಥವರ ಮೇಲೆ ಕಾಲಿಡತಕ್ಕ ಕಾಲ ಬಂದಿದೆ, ಹಾಗೆ ಇಡುತ್ತೀರಾ ಎನ್ನತಕ್ಕ ವಿಶ್ವಾಸ ಕೂಡ ನನಗಿದೆ.

ಇನ್ನು ನೀಲಗಿರಿ ಪ್ಲಾಂಟೇಷನ್ ಬಗ್ಗೆ ಹೇಳುವುದಾದರೆ. ನೀವು ನೆಟ್ಟಿರತಕ್ಕ ಸಸಿಗಳು ಎಷ್ಟು ? ಎಷ್ಟು ಸಸಿಗಳು ಬಂದಿವೆ? ಎಷ್ಟು ಹುಟ್ಟಿವೆ ಎನ್ನತಕ್ಕ ಸಂಖ್ಯೆಗಳು ಕೊಡುತ್ತೀರಾ ? ಇವತ್ತು ಅದೆಲ್ಲಾ ಬರೀ ಪೇಪರ್‌ನಲ್ಲಿ ಆಗಿ ಹೋಗುತ್ತಿದೆ. ನೀಲಗಿರಿ ಪ್ಲಾಂಟೇಷನ್ ಮಾಡಬೇಕೆಂದು ಪೇಪರಿನಲ್ಲಿ ಬರೆದು ಬಿಡುತ್ತೀರಿ. ಅದರಂತೆ ಟೆಂಡರ್ ಆಯಿತು, ವರ್ಕ್ ಆರ್ಡರ್ ಕೊಟ್ಟಿದ್ದು ಆಯಿತು, ಅಲೋಕೇಷನ್ ಆಫ್ ವರ್ಕ್ ಆಯಿತು. ಅದಕ್ಕೆ ದುಡ್ಡೂ ಖರ್ಚಾಯಿತು ಆದರೆ ಅಲ್ಲಿ ಮಾತ್ರ ನೀಲಗಿರಿ ಪ್ಲಾಂಟೇಷನ್ ಇಲ್ಲ. ಇದಕ್ಕೆ ತಮಗೊಂದು ನಿದರ್ಶನವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ೧೯೫೪ ರಲ್ಲಿ ಪಾಕಿಸ್ಥಾನದಲ್ಲಿ ಒಂದು ಸಂಭವ ನಡೆಯಿತು. ಒಂದು ಊರಿಗೆ ಕೆರೆ ಕಟ್ಟಿಸಬೇಕೆಂದು ಎಗ್ಜಿಕ್ಯುಟಿವ್ ಇಂಜಿನಿಯರ್‌ರವರಿಗೆ ಅರ್ಜಿ ಬರೆದರು ಆಗ ಎಗ್ಜಿಕ್ಯುಟಿವ್ ಇಂಜಿನಿಯರ್‌ರವರು ಆ ಊರಿನಲ್ಲಿ ಜಾಗವನ್ನು ಪರಿಶೀಲನೆ ಮಾಡಿ ಟೆಂಡರ್ ಕರೆದರು, ನೋಟಿಫಿಕೇಷನ್ ಮಾಡಿದರು, ಕಾಂಟ್ರ್ಯಾಕ್ಟರಿಗೆ ಅಲೋಕೇಷನ್ ಮಾಡಿದರು, ದುಡ್ಡು ಖರ್ಚಾಯಿತು, ಕೆರೆ ನಿರ್ಮಾಣವಾಯಿತೆಂದು ಆ ಕಂಟ್ರ್ಯಾಕ್ಟರ್ ಹೊರಟು ಹೋದ ಆ ಎಗ್ಜಿಕ್ಯುಟಿವ್ ಇಂಜಿನಿಯರ್ ಕೂಡ ಹೊರಟು ಹೋದ. ಇನ್ನೊಬ್ಬ ಬಂದಾ ಅವನು ನೋಡಿದ ಅಲ್ಲಿ ಕೆರೆ ಇಲ್ಲ ಏನೂ ಇಲ್ಲ. ಆಗ ಅವನು ಒಂದು ಪ್ಲಾನ್ ಮಾಡಿದ ಈ ಕೆರೆಯಿಂದ ಸೊಳ್ಳೆಗಳು ಜಾಸ್ತಿಯಾಗಿದೆ, ಇದರಿಂದ ಮಲೇರಿಯಾ ಸಾಂಕ್ರಾಮಿಕ ರೋಗಗಳು ಹರಡುವುದಕ್ಕೆ ಕಾರಣವಾಗಿದೆ ಆದುದರಿಂದ ಇದನ್ನು ಮುಚ್ಚಿಸಬೇಕೆಂದು ಅರ್ಜಿ ಪಡೆದ ಅದನ್ನು ಮುಚ್ಚಲು ಟೆಂಡರ್ ಕರೆದ, ಒಬ್ಬ ಕಂಟ್ರ್ಯಾಕ್ಟರರಿಗೆ ಮುಚ್ಚಲು ಆರ್ಡರ್ ಹೋಯಿತು, ದುಡ್ಡು ಖರ್ಚಾಯಿತು. ಅವನು ಹೊರಟು ಹೋದ. ಹೀಗೆ ಕೆರೆ ಕಟ್ಟಲಿಲ್ಲ, ಟೆಂಡರ್ ಕರೆದರು, ವರ್ಕ್ ಅಲೋಕೇಷನ್ ಆಯಿತು ದುಡ್ಡು ಖರ್ಚಾಯಿತು ಪುನಃ ಅದನ್ನು ಅಲ್ಲಿ ಕೆರೆ ಇಲ್ಲದಿದ್ದರೂ ಮುಚ್ಚಬೇಕೆಂದು ಟೆಂಡರ್ ಕರೆದರು, ಮತ್ತೆ ಪುನ: ಅದಕ್ಕೆ ಹಣ ಖರ್ಚು ಮಾಡಿದರು. ಹೀಗೆ ನಿಮ್ಮ ಫಾರೆಸ್ಟ್ ಇಲಾಖೆಯಲ್ಲಿ ನಡೆಯುತ್ತಿದೆ. ದಯೆಯಿಟ್ಟು ಸರ್ವೆ ಮಾಡಿಸಿ. ವರ್ಕ್ ಆರ್ಡರ್ ಆಗಿದ್ದರೂ ಪ್ಲಾಂಟೇಷನ್ ಮಾಡಿಸಿದ್ದಾರೆಯೋ ಎಂಬುದರ ಬಗ್ಗೆ ತಾವು ಪರಿಶೀಲನೆ ಮಾಡಿಸಿ. ಈ ಪ್ಲಾಂಟೇಷನ್‌ನಲ್ಲಿ ದೊಡ್ಡ ಅಕ್ರಮ ನಡೆಯುತ್ತಿದೆ. ನನ್ನ ಗಮನಕ್ಕೆ ಬಂದ ರೀತಿಯಲ್ಲಿ ಭದ್ರಾವತಿ, ಸೊರಬದಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದನ್ನು ಕೇಳಿದ್ದೇನೆ. ಇನ್ನು ಈ ಪ್ಲಾಂಟೇಷನ್‌ಗಳಲ್ಲಿ ಯಾವ ರೀತಿಯಲ್ಲಿ ಕೆಲಸ ನಡೆಯುತ್ತಿದೆಂದರೆ ೨೫ ಜನ ಕೆಲಸಕ್ಕೆ ಬಂದರೆ ೫೦ ಜನ ಅಂತ ಅಟೆಂಡೆನ್ಸ್ ಇಟ್ಟಿರುತ್ತಾರೆ. ಮತ್ತೆ ನಿಗದಿಯಾದ ಕೂಲಿಯನ್ನು ಸಹ ಕೊಡುವುದಿಲ್ಲ, ನಾಮಿನಲ್ ಆಗಿ ಏನು ಕೊಡಬೇಕೋ ಅಷ್ಟನ್ನು ಕೊಡುತ್ತಿದ್ದಾರೆ. ಇನ್ನು ಬೊಂಬಾಸ್ ಬಗ್ಗೆ ಹೇಳಬೇಕೆಂದರೆ ನಿಮ್ಮ ರಿಪೋರ್ಟನ್ನು ನಾನು ಹೆಚ್ಚಿಗೆ ಓದಲು ಸಮಯ ಸಿಗಲಿಲ್ಲ. ಆದರೂ ಕೂಡ ತಮಗೆ ಹೇಳಬೇಕೆಂದರೆ ವೆಸ್ ಕೋಸ್ಟ್ ಪೇಪರ್ ಮಿಲ್ಸ್‌ನವರಿಗೆ ೧ ಲಕ್ಷದ ೮೦ ಸಾವಿರ ಟನ್ ಕೊಟ್ಟಿದ್ದೀರಿ ಅದು ಸಾಹುಕಾರಿ ಕಾರ್ಖಾನೆ, ಮಾರ್ವಾಡಿಗಳ ಕಾರ್ಖಾನೆ, ಆದೇ ನಿಮ್ಮ ಸರ್ಕಾರಿ ಕಾರ್ಖಾನೆಯಾದ ಭದ್ರಾವತಿ ಪೇಪರ್ ಮಿಲ್ಸ್‌ಗೆ ೧ ಲಕ್ಷದ ೬ ಸಾವಿರ ಟನ್ ಕೊಟ್ಟಿದ್ದೀರಿ ಇದು ಏತಕ್ಕೆಂದು ಕೇಳುತ್ತೇನೆ? ಸರ್ಕಾರ ನಡೆಸತಕ್ಕ ಕಾರ್ಖಾನೆಗೆ ೧ ಲಕ್ಷದ ೬ ಸಾವಿರ ಟನ್ ಆದೇ ಮಾರ್ವಾಡಿಗಳು ಸಾಹುಕಾರರು ನಡೆಸತಕ್ಕ ಪೇಪರ್ ಮಿಲ್‌ಗೆ ೧ ಲಕ್ಷದ ೮೦ ಸಾವಿರ ಟನ್ — ಇದು ಭ್ರಷ್ಟಾಚಾರವಾಗಲಿಲ್ಲವೇ ? ಇದರಿಂದ ಭದ್ರಾವತಿ ಪೇಪರ್ ಮಿಲ್‌ನಲ್ಲಿ ಬಂಬ್ ಸಾರ್ಟೇಜ್ ಬಿದ್ದು ಅಲ್ಲಿ ಕೆಲಸವನ್ನು ನಿಲ್ಲಿಸತಕ್ಕ ಸಂದರ್ಭ ಬಂದು ಕಾರ್ಮಿಕರು ಮುಷ್ಕರ ಮಾಡುವ ವಿಷಯ ತಮ್ಮ ಗಮನಕ್ಕೆ ಬಂದಿಲ್ಲವೇ ಇದರಲ್ಲಿ ಯಾರ ಹಸ್ತಕ್ಷೇಪ ಇದೆ ? ಇವತ್ತು ಯಾರು ಸರ್ಕಾರಿ ಕ್ಷೇತ್ರದಲ್ಲಿ ಸಾವಿರಾರು ಜನ ಕಾರ್ಮಿಕರು ಇದರಿಂದ ಅವಲಂಬಿತರಾಗಿದ್ದಾರೋ ಅಂಥಾ ಕಾರ್ಖಾನೆಗೆ ಹೆಚ್ಚಿಗೆ ಸಪ್ಲೈ ಮಾಡದೇ ಸಾಹುಕಾರರ ಕಾರ್ಖಾನೆಗೆ, ಮಾರ್ವಾಡಿಗಳ ಕಾರ್ಖಾನೆಗೆ ಹೆಚ್ಚಿಗೆ ಸಪ್ಲೈ ಮಾಡಿರುವುದು ನೋಡಿದರೆ ಸರ್ಕಾರ ಶ್ರೀಮಂತರ ಒಂದು ಆಸೆ ಆಕಾಂಕ್ಷೆಗಳಿಗೆ ಮಣಿದು ಅವರ ಮನವಿಗೆ ಮಣಿದು ಇವತ್ತಿನ ದಿವಸ ಹೆಚ್ಚಿಗೆ ಕೊಟ್ಟಿರುವುದು ಸರಿಯಲ್ಲ.

ಇನ್ನು ಕ್ಯಾಶುನೆಟ್ ಪ್ಲಾಂಟೇಷನ್ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಏನಾದರೂ ತಮ್ಮ ಹತ್ತಿರ ಲೆಕ್ಕವಿದೆಯೇ ? ಎಷ್ಟು ಕ್ಯಾಶುನೆಟ್ ಬೀಜಗಳನ್ನು ಬಿತ್ತಿದ್ದೀರಿ ಎಷ್ಟು ಗಿಡಗಳು ಹುಟ್ಟಿವೆ ಎನ್ನುವುದಕ್ಕೆ ಏನಾದರೂ ಆಕ್ಯುಚಲ್ ಸರ್ವೆ ಡಿಪಾರ್ಟ್‌ಮೆಂಟಿನವರು ಮಾಡಿದ್ದಾರೆಯೋ? ಇದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಮಾಹಿತಿಯನ್ನು ಕೊಡಬೇಕು. ಇನ್ನು ವುಡ್ ಚಾರ್ಕೋಲ್ ಬಗ್ಗೆ ಹೇಳುವುದಾದರೆ, ಹಳ್ಳಿಗಳಲ್ಲಿ ಒಬ್ಬ ರೈತನಿಗೆ ಒಂದು ಗಾಡಿ ಸೌದೆ ಬೇಕು ಅಂತ ಹೇಳಿದರೆ, ಅವನು ರೇಂಜ್ ಸಾಹೇಬರ್‌ರವರ ಹತ್ತಿರ ಹೋಗಿ ಅರ್ಜಿ ಕೊಟ್ಟು ೮–೧೦ ದಿವಸಗಳು ಕಾದರೂ ಸಿಕ್ಕುವುದಿಲ್ಲ, ಅದೇ ಸೂಟು ಬೂಟು ಹಾಕಿಕೊಂಡಿರತಕ್ಕ ಒಬ್ಬ ಕಾರ್ಖಾನೆಯ ಮಾಲೀಕ ಸಾಹೇಬರ ಹತ್ತಿರ ಹೋಗಿ

ಪೇಟೆ ಸಾಹೇಬರ್ ಹತ್ತಿರ ಹೋಗಿ ಕೇಳಿದರೆ ಅವನಿಗೆ ಸೊಸೈಟಿಯ ಮುಖಾಂತರವೋ ಇಲ್ಲ ಅಸೋಶಿಯೇಷನ್ ಮುಖಾಂತರವೋ ಅವನಿಗೆ ಬೇಕಾದಷ್ಟು ಸಾವಿರಾರು ಟನ್ ಇವತ್ತಿನ ದಿವಸ ದೊರಕುತ್ತಿದೆ. ಆದೇ ಹಳ್ಳಿ ರೈತರಿಗೆ, ದೇಶದ ಬೆನ್ನೆಲಬು ಅಂತ ಹೇಳತಕ್ಕವನು ಯಾರಿದ್ದಾನೆ ಅವನಿಗೆ ಸಿಗುತ್ತಿಲ್ಲ. ಹಿಂದೆ ರೈತನಿಗೆ ಬೇರೆ ಏನೂ ಇಲ್ಲದಿದ್ದರೂ ಸಾದೆಗೆ ಬರಗಾಲ ಬಂತು ಎಂದರೆ ಅವನು ತಿರುಗಿ ಬೀಳುತ್ತಾನೆ ಆಗ ಪ್ರಪಂಚವೇ ತಲೆಕೆಳಗಾಗುತ್ತದೆ ಅಂತ ಹೇಳುತ್ತಿದ್ದರು. ಹಾಗೆಯೇ ಇವತ್ತು ನಿಮ್ಮ ಆಡಳಿತದಲ್ಲಿ ಏನೇನು ಬರಬಾರದೋ, ಏನೇನು ಆಗಬಾರದೋ ಅದೆಲ್ಲಾ ಆಗುತ್ತಿದೆ, ಸಾದೆ ಬರಗಾಲ ಕೂಡ ಬಂದಿದೆ. ಮಲೆನಾಡಿನಲ್ಲಿ ಸಾದೆಗೆ ಬರಗಾಲವಿರಲಿಲ್ಲ ಅಲ್ಲಿಯೂ ಕೂಡದೆ ಸೃಷ್ಟಿ ಮಾಡಿದ್ದೀರಿ. ಇವತ್ತು ಹೆಣ್ಣು ಮಕ್ಕಳು ಸಾದೆಗಾಗಿ ಕ್ಯೂಗಳಲ್ಲಿ ನಿಂತುಕೊಂಡ ೧ ಸಾದೆ ಸಿಗುತ್ತಿಲ್ಲ. ನಾನು ಹುಬ್ಬಳ್ಳಿ ಧಾರವಾಡದ ಕಡೆಗೆ ಪ್ರವಾಸ ಹೋದಾಗ ದೊಡ್ಡ ದೊಡ್ಡ ಕ್ಯೂನಲ್ಲಿ ಸಾದೆಗಾಗಿ ನಿಂತಿದ್ದನ್ನು ಕಣ್ಣಾರೆ ನೋಡಿದ್ದೇನೆ, ಇವತ್ತು ಬೆಳಿಗ್ಗೆ ಹೋದರೆ ನಾಳೆ ಸಾಯಂಕಾಲದ ಹೊತ್ತಿಗೆ ಅವರು ಕ್ಯೂನಲ್ಲಿ ನಿಂತಿದ್ದರೆ ಅವರಿಗೆ ಸಿಗತಕ್ಕಂಥಾದ್ದು ೧೦, ೧೫ ಕೆ.ಜಿ. ಸಾದೆ ಮಾತ್ರ, ಇಂಥಾ ನಿದರ್ಶನಗಳು ಬೇಕಾದಷ್ಟು ಇದೆ.

ಇನ್ನು ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ಅಲ್ಪಸಂಖ್ಯಾತರಿಗೆ ಸಹಾಯ ಸೌಕರ್ಯವನ್ನು ಕೊಡಬೇಕಾಗಿದೆ. ಇವತ್ತು ಕೋಲಾರದಲ್ಲಿರತಕ್ಕ ಒಬ್ಬ ಫಾರೆಸ್ಟ್ ಆಫೀಸರ್ ತಮ್ಮ ಕಡೆಯವನಲ್ಲದಿದ್ದರೆ ಅವನನ್ನು ತೆಗೆದುಕೊಂಡು ಹೋಗಿ ಇನ್ನೊಂದು ಕಡೆ ಹಾಕುವುದು. ಮಲೆನಾಡಿನಲ್ಲಿ ಇರುವವನು ತೆಗೆದುಕೊಂಡು ಹೋಗಿ ಮೈಸೂರಿಗೆ ಹಾಕುವುದು ಈ ರೀತಿ ತಮಗೆ ಬೇಡವಾದ ಕಡೆಗೆ ಹಾಕುತ್ತಿದ್ದಾರೆ ಒಂದು ಕಡೆ ಆಫೀಸರ್‌ರವರ ಮಗ ಒಂದು ವ ವಹಾರದಲ್ಲಿ ಸಿಕ್ಕಿಹಾಕಿಕೊಂಡ ಅಂತ ಆ ಆಫೀಸರ್‌ರವರನ್ನು ಸಸ್‌ಪೆಂಡ್ ಮಾಡತಕ್ಕ ಪ್ರಯತ್ನ ಕೂಡ ನಿಮ್ಮ ಇಲಾಖೆಯಲ್ಲಿ ನಡೆದಿದೆ. ಆದುದರಿಂದ ಇವತ್ತಿನ ದಿವಸ ನಿಮಗೆ ಸ್ಪಷ್ಟವಾಗಿ ಹೇಳುವುದೇನೆಂದರೆ, ನೀವು ಏನಾದರೂ ಅಧಿಕಾರಿಗಳ ಮಾತನ್ನು ಕೇಳಿ ಮೈನಾರಿಟಿ ಕಮ್ಯೂನಿಟೀಸ್ ಯಾರಿದ್ದಾರೆ ಅವರಿಗೆ ಏನಾದರೂ ಅನ್ಯಾಯವಾಗಿ ತೊಂದರೆ ಕೊಟ್ಟಿದ್ದೇ ಆದರೆ ಅವರು ಸಿಡಿದೇಳತಕ್ಕ ಕಾಲ ಬರಬಹುದು ಎಂದು ಹೇಳಲಿಚ್ಛಿಸುತ್ತೇನೆ. ತಾವು ರಿಪೋರ್ಟ್ ತೆಗೆದು ನೋಡಿ ನಿಮಗೆ ಗೊತ್ತಾಗುತ್ತದೆ.

ಇವತ್ತಿನ ದಿವಸ ಹಸಿರು ಪ್ರಾಂತವಾದ ಮಲೆನಾಡಿನಲ್ಲಿ ಎಷ್ಟು ಮಂದಿ ಹರಿಜನ ರೇಂಜ್ ಆಫೀಸರನ್ನು ಪೋಸ್ಟ್ ಮಾಡಿದ್ದೀರಿ ? ಕೋಲಾರದಲ್ಲಿ ಎಷ್ಟು ಜನರನ್ನು ಪೋಸ್ಟ್ ಮಾಡಿದ್ದೀರಿ ? ರೆಕ್ರೂಟ್‌ಮೆಂಟಿನಲ್ಲಿ ಅಲ್ಪಸಂಖ್ಯಾತರಿಗೆ ಆಗಿರತಕ್ಕ ಅನ್ಯಾಯ ಅಷ್ಟಿಷ್ಟಲ್ಲ. ನಾನು ಎಲೆಕ್ಟ್ ಆದ ತಕ್ಷಣ ಒಂದು ಪ್ರಶ್ನೆಯನ್ನು ಕೇಳಿದೆ . ೧೯೪೭ ರಿಂದ ೧೯೭೭ ರವರೆಗೆ ಈ ರಾಜ್ಯದಲ್ಲಿ ಅಲ್ಪಸಂಖ್ಯಾತರ ಸಂಖ್ಯೆ ಶೇಕಡವಾರು ಸರ್ಕಾರಿ ನೌಕರಿಯಲ್ಲಿರುವವರು ಎಷ್ಟು ಮಂದಿ ಎಂದು. ಅದನ್ನು ಕೇಳಿ ಒಂದು ವರ್ಷವಾದರೂ ಉತ್ತರ ಸಿಗಲಿಲ್ಲ. ಇವತ್ತಿನ ದಿವಸ ನಿಮ್ಮ ಈ ಬೇಡಿಕೆಯ ಸಂದರ್ಭದಲ್ಲಿ ಕೇಳುತ್ತೇನೆ, ೧೯೫೭ ರಲ್ಲಿ, ೧೯೬೨ ರಲ್ಲಿ, ೧೯೬೭ ರಲ್ಲಿ, ೧೯೭೨ ರಲ್ಲಿ, ೧೯೭೭ ರಲ್ಲಿ ಮತ್ತು ಕಳೆದ ೩೦ ವರ್ಷಗಳಿಂದ ಅಲ್ಪಸಂಖ್ಯಾತರು ಶೇಕಡವಾರು ನಿಮ್ಮ ಇಲಾಖೆಯಲ್ಲಿ ಎಷ್ಟು ಮಂದಿ ಇದ್ದರು ಮತ್ತು ಇವತ್ತಿನ ದಿವಸ ಎಷ್ಟು ಮಂದಿ ಇದ್ದಾರೆ ಎಂಬುದನ್ನು ತಾವು ಉತ್ತರ ಕೊಡುವಾಗ ಹೇಳಬೇಕಾದುದು ಅಗತ್ಯವಾಗಿದೆ.

೪-೦೦ ಪಿ. ಎಂ.

ಇನ್ನು ಆಹಾರದ ಬಗ್ಗೆ ಹೇಳುವುದಾದರೆ. ನೀವು ಮಂತ್ರಿಗಳಾದ ಮೇಲೆ ಜನರು ಆಹಾರ ತಿಂದು 'ಅನ್ನದಾತ ಸುಖೀಭವ' ಎಂದು ಹೇಳಬೇಕಿತ್ತು. ಆದರೆ ಹಾಗೆ ಹೇಳುವ ಪರಿಸ್ಥಿತಿಯಲ್ಲಿಲ್ಲ. ವ್ಯಾಪಾರಸ್ಥರು. ಖರೀದಿ ಮಾಡುವವರು ಇವತ್ತು ರೈತರ ಪ್ರತಿನಿಧಿಗಳಾಗಿದ್ದಾರೆ. ಇವತ್ತಿನ ದಿವಸ ರೈತರಿಗೆ ಕೊಟ್ಟಿರತಕ್ಕ ಬೆಲೆ ಏನು? ಕಳೆದ ಸಾಲಿನಲ್ಲಿ ನನ್ನ ತಾಲ್ಲೂಕಾದ ಭದ್ರಾವತಿಯಲ್ಲಿ ರೈತ ಒಂದು ಚೀಲ ಭತ್ತವನ್ನು ಕೇವಲ ೪೦-೫೦ ರೂಪಾಯಿಗಳಿಗೆ ಮಾರಿದ್ದಾನೆ. ಅದನ್ನು ಕೊಂಡವರು ಯಾರೆಂದರೆ ಮಿಲ್ ನಡೆಸತಕ್ಕ ಮಾಲೀಕರು. ಆ ಭತ್ತವನ್ನು ತೆಗೆದುಕೊಂಡು ಬಾಯಿಲ್ ಮಾಡಿ ಮಂಗಳೂರಿಗೆ ಕಳುಹಿಸಿದಾಗ ಆತನಿಗೆ ದೊರೆತದ್ದು ೧೧೦ ರೂಪಾಯಿ ಇವತ್ತಿನ ದಿವಸ ರೈತರುಗಳಲ್ಲಿ ಒಂದು ಸಂಘಟನೆ ಮನೋಭಾವ ಬೆಳೆದಿದೆ. ಮುಂದಿನ ವರ್ಷ ಯಾವುದೇ ಅಧಿಕಾರಿ ಲೆವಿ ಭತ್ತವನ್ನು ವಸೂಲ್ಮಾಡುವುದಕ್ಕೆ ಬಂದರೂ ಕೂಡ ರಕ್ತದ ಹೊಳೆ ಹರಿಯುತ್ತದೆಂಬ ಎಚ್ಚರಿಕೆಯನ್ನು ಅಧಿಕಾರಿಗಳಿಗೆ ಕೊಡುತ್ತೇನೆ.

ಪ್ರೊಕ್ಯೂರ್‌ಮೆಂಟ್ ಆಫ್ ಪ್ಯಾಡಿಗೆ ರೇಟ್ ಫಿಕ್ಸ್ ಮಾಡುವವರು ಐ.ಎ.ಎಸ್. ಅಧಿಕಾರಿಗಳು. ಅವರು ಎಂದಾದರೂ ನೆಲ ಉಳುವುದಕ್ಕೆ ಹೋಗಿದ್ದರೆ ? ಒಂದು ಕ್ವಿಂಟಾಲ್ ಭತ್ತಕ್ಕೆ ೮೦-೮೫ ರೂಪಾಯಿ ಯಂತೆ ರೇಟ್ ಫಿಕ್ಸ್ ಮಾಡಿದ್ದಾರೆ. ಅವರು ಎಂದೂ ಅವರ ವಂಶಪಾರಂಪರ್ಯವಾಗಿ ಗದ್ದೆಯಲ್ಲಿ ನೇಗಿಲು ತೆಗೆದುಕೊಂಡು ಬೇಸಾಯ ಮಾಡಿಲ್ಲ. ಅವರಿಗೆ ರೈತರ ಕಷ್ಟ ಸುಖಗಳಾದರೂ ಹೇಗೆ ಗೊತ್ತಾಗಬೇಕು? ಒಂದು ಎಕರೆ ಗದ್ದೆಯಲ್ಲಿ ಭತ್ತದ ಬೇಸಾಯ ಮಾಡುವುದಕ್ಕೆ ೧,೨೦೦ ರೂಪಾಯಿ ಖರ್ಚು ಬರುತ್ತದೆ. ಪ್ರತಿಯೊಬ್ಬ ರೈತನು ಒಂದು ಎಕರೆಯಲ್ಲಿ ೧೫ ಚೀಲ ಭತ್ತ ಬೆಳೆದರೆ ಹೆಚ್ಚಾಯಿತು. ಅತಿ ಹೆಚ್ಚು ಎಂದರೆ ೨೦ ಚೀಲ ಬೆಳೆಯಬಹುದು. ೮೦ ರೂಪಾಯಿ ರೇಟಿನಂತೆ ೧,೬೦೦ ರೂಪಾಯಿ ಆಯಿತು. ಅದರಲ್ಲಿ ೧,೨೦೦ ರೂಪಾಯಿ ಖರ್ಚು ಹೋದರೆ ೪೦೦ ರೂಪಾಯಿ ಉಳಿಯಿತು. ಅದರಲ್ಲಿ ವಾಟರ್ ರೇಟ್, ಕಂದಾಯ ಇತ್ಯಾದಿಗಳನ್ನೆಲ್ಲ ಕಳೆದರೆ ಆ ರೈತನಿಗೆ ಸಿಕ್ಕತಕ್ಕದ್ದಾದರೂ ಏನು? ಆದ್ದರಿಂದ ರೇಟನ್ನು ಫಿಕ್ಸ್ ಮಾಡುವಾಗ ರೈತರ ಪ್ರತಿನಿಧಿಗಳನ್ನು ಕರೆಸಿ ಮಾಡತಕ್ಕದ್ದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ ಇವತ್ತಿನ ದಿವಸ ಈ ದೇಶದಲ್ಲಿರತಕ್ಕ ದುಡಿತದ ವರ್ಗ ಒಂದು ದಿವಸ ಕೆಲಸ ಮಾಡಿ ೧೦ ರೂಪಾಯಿ ಸಂಬಳ ಕಡಿಮೆಯಾದರೆ ಸಾಕು ಸತ್ಯಾಗ್ರಹ ಮಾಡುತ್ತಾರೆ. ಆದರೆ ರೈತರು ಸತ್ಯಾಗ್ರಹ ಮಾಡುತ್ತಿಲ್ಲ ಆದರೆ ಒಂದು ಮಾತನ್ನು ಹೇಳುತ್ತೇನೆ, ರೈತನ ಸತ್ಯಾಗ್ರಹ ಈ ದೇಶದಲ್ಲಿ ಪ್ರಾರಂಭ ವಾದರೆ ಉಳಿಗಾಲವಿಲ್ಲ. ಒಂದು ಕಡೆ ಮಹಾನುಭಾವ ಬಸವಣ್ಣವವರು 'ಕಲಿಯುಗದಲ್ಲಿ ರೈತನ ದುಡು ಮೇಲೆದ್ದಾವು' ಎಂದು ಹೇಳಿದ್ದಾರೆ. ಮುಕ್ಕಾಲು ಪಾಲು ಐ.ಎ.ಎಸ್. ಅಧಿಕಾರಿಗಳಿಗೆ ಭತ್ತ, ರಾಗಿ, ಗೋಧಿ, ಜೋಳಗಳನ್ನು ಬೆಳೆಯುವುದು ಹೇಗೆ ಎಂದು ಗೊತ್ತಿಲ್ಲ. ಒಮ್ಮೆ ಸೊಸೈಟಿಯಲ್ಲಿ ಮಾರಾಟ ಮಾಡತಕ್ಕ ಅಕ್ಕಿಯ ಬೆಲೆಯನ್ನು ನೋಡಿದೆ, ಫೈನ್ ರೈಸ್ ಕೇಜಿ ಒಂದಕ್ಕೆ ೧.೭೦ ಎಂದು ಇತ್ತು ನಿಮ್ಮ ಅಧಿಕಾರಿಗಳು ಮಾರ್ವಾಡಿಗಳಿಗಿಂತ ದೊಡ್ಡ ಮಾರ್ವಾಡಿಗಳು. ನಮ್ಮ ಹತ್ತಿರ ತೆಗೆದುಕೊಳ್ಳತಕ್ಕ ಭತ್ತಕ್ಕೆ ಕ್ವಿಂಟಾಲ್ ಒಂದಕ್ಕೆ ಕೇವಲ ೮೫ ರೂಪಾಯಿಗಳನ್ನು ಕೊಡುವುದು, ನಂತರ ಅದನ್ನು ತೆಗೆದು ಕೊಂಡು ಹಲ್ಲರ್ ಮಾಡಿಸಿ ಪೇಟೆಗೆ ತಂದು ಮಾರುವುದು ಕೇಜಿ ಒಂದಕ್ಕೆ ೧.೭೦ ಪೈಸೆಯಂತೆ. ಈ ಬಗ್ಗೆ ಅಧಿಕಾರಿಗಳ ಮೇಲೆ ಕ್ರಿಮಿನಲ್ ಸೂಟ್ ಏಕೆ ಹಾಕಬಾರದು?

ಶ್ರೀ ಜಿ. ರಾಮೇಗೌಡ.— ಯಾರು ಹೇಳಿದ್ದು ?

ಶ್ರೀ ಸಿ. ಎಂ. ಇಬ್ರಾಹಿಂ.— ಇವತ್ತಿನ ದಿವಸ ಕೆ.ಜಿ. ಒಂದಕ್ಕೆ ೧,೭೦ ಪೈಸೆಯಂತೆ ಮಾರಾಟ ಮಾಡುತ್ತಿದ್ದಾರೆ.

ಶ್ರೀ ಜಿ. ರಾಮೇಗೌಡ.— ಪಾಪ, ಅವರಿಗೂ ಕೂಡ ರೈತರ ಮೇಲೆ ಆಸೆ ಇದೆ ಎಂಬುದನ್ನು ಒಪ್ಪುತ್ತೇನೆ. ನಾನೂ ಕೂಡ ಒಂದಾನೊಂದು ಕಾಲದಲ್ಲಿ ಹಾಗೆ ಹೇಳುತ್ತಿದ್ದೆ. ಅಧಿಕಾರಕ್ಕೆ ಬಂದ ಮೇಲೆ ತಿಳಿದುಕೊಂಡು ಸುಮ್ಮನಾಗಿದ್ದೇನೆ. ಈಗ ಕೋರ್ಸ್ ಪ್ಯಾಡಿಗೆ ಕ್ವಿಂಟಾಲ್ ಒಂದಕ್ಕೆ ೯೫ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಸರ್ಕಾರದ ವತಿಯಿಂದ ಟ್ರಾನ್ಸ್‌ಪೋರ್ಟ್ ಚಾರ್ಜ್ ಎಂದು ೬ ರೂಪಾಯಿಗಳನ್ನು ಕೊಡುತ್ತೇವೆ. ಅಲ್ಲಿಗೆ ೧೦೧ ರೂಪಾಯಿಗಳನ್ನು ಕೊಟ್ಟಂತಾಗುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಂ.— ಹಿಂದೆ ನಾನು ಹಾಗೆ ಹೇಳುತ್ತಿದ್ದೆ ಎಂದು ಹೇಳಿದರು. ಬಹುಶಃ ಮದುವೆಯಾದ ಮೇಲೆ ಟೆಂಪರಾಮೆಂಟ್ ಡೌನ್ ಆಗಿರಬೇಕು. ಆದರೆ ನಾನು ಮಾತ್ರ ನಿಮ್ಮ ಹಾಗೆ ಹೇಳುವುದಿಲ್ಲ , ಕೈಯಲ್ಲಿ ಕೋಲು ಹಿಡಿದಾಗಲೂ ಕೂಡ ಹೀಗೆ ಹೇಳುತ್ತೇನೆ. ದೇವರು ಆಯುಸ್ಸು ಕೊಟ್ಟರೆ ನೋಡಿ. ಐ.ಎ.ಎಸ್. ಅಧಿಕಾರಿಗಳು ಕುರುಕ್ಷೇತ್ರದ ವ್ಯೂಹ ಇದ್ದ ಹಾಗೆ, ಅದರಲ್ಲಿ ಅಭಿಮನ್ಯು ಒಳಗೆ ಹೋಗಿದ್ದಾನೆ, ಹೊರಗೆ ಬರುವುದಿಲ್ಲವೆಂದು ಖಚಿತವಾಯಿತು. ಅಧಿಕಾರಕ್ಕೆ ಬಂದ ಮೇಲೆ ತಿಳಿದುಕೊಂಡೆ ಎಂದರು ಮಾನ್ಯ ಮಂತ್ರಿಗಳು ; ಅಲ್ಲಿಗೆ ಮುಗಿಯಿತು. ರಾಮೇಗೌಡರು ಎಂಬುದಕ್ಕೆ ಬದಲಾಗಿ ರಾಮರಾವ್ ಎಂದು ಇಟ್ಟರೆ ಸಾರ್ಥಕವಾಗುತ್ತದೆ. ಈಗ ಅಧಿಕಾರಕ್ಕೆ ಬಂದ ಮೇಲೆ ರಾಮರಾವ್ ಆಗಿದ್ದಾರ, ಬಹಳ ಸಂತೋಷ. ಆದರೆ ಒಂದು ಮಾತನ್ನು ಹೇಳುತ್ತೇನೆ : ರೈತರನ್ನು ಸುಲಿಯತಕ್ಕ ನಿಮ್ಮ ನೀತಿ ಏನಿದೆ ಇದನ್ನು ಮೊದಲು ಕೈಬಿಡಿ ಎಂದು, ನೀವು, ಲೆವಿ ವಸೂಲ್ಮಾಡಿದವರಿಗೆ ೧೦೬ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದೀರಿ. ನಾನು ಭದ್ರಾವತಿಯಲ್ಲಿ ವರ್ಷಕ್ಕೆ ಸುಮಾರು ೩೫೦ ಚೀಲ ಭತ್ತವನ್ನು ಬೆಳೆಯುತ್ತೇನೆ. ಆ ಭತ್ತವನ್ನು ತಹಶೀಲ್ದಾರರ ಮನೆಗೆ ತೆಗೆದುಕೊಂಡು ಹೋದಾಗ ಹೇಳಿದರು. ಈಗ ದುಡ್ಡಿಲ್ಲವಾದ ಕಾರಣ ಭತ್ತವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದ ಕಳೆದ ವರ್ಷ ೨೪ ಮಿಲ್ ಮಾಲೀಕರು ಶಿವಮೊಗ್ಗದಲ್ಲಿ ಲೆವಿ ಭತ್ತ ಸಂಗ್ರಹಿಸಿಟ್ಟಂತಹ ಗೋಡೌನಿನ ಬೀಗ

ಮಾರಿದು ಭತ್ತ ಮಾರೀದರು. ಅವರ ಮೇಲೆ ಕೇಸ್ ಹಾಕಿದ್ದೀರಾ ? ಯಾರು ಪ್ರಾಮಾಣಿಕ ದೃಷ್ಟಿಯಿಂದ ಭತ್ತವನ್ನು ಸಂಗ್ರಹಿಸಿಟ್ಟು ಕೊಟ್ಟರೋ ಅವರಿಗೆ ಗೋಡೌನ್ ಬಾಡಿಗೆ ಇಲ್ಲ, ಚೀಲದ ಹಣ ಇಲ್ಲ ಬೋನಸ್ ಇಲ್ಲ. ಏನೂ ಇಲ್ಲ. ಆದರೆ ಇವತ್ತು ಅನೇಕ ಮಂದಿ ಮಿಲ್ ಮಾಲೀಕರು ಸರ್ಕಾರದ ಹಳೆ ಭತ್ತವನ್ನು ಮಾರಾಟ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿದ್ದಾರೆ ಈಗ ಕೇಳಿದರೆ ಹೇಳುತ್ತಾರೆ ಅದಕ್ಕೆ ಬದಲಾಗಿ ಹೊಸ ಭತ್ತವನ್ನು ಕೊಡುತ್ತೇವೆ ಎಂದು ಆದರ ಬೆಲೆ ಏನು ? ಇದರ ಬೆಲೆ ಏನು? ಆದ್ದರಿಂದ, ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ನೀವು ಏನು ಭತ್ತವನ್ನು ಖರೀದಿ ಮಾಡುತ್ತೀರಿ ಅದನ್ನು ಯಾವ ಮಿಲ್ ಮಾಲೀಕರಿಗೂ ಕೊಡಬೇಡಿ ಎಂದು. ಸರ್ಕಾರದ ಪರವಾಗಿ ಖರೀದಿ ಮಾಡುವುದಕ್ಕೆ, ತಹಶೀಲ್ದಾರರು, ರೆವಿನ್ಯೂ ಇನ್ಸ್‌ಪೆಕ್ಟರ್, ಇತ್ಯಾದಿಗಳು ಇದ್ದಾರೆ. ಒಂದು ಕ್ವಿಂಟಾಲ್ ಭತ್ತಕ್ಕೆ ಕೊನೇ ಪಕ್ಷ ೧೨೦ ರೂಪಾಯಿಗಳನ್ನಾದರೂ ಕೊಟ್ಟರೆ ರೈತನಿಗೆ ಸ್ವಲ್ಪ ಉಸಿರಾಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ಎಕರೆ ಭೂಮಿಯ ಬೆಲೆ ಇವತ್ತಿನ ದಿವಸ ಸುಮಾರು ೧೦ ಸಾವಿರ ರೂಪಾಯಿ ಆಗುತ್ತದೆ. ೧೦ ಸಾವಿರ ರೂಪಾಯಿ ಬಂಡವಾಳ ಹಾಕಿ ಬರತಕ್ಕ ಉತ್ಪತ್ತಿ ವರ್ಷಕ್ಕೆ ಕೇವಲ ೨೦೦ ರೂಪಾಯಿಗಳೆಂದರೆ ಏನು ಪ್ರಯೋಜನ ? ಅದೇ ೧೦ ಸಾವಿರ ರೂಪಾಯಿಯನ್ನು ಬ್ಯಾಂಕಿನಲ್ಲಿ ಹಾಕಿದರೆ ಅದಕ್ಕಿಂತ ಜಾಸ್ತಿ ಬಡ್ಡಿ ಬರುತ್ತದೆ. ೧೦ ಸಾವಿರ ರೂಪಾಯಿಗಳನ್ನು ಹಾಕಿ ಜಮೀನು ತೆಗೆದುಕೊಂಡು ಮಾಡುವುದಕ್ಕಿಂತ ಕೇವಲ ೫೦೦ ರೂಪಾಯಿ ಹಾಕಿ ಒಂದು ಕ್ಷೌರದ ಅಂಗಡಿಯನ್ನು ಇಟ್ಟುಕೊಂಡರೆ ಅದಕ್ಕಿಂತ ಜಾಸ್ತಿ ಆದಾಯ ಬರುತ್ತದೆ; ಮತ್ತು ಜೀವನ ನಡೆಸುವುದಕ್ಕೆ ಸುಗಮವಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಇವತ್ತಿನ ದಿವಸ, ಈ ಸಿವಿಲ್ ಸಪ್ಲೈ ಈವಿಲ್ ಸಪ್ಲೈ ಆಗಿದೆ. ಸಿವಿಲ್ ಸಪ್ಲೈ ಎಂದರೆ ಬಹಳ ಕಷ್ಟವಾಗುತ್ತದೇ ಇವತ್ತು ಹೇಳುತ್ತೀರಿ. ಪೆಟ್ರೋಲ್, ಸೀಮೆಎಣ್ಣೆ ಬರಲಿಲ್ಲವೆಂದರೆ ಅದೆಲ್ಲ ಕೇಂದ್ರ ಸರ್ಕಾರದ್ದು ಎಂದು, ಆದರೆ ನೀವು ಷಾರ್ಟೇಜ್ ಬಗ್ಗೆ ಏನಾದರೂ ತಿಳಿಸಿದ್ದೀರಾ ಮುಂದಿನ ವರ್ಷಕ್ಕೆ ಸರ್ಕಾರಕ್ಕೆ ಗೋಧಿ ಎಷ್ಟು ಬೇಕು, ಭತ್ತ ಎಷ್ಟು ಬೇಕು, ರಾಗಿ ಎಷ್ಟು ಬೇಕಾಗುತ್ತದೆ ಎಷ್ಟು ಷಾರ್ಟೇಜ್ ಬೀಳಬಹುದೆನ್ನೋನಾದರೂ ಹೇಳಿದ್ದೀರಾ ? ಇಲ್ಲ. ಇವತ್ತು ಒಂದು ರೂಪಾಯಿಯ ಮಾಲಿಗೆ ೨ ರೂಪಾಯಿಗಳನ್ನು ಕೊಟ್ಟರೆ ಪೇಟೆಯಲ್ಲಿ ಆಹಾರ ಪದಾರ್ಥಗಳು ಬೇಕಾದಷ್ಟು ಸಿಕ್ಕುತ್ತವೆ. ಆದರೆ ಅದೇ ಒಂದು ರೂಪಾಯಿಯ ಮಾಲಿಗೆ ನಾವು ಅದನ್ನು ೧ ರೂಪಾಯಿಗೆ ಕೇಳುವುದಕ್ಕೆ ಹೋದರೆ ಪೇಟೆಯಲ್ಲಿ ಸಿಕ್ಕುವುದಿಲ್ಲ. ಇದಕ್ಕೆ ಸಿವಿಲ್ ಸಪ್ಲೈ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳ ಅದಕ್ಷತೆಯೆ ಕಾರಣ ಎಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಗರ ಪ್ರದೇಶದಲ್ಲಿ ಇರತಕ್ಕಂಥ ಜನತೆಗೂ ಇದರಿಂದ ಅನುಕೂಲತೆ ಇಲ್ಲ, ಹಳ್ಳಿಯಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯತಕ್ಕಂಥ ರೈತರಿಗೂ ಇದರಿಂದ ಅನುಕೂಲತೆ ಇಲ್ಲ. ರೈತರೂ ಕೂಡ ಸಾಯುತ್ತಿದ್ದಾರೆ, ನಗರ ಪ್ರದೇಶದಲ್ಲಿ ಜನರೂ ಕೂಡ ಸಾಯುತ್ತಿದ್ದಾರೆ ಇವತ್ತು ರೈತನಿಗೆ ಬೆಳೆದಂಥ ಬೆಳೆಯ ಮೇಲೆ ಯೋಗ್ಯವಾದ ಬೆಲೆಯನ್ನು ನಿಗದಿ ಮಾಡಿ ಒಂದು ಕ್ವಿಂಟಾಲ್ ಭತ್ತಕ್ಕೆ ೧೨೦ ರೂಪಾಯಿಗಳನ್ನು ಕೊಟ್ಟರೂ ಕೂಡ, ಅದನ್ನು ತೆಗೆದುಕೊಂಡು ಒಂದು ಕ್ವಿಂಟಾಲ್ ಅಕ್ಕಿಗೆ ೧೭೫ ರೂಪಾಯಿಗಳಿಗೆ ಮಾರಿದರೂ ಕೂಡ ಏನು ಲಾಸ್ ಆಗುವುದಿಲ್ಲ. ಒಬ್ಬ ಶೆಟ್ಟಿ ೫೦೦೦ ರೂಪಾಯಿಗಳ ಬಂಡವಾಳ ಹಾಕಿ ಅಕ್ಕಿಯ ವ್ಯಾಪಾರ ಮಾಡಿದರೆ ಒಂದು ವರ್ಷದಲ್ಲಿ ಸಾವಿರಾರು ರೂಪಾಯಿಗಳಷ್ಟು ಲಾಭವನ್ನು ಗಳಿಸುತ್ತಾನೆ. ಸರ್ಕಾರ ಇದರಲ್ಲಿ ಕೈ ಹಾಕುವುದಕ್ಕೆ ಅವಕಾಶ ಇಲ್ಲ. ಆದರೆ ಸರ್ಕಾರದವರು ಮಾಡತಕ್ಕಂಥ ವ್ಯವಹಾರದಲ್ಲಿ ಲಾಸ್ ಆಗುತ್ತಿದೆ. ಈ ಲಾಸ್ ಏತಕ್ಕೆ ಆಗುತ್ತಿದೆ ಎಂದರೆ ತಮ್ಮ ಇಲಾಖೆಗೆ ಸಂಬಂಧಪಟ್ಟ ಫುಡ್ ಇನ್ಸ್‌ಪೆಕ್ಟರ್ ಯಾವುದೋ ಒಂದು ಟಿ.ಬಿ.ಯಲ್ಲಿ ಕುಳಿತುಕೊಂಡು ತಿಂಡಿತೀರ್ಥಗಳಿಗೆ ಹೆಚ್ಚಿನ ರೀತಿಯಲ್ಲಿ ಖರ್ಚು ಮಾಡುತ್ತಾನೆ. ಈ ಖರ್ಚು ಮತ್ತು ಆಹಾರ ಸರಬರಾಜು ಖರ್ಚು ಮತ್ತು ಇನ್ನಿತರ ಖರ್ಚುಗಳನ್ನೆಲ್ಲಾ ಈ ಬಾಬಿನ ಮುಖಾಂತರ ರೈತರಿಂದ ವಸೂಲು ಮಾಡುವುದಕ್ಕೆ ಹೋಗುತ್ತಾನೆ. ಇದರಿಂದ ರೈತರು ಉದ್ಧಾರವಾಗುವುದಿಲ್ಲ. ಅದನ್ನು ಕೊಂಡುಕೊಳ್ಳತಕ್ಕಂಥ ವರ್ತಕರು ಉದ್ಧಾರವಾಗುವುದಿಲ್ಲ. ಮತ್ತು ಬಳಕೆದಾರರು ಉದ್ಧಾರವಾಗುವುದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಯವರು ಗಮನಹರಿಸಿ, ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳನ್ನು ಸಮಗ್ರವಾಗಿ ಕಂಟ್ರೋಲ್ ಮಾಡಬೇಕು ಎಂದು ಹೇಳುತ್ತೇನೆ. ಅವರು ಹಾಗೆ ಮಾಡುತ್ತಾರೆಂಬ ವಿಶ್ವಾಸ ನನಗೆ ಇದೆ. ದಯವಿಟ್ಟು ಮಾನ್ಯ ಮಂತ್ರಿಯವರು, ಐ.ಎ.ಎಸ್. ಅಧಿಕಾರಿಗಳು ಟೇಬಲ್ ಮೀಟಿಂಗ್ಸ್ ಮಾಡುವುದನ್ನು ತಪ್ಪಿಸಿ, ಅವರನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಒಂದು ಟ್ರೈನಿಂಗ್ ಕಾಲೇಜ್ ತೆರೆದು ಅದರಲ್ಲಿ ಭತ್ತ ಕೊಯಿಲ್ ಮಾಡುವುದಕ್ಕೆ, ಅದನ್ನು ಬಡಿದು ಕಾಳು ಮಾಡಿ ಚೀಲದಲ್ಲಿ ತುಂಬಿಕೊಂಡು ಮಾರು

ವುದಕ್ಕೆ ಎಷ್ಟು ಕಷ್ಟ ಇದೆ ಎನ್ನುತಕ್ಕಂಥಾದರ ಬಗ್ಗೆ ಟ್ರೈನಿಂಗ್ ಕೊಟ್ಟರೆ ಆಗ ಅವರು ಸಮರ್ಥವಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.— ಸ್ವಾಮಿ, ಮಾನ್ಯ ಸದಸ್ಯರು ಐ.ಎ.ಎಸ್. ಆಫೀಸರಿಗೆ ಟ್ರೈನಿಂಗ್ ಕೊಡಬೇಕು ಎಂದು ಹೇಳುತ್ತಿದ್ದಾರೆ. ಅವರ ಪಕ್ಷದ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದೆ. ಅವರು ಟ್ರೈನಿಂಗ್ ಕಾಲೇಜ್ ತೆರೆದು ಟ್ರೈನಿಂಗ್ ಕೊಡುತ್ತಾರೇನು !

ಶ್ರೀ ಸಿ. ಎಂ. ಇಬ್ರಾಹಿಂ.— ಇನ್ನು ಮೇಲೆ ಅವರು ವಿಚಾರ ಮಾಡುತ್ತಾರೆ ! ಸ್ವಾಮಿ ಇಷ್ಟನ್ನು ಹೇಳುತ್ತಾ ಮಾನ್ಯ ಮಂತ್ರಿಯವರು ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ರೈತರ ವಿಚಾರದಲ್ಲಿ ನಾವು ಇದೇ ತಿಂಗಳ ೨೯ನೇ ತಾರೀಖು 'ಕಿಸಾನ್ ಸಮ್ಮೇಳನ'ವನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮಾನ್ಯ ಮಂತ್ರಿಯವರಾದ ಶ್ರೀ ರಾಮೇಗೌಡರನು ಆ ದಿನದ ಸಭೆಗೆ ಕರೆಸುತ್ತೇವೆ. ಆ ದಿನ ಈ ದೇಶದ ಮಣ್ಣಿನ ಮಕ್ಕಳನ್ನು ಜಾಗೃತರನ್ನಾಗಿ ಮಾಡಿದಂಥ ಶ್ರೀ ಚರಣಸಿಂಗರ ಪಾದ ಈ ಕರ್ನಾಟಕ ರಾಜ್ಯದಲ್ಲಿ ಬೀಳತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಬೇಕೆಂದು ನಾವು ಅವರಲ್ಲಿ ಪ್ರಾರ್ಥನೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ನಾವು ರೈತರ ಬೇಡಿಕೆಗಳನ್ನು ತಮ್ಮ ಮುಂದೆ ಇಡುತ್ತೇವೆ. ರೈತರ ಬಗ್ಗೆ ತಾವು ಯಾವ ರೀತಿ ವಿಚಾರ ಮಾಡುತ್ತೀರಿ ಎಂಬುದನ್ನು ನಾವು ಆಗ ನೋಡುತ್ತೇವೆ. ಅದನ್ನು ತಾವು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಈ ಬಗ್ಗೆ ಳ ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ):—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಆಹಾರ ಮತ್ತು ಅರಣ್ಯ ಇಲಾಖೆಯ ಮಂತ್ರಿಯವರು ೩೫ ಕೋಟಿ ರೂಪಾಯಿಗಳ ಬೇಡಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಒಂದು ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಈ ಬಗ್ಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟ ಪಡುತ್ತೇನೆ ನಾನು ಮಲೆನಾಡು ಭಾಗದಿಂದ ಬಂದಿರತಕ್ಕಂಥ ಶಾಸಕನಾಗಿದ್ದೇನೆ. ನಮ್ಮ ಮಲೆನಾಡು ಪ್ರದೇಶ ಸ್ವತ: ಹಸಿರು ಕಾಡು, ನದಿ, ಬೆಟ್ಟಗುಡ್ಡಗಳಿಂದ ಕೂಡಿದೆ ಆದ್ದರಿಂದ ನಾನು ಅರಣ್ಯ ಇಲಾಖೆಯ ಬಗ್ಗೆ ಮಾತನಾಡಬೇಕೆಂದು ಇಷ್ಟಪಡುತ್ತೇನೆ. ನಾನು ಚಿಕ್ಕವನಿದ್ದಾಗ ನಮ್ಮ ಊರಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಎಲ್ಲಿ ನೋಡಿದರೂ ದೊಡ್ಡ ದೊಡ್ಡ ಮರಗಳಿಂದ ಕೂಡಿದ ದಟ್ಟವಾದ ಕಾಡನ್ನು ಕಾಣುತ್ತಿದ್ದೆನು. ಇವತ್ತಿನದಿವಸ ಆ ದಟ್ಟವಾದ ಕಾಡು ಕಾಣುವುದಿಲ್ಲ. ಇವತ್ತಿನದಿವಸ ನಮ್ಮ ಅರಣ್ಯ ಇಲಾಖೆ ವ್ಯವಸ್ಥಿತವಾದ ರೀತಿಯಲ್ಲಿ ಇದ್ದು, ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ ಕೂಡ ಅಲ್ಲಿ ೧೮ ಪರ್ಸೆಂಟ್ ಇದ್ದಂಥ ಕಾಡು ಇವತ್ತು ೧೬ ಪರ್ಸೆಂಟ್‌ಗೆ ಬಂದಿದೆ. ಇದು ಲೆಕ್ಕದಲ್ಲಿ ಮಾತ್ರ ಇದೆ. ನಮ್ಮ ದೇಶದ ಒಟ್ಟು ಅವರೇಜ್ ೨೨ಪರ್ಸೆಂಟ್ ಎಂದು ಇದೆ. ಇದು ಈಗ ೧೬ಪರ್ಸೆಂಟ್‌ಗೆ ಬಂದಿದೆ ಎಂದರೆ ಇದು ಖಂಡಿತವಾಗಿಯೂ ವಿಷಾದ ಪಡುವಂತಹ ವಿಚಾರವಾಗಿದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಯವರು ಹೆಚ್ಚಿನ ಗಮನಹರಿಸಿ ಹೆಚ್ಚು ಕಾಡುಗಳನ್ನು ಬೆಳೆಸಲೇಬೇಕು, ಈಗಿರತಕ್ಕಂಥ ೧೬ಪರ್ಸೆಂಟ್ ಕಾಡು ಪ್ರದೇಶವನ್ನು ೨೨ಪರ್ಸೆಂಟ್‌ನಷ್ಟು ನಮ್ಮ ದೇಶದ ಅವರೇಜ್ ಏನಿದೆ ಆ ಮಟ್ಟಕ್ಕೆ ಅದನ್ನು ಕೊಂಡೊಯ್ಯಬೇಕು ಎಂದು ಅವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ರಾಮೇಗೌಡರವರು ಈ ಒಂದು ಅರಣ್ಯ ಖಾತೆಯನ್ನು ವಹಿಸಿಕೊಂಡ ಮೇಲೆ ನಮ್ಮ ಭಾಗದ ರೈತರಿಗೆ ಅನೇಕ ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ. ಯಾರು ಬಹಳ ಕಾಲದಿಂದ ಅರಣ್ಯ ಜಮೀನಿನಲ್ಲಿ ಒತ್ತುವರಿ ಸಾಗುವಳಿ ಮಾಡಿಕೊಂಡು ಬಂದಿದ್ದರೋ ಅವರಿಗೆ ಅಂತಹ ಜಮೀನುಗಳನ್ನು ಖಾಯಂಗೊಳಿಸಬೇಕೆಂದು ಹೇಳಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ, ಅದರ ಮುಖಾಂತರ ನಮ್ಮ ಭಾಗದ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಹಾಗೆ ಕಾನೂನು ಮಾಡಿದ ಸಂದರ್ಭದಲ್ಲಿ ಕೆಲವು ಕಡೆ ಅಚಾತುರ್ಯಗಳೂ ಸಹ ನಡೆದು ಹೋಗಿವೆ. ಏನೆಂದರೆ ಯಾರ್ಯಾರ ಜಮೀನು ಅರಣ್ಯ ಪ್ರದೇಶದ ೩೦೦ ಮೀಟರ್‌ಗಳೊಳಗೆ ಇದ್ದರೆ ಅಂತಹವರು ಆ ಜಮೀನನ್ನು ಬಿಟ್ಟು ಹೊರಗೆ ಹೋಗಬೇಕು ಎಂದು ಆ ಕಾನೂನಿನಲ್ಲಿ ಇದೆ. ಇದರಿಂದ ನಮ್ಮ ಭಾಗದ ಜನರಿಗೆ ವಿಪರೀತ ತೊಂದರೆಯಾಗುತ್ತಿದೆ. ಮಾನ್ಯ ಮಂತ್ರಿಯವರಿಗೆ ಹಾಗೂ ಈ ಇಲಾಖೆಯ ಅಧಿಕಾರಿಗಳಿಗೆ ನಮ್ಮ ಮಲೆನಾಡು ಪ್ರದೇಶ ಎಂತಹುದು ಎಂಬುದು ಗೊತ್ತಿದೆ. ನಮ್ಮ ಮಲೆನಾಡು ಪ್ರದೇಶ ನಾನು ಮೊದಲೇ ಹೇಳಿದ ಹಾಗೆ ಬೆಟ್ಟ, ಗುಡ್ಡ,

ಕಾಡುಗಳಿಂದ ತುಂಬಿದೆ. ಈಗ ಎಷ್ಟೋ ಜನರು ಕಣಿವೆಗಳಲ್ಲಿ ಬಹಳ ಕಷ್ಟದಿಂದ ಜಮೀನು ಸಾಗುವಳಿ ಮಾಡುತ್ತಿದ್ದಾರೆ. ಅಲ್ಲಿ ಆ ಕಡೆಯಿಂದ ೩೦೦ ಮೀಟರ್‌ಗಳು, ಈ ಕಡೆಯಿಂದ ೩೦೦ ಮೀಟರ್‌ಗಳು ಅರಣ್ಯ ಪ್ರದೇಶಕ್ಕೆ ಸೇರುತ್ತದೆ. ಆ ಭೂಮಿಯಿಂದ ಜನರು ಹೊರಗೆ ಹೋಗಬೇಕು ಎಂದರೆ ಅವರು ಮತ್ತೆ ಎಲ್ಲಿ ಹೋಗಿ ಸಾಗುವಳಿ ಮಾಡುತ್ತಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಮಾನವೀಯತೆಯ ದೃಷ್ಟಿಯಿಂದ ಜನರಿಗೆ ಒಳ್ಳೆಯದು ಆಗಲಿ ಎಂದು ಕಾನೂನು ಮಾಡುತ್ತೀರಿ ಅವರಿಂದ ಒಳ್ಳೆಯದಾಗುವ ಬದಲು ಕೆಡಕು ಆಗುತ್ತಿದೆ. ಈ ಒಂದು ಕಾನೂನನ್ನು ಕಿತ್ತು ಹಾಕದಿದ್ದರೆ ತಾವೇನು ಒಳ್ಳೆಯ ದೃಷ್ಟಿಯಿಂದ ಕಾನೂನು ಮಾಡಿದ್ದೀರಿ ಅದು ಪೂರ್ತಿ ವ್ಯರ್ಥವಾಗುತ್ತದೆ ಆದ್ದರಿಂದ ಇದನ್ನು ಪುನರ್‌ಪರಿಶೀಲನೆ ಮಾಡಿ ಈ ಕಾನೂನನ್ನು ಕಿತ್ತುಹಾಕ ಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿ ಕೊಳ್ಳುತ್ತಿದ್ದೇನೆ.

ಅರಣ್ಯ ಭೂಮಿಯಲ್ಲಿ ಎಷ್ಟು ಎಕರೆ ಜಮೀನು ಬಗರ್ ಹುಕುಂ ಸಾಗುವಳಿಯಾಗುತ್ತದೆ ಎಂದು ಸರ್ವೆ ಮಾಡಿಸಬೇಕಾಗಿದೆ. ಅರಣ್ಯ ಇಲಾಖೆಯಲ್ಲಿ ಸರ್ವೆಯರ್‌ಗಳ ಕೊರತೆಯಿರುವುದರಿಂದ ಕಂದಾಯ ಇಲಾಖೆಯಿಂದ ಅವರನ್ನು ಕರೆಸಿಕೊಂಡು ಸರ್ವೆ ಮಾಡಿಸುವುದು ಉತ್ತಮ. ಅರಣ್ಯ ಭೂಮಿಯನ್ನು ಯಾರು ಇತ್ತೀಚೆಗೆ ಬಂದು ಹೊಸದಾಗಿ ಸಾಗುವಳಿ ಮಾಡುತ್ತಿದ್ದಾರೆ ಅಂತಹವರಿಗೆ ಖಂಡಿತವಾಗಿ ಜಮೀನನ್ನು ಕೊಡುವುದಕ್ಕೆ ಅವಕಾಶ ಕೊಡಬೇಡಿ. ಯಾರು ನೂರಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡಿದ್ದರು ಅವರನ್ನು ಮಾತ್ರ ಖಾಯಂಗೊಳಿಸಬೇಕು. ಹಾಗೆ ಅವರನ್ನು ಖಾಯಂಗೊಳಿಸುವಾಗ, ಈಗಿರುವ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಕೊಡಬೇಕೇ ಅಥವಾ ವಿಶೇಷ ಆಜ್ಞೆಯೊಂದನ್ನು ಹೊರಡಿಸುವುದರ ಮೂಲಕ ಕೊಡಬೇಕೆ ಎಂಬ ಬಗ್ಗೆ ಸರ್ಕಾರ ಪರಿಶೀಲಿಸಬೇಕಾಗುತ್ತದೆ. ಏಕೆಂದರೆ, ಈಗಿರುವ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅರಣ್ಯ ಭೂಮಿಯನ್ನು ಕೊಡುವುದಕ್ಕೆ ಸಂವಿಧಾನದ ತೊಡಕು ಬರಬಹುದು. ಈ ತೊಡಕಿರುವುದರಿಂದ, ಕೊನೆಯ ಪಕ್ಷ ರೈತರಿಗೆ ಭೂಮಿಯನ್ನು ಲೀಸ್ ಮುಖಾಂತರವಾದರೂ ಕೊಡಬಹುದು. ಕಾರ್ಖಾನೆ ಮುಂತಾದವುಗಳ ಉದ್ದೇಶಕ್ಕಾಗಿ ಅರಣ್ಯ ಭೂಮಿಯನ್ನು ೧೦೦ ಅಥವಾ ೯೯ ವರ್ಷಗಳಿಗೆ ಲೀಸ್‌ನ್ನು ಕೊಟ್ಟಿರುವ ಅನೇಕ ನಿದರ್ಶನಗಳಿವೆ. ಅದರಂತೆ ರೈತರಿಗೂ ಸಹ ಸುಮಾರು ೩೦ ವರ್ಷಗಳ ಮೇಲೆ ಅರಣ್ಯ ಭೂಮಿಯನ್ನು ಲೀಸ್ ಆಗಿ ಕೊಟ್ಟು, ಸಂವಿಧಾನಕ್ಕೆ ಈ ಬಗ್ಗೆ ಸೂಕ್ತ ತಿದ್ದುಪಡಿಯಾದ ಮೇಲೆ ಅದನ್ನು ಖಾಯಂಗೊಳಿಸಬಹುದು. ಅದನ್ನು ಮಾಡುವ ಶಕ್ತಿ ಮಾನ್ಯ ಅರಣ್ಯ ಸಚಿವರಿಗಿದೆ, ಅವರದನ್ನು ಮಾಡುತ್ತಾರೆಂದು ನಾನು ನಂಬಿದ್ದೇನೆ.

ಈಗ ಸರ್ಕಾರದ ಮಲೆನಾಡಿನ ಭಾಗದ ಜನರಿಗೆ ವಿಶೇಷವಾಗಿದ್ದ ಎಂ.ಆರ್.ಪಿ. ಹಕ್ಕನ್ನು ಕಿತ್ತುಕೊಂಡಿದೆ. ಆಗಿನ ಬ್ರಿಟಿಷ್ ಸರ್ಕಾರ ಮಲೆನಾಡಿನ ಜನರಿಗೆ ಕೊಟ್ಟಿದ್ದ ಹಕ್ಕನ್ನು ಈ ಸರ್ಕಾರ ಕಿತ್ತುಕೊಳ್ಳುತ್ತಾ ಇರುವುದು ಸರ್ವಥಾ ತಪ್ಪು. ಅರಣ್ಯ ಉತ್ಪನ್ನಗಳ ಮತ್ತು ನಾಟಾ ಮರಗಳ ಬೆಲೆ ವಿಪರೀತವಾಗಿ ಏರಿ ಮಲೆನಾಡಿನ ಬಡ ಜನರು ಅವುಗಳನ್ನು ಬಹಿರಂಗ ಹರಾಜಿನಲ್ಲಿ ಅಥವಾ ಮರದ ಮಿಲ್‌ಗಳಲ್ಲಿ ಕೊಳ್ಳಲು ಶಕ್ತಿಇಲ್ಲದವರಾಗಿದ್ದಾರೆ. ಆದುದರಿಂದ, ಎಂ.ಆರ್.ಪಿ. ಹಕ್ಕನ್ನು ಮುಂದುವರಿಸಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಿಗೆ ಮೇಲೆ ಐದು ರೂಪಾಯಿ ಅರವತ್ತು ಪೈಸೆ ತೆರಿಗೆ ವಿಧಿಸುತ್ತಿರುವುದನ್ನು ಕಿತ್ತುಹಾಕಬೇಕು. ಕಟ್ಟಿಗೆಯನ್ನು ಮಲೆನಾಡಿನ ಭಾಗದ ಜನರಿಗಾದರೂ ಮುಫತ್ತಾಗಿ ಕೊಡುವ ವ್ಯವಸ್ಥೆಯಾಗಬೇಕು. ಈಗ ಸರ್ಕಾರದವರು ಕಾಡನ್ನು ಬೆಳೆಸಲು ಭಾರಿ ಪ್ರಮಾಣದಲ್ಲಿ ಹಣವನ್ನು ವಿನಿಯೋಗಿಸುತ್ತಿದ್ದಾರೆ. ಹೊಸದಾಗಿ ಅರಣ್ಯ ಬೆಳೆಸುವ ಸಲುವಾಗಿ ಉಪಯೋಗಿಸುವ ಹಣ ದುಂದುವೆಚ್ಚವಾಗುತ್ತಿದೆ ಎಂದು ಮಾನ್ಯ ಇಬ್ರಾಹಿಂ ಅವರು ಹೇಳಿದರು. ಅವರ ಮಾತನ್ನು ನಾನು ಸ್ವಲ್ಪ ಒಪ್ಪಲೇಬೇಕಾಗಿದೆ. ಹೊಸದಾಗಿ ಅರಣ್ಯ ಬೆಳೆಸುವ ಯೋಜನೆಯಡಿಯಲ್ಲಿ ಎಷ್ಟು ಅವ್ಯವಸ್ಥಿತವಾಗಿ ಕಾಡನ್ನು ಬೆಳೆಸುತ್ತಿದ್ದಾರೆನ್ನುವುದನ್ನು ಖುದ್ದಾಗಿ ನೋಡಿಬರಲು ನಾನು ಮಾನ್ಯ ಅರಣ್ಯ ಸಚಿವರನ್ನು ಕರೆದಿದ್ದೆ. ಈ ರೀತಿ ಇಲಾಖೆಯೇ ಹೊಸದಾಗಿ ಅರಣ್ಯ ಬೆಳೆಸುವ ಗೋಜಿಗೆ ಹೋಗದೆ ಅರಣ್ಯದ ಪಕ್ಕದಲ್ಲಿ ಬೇಸಾಯ ಮಾಡುತ್ತಿರುವ ರೈತರಿಗೆ, ಅರಣ್ಯ ಜಮೀನನ್ನು ಕೊಟ್ಟು, ಅದರಲ್ಲಿ ಅರಣ್ಯ ಇಲಾಖೆಯವರೇ ಗೊತ್ತುಪಡಿಸಿದ ಮರಗಳನ್ನು ಬೆಳೆಯಲು ಅನುಕೂಲವಾಗುವಂತೆ ಅವನಿಗೆ ಸಸ್ಯ ಮತ್ತು ಹಣ ಕೊಟ್ಟು, ಅದರಿಂದ ಬರುವ ಉತ್ಪಾದನೆಯಲ್ಲಿ ಐವತ್ತೈವತ್ತು ಭಾಗ ಸರ್ಕಾರ ಮತ್ತು ರೈತ ಹಂಚಿಕೊಳ್ಳುವ ವ್ಯವಸೆ ಮಾಡುವುದಾದರೆ, ಈಗ ಅರಣ್ಯ ಇಲಾಖೆಯವರು ಹೊಸದಾಗಿ ಅರಣ್ಯ ಬೆಳೆಸುತ್ತಿರುವುದಕ್ಕಿಂತಲೂ ಉತ್ತಮವಾದ

ರೀತಿಯಲ್ಲಿ ಅರಣ್ಯವನ್ನು ಬೆಳೆಸಬಹುದಾಗಿದೆ. ಇದನ್ನು ಸರ್ಕಾರದವರು ಪರಿಶೀಲಿಸಬೇಕೆಂದು ಹೇಳಬಯಸುತ್ತೇನೆ.

ಇನ್ನು ಅರಣ್ಯಗಳು ನಾಶವಾಗುವುದಕ್ಕೆ ಮುಖ್ಯ ಕಾರಣ ಅಣೆಕಟ್ಟುಗಳನ್ನು ಕಟ್ಟುವ ದೆಸೆಯಿಂದಾಗಿದೆ. ಅಣೆಕಟ್ಟುಗಳನ್ನು ಮತ್ತು ರಿಜರ್ವಾಯರ್‌ಗಳನ್ನು ಕಟ್ಟಲೇಬೇಕಾಗುತ್ತದೆ. ಮತ್ತು ಅವು ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗೆ ಸಹಕಾರಿಯಾಗಿವೆ. ಆದರೆ, ಮಲೆನಾಡು ಭಾಗದಲ್ಲೇ ಅಣೆಕಟ್ಟುಗಳು ಬರುತ್ತಿರುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಹೈಡ್ರೋ ಎಲೆಕ್ಟ್ರಿಕ್ ಯೋಜನೆ, ತುಂಗಭದ್ರ ಯೋಜನೆ ಹೀಗೆ ಯಾವುದೇ ಯೋಜನೆತೆಗೆದು ಕೊಂಡರೂ ಅವೆಲ್ಲ ಅರಣ್ಯವಿರುವ ಪ್ರದೇಶದಲ್ಲಿ ಬರುತ್ತಿವೆ. ಇದೇನು ಮಲೆನಾಡು ಪ್ರದೇಶವಾದ್ದರಿಂದ ಮರಗಳು ಬೆಳೆಯುತ್ತಿವೆಯೋ ಅಥವಾ ಮರಗಳು ಬೆಳೆದಿರುವ ಕಡೆಗಳಲ್ಲಿ ಅಣೆಕಟ್ಟುಗಳಾಗುತ್ತಿವೆಯೋ, ಗೊತ್ತಾಗುತ್ತಿಲ್ಲ !

ಇನ್ನು ಹೊಸದಾಗಿ ಅರಣ್ಯವನ್ನು ಬೆಳೆಸುವ ಸಂದರ್ಭದಲ್ಲಿ ಹಾಲಿ ಇರುವ ನೈಸರ್ಗಿಕ ಕಾಡನ್ನು ಕಡಿದು ಹೊಸದಾಗಿ ಬೆಳೆಸಲಿಕ್ಕೆ ಹೋಗಬಾರದು. ನೂರಾರು ವರ್ಷಗಳಿಂದ ನಿಸರ್ಗದತ್ತವಾಗಿ ಬೆಳೆದು ಬಂದ ಅರಣ್ಯವನ್ನು ಕಡಿದು ಹೊಸದಾಗಿ ನೀಲಗಿರಿ ಮರಗಳನ್ನು ನೆಡುತ್ತಿರುವುದರಿಂದ ಇಡೀ ಮಲೆನಾಡಿನ ಸೌಂದರ್ಯವೇ ನಾಶವಾಗುತ್ತಿದೆ. ದಟ್ಟ ಕಾಡಿರುವ ಕಡೆ ಬಿಟ್ಟು ತೆಳುವಾಗಿ ಕಾಡಿರುವ ಕಡೆ ಹೊಸದಾಗಿ ಕಾಡನ್ನು ಬೆಳೆಸುವ ಹಾಗೆ ಸಚಿವರು ನಿರ್ದೇಶನ ಕೊಡಬೇಕೆಂದು ಹೇಳುತ್ತೇನೆ.

ಈಗ ವ್ಯವಸಾಯ ಭೂಮಿಯನ್ನು ಪುನರ್ ಸರ್ವೆ ಮಾಡಿಸಿ, ಸರ್ಕಾರಿ ಜಮೀನನ್ನು ಎ.ಬಿ.ಸಿ.ಡಿ. ಎಂದು ವಿಭಾಗಿಸಿ, ಅದರಲ್ಲಿ ಸಿ. ಮತ್ತು ಡಿ ವಿಭಾಗದ ಜಮೀನನ್ನು ಅರಣ್ಯ ಇಲಾಖೆಗೆ ಹೊಸದಾಗಿ ಕಾಡನ್ನು ಬೆಳೆಸಲು ಕಂದಾಯ ಇಲಾಖೆಯವರು ವಹಿಸಿಕೊಟ್ಟಿದ್ದಾರೆ. ಹಾಗೆಯೇ ಅರಣ್ಯ ಇಲಾಖೆಯಲ್ಲಿರುವ ಕೃಷಿ ಯೋಗ್ಯವಾದ ಭೂಮಿಯನ್ನು ಕಂದಾಯ ಇಲಾಖೆಗೆ ವಹಿಸಿಕೊಡಲು ಮಾನ್ಯ ಅರಣ್ಯ ಸಚಿವರೇಕೋ ಜಿಪ್ಣುತನ ತೋರಿಸುತ್ತಿದ್ದಾರೆ ! ಇದನ್ನು ಆದಷ್ಟು ಬೇಗ ಕಂದಾಯ ಇಲಾಖೆಗೆ ವಹಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ಮಲೆನಾಡು ಪ್ರದೇಶದಲ್ಲಿ ಸರ್ವೆ ಮಾಡಿ ೫೦ ಎಕರೆ ಜಮೀನನ್ನು ಮೈನರ್ ಫಾರೆಸ್ಟ್ ಎಂದು ಗುರುತ್ತಿಸಿದ್ದರೆ ಅದರಲ್ಲಿ ಸುಮಾರು ೨೫ ಎಕರೆಯಷ್ಟು ಜಮೀನು ಗೋಮಾಳವಾಗಿರುತ್ತದೆ, ಅರಣ್ಯ ಇಲಾಖೆಯವರು, ತಮ್ಮ ಜಮೀನನ್ನು ಸರಿಯಾಗಿ ವಿಭಾಗಿಸಿಲ್ಲ, ಅದಕ್ಕೊಂದು ಸ್ಕೆಚ್ ಇಲ್ಲ, ಮ್ಯಾಪ್ ಇಲ್ಲ. ಅಧಿಕಾರಿಗಳಿಗೆ ಎಲ್ಲಿ ಖುಷಿ ಬರುತ್ತದೆ, ಅಲ್ಲಿ ಕಾಡುಗಳನ್ನು ಹೊಸದಾಗಿ ಮಾಡುತ್ತಿದ್ದಾರೆ. ಆದುದರಿಂದ, ಮೈನರ್ ಫಾರೆಸ್ಟ್ ಭಾಗವನ್ನು ಸರಿಯಾಗಿ ವಿಭಾಗಿಸಿ ಅದರಲ್ಲಿ ಸರ್ಕಾರಿ ಜಮೀನೆಷ್ಟಿದೆ, ಗೋಮಾಳದೆಷ್ಟಿದೆ ಮತ್ತು ಅರಣ್ಯ ಇಲಾಖೆಗೆ ಸೇರಿದ್ದು ಎಷ್ಟಿದೆ ಎಂಬುದನ್ನು ಗುರುತಿಸಬೇಕು. ಈಗ ಊರುಗಳ ಬೆಳವಣಿಗೆಗೆ ಅವಕಾಶವೀಯದಂತೆ ಊರಿನ ಮನೆಗಳ ಸುತ್ತಮುತ್ತ ಹೊಂಡ ತೆಗೆದು ಕಾಡನ್ನು ಬೆಳೆಸಲಾಗುತ್ತಿದೆ. ಇದನ್ನು ಹಾಗೇ ಮುಂದುವರಿಸಿಕೊಂಡು ಹೋಗಿದ್ದೇ ಆದರೆ, ಇಲಾಖೆ ಬೆಳೆಸಿದಂಥ ಗಿಡವನ್ನು ಊರಿನವರೇ ಕಿತ್ತು ಹಾಕುವ ಸಂದರ್ಭ ಬಂದೀತು. ಆದುದರಿಂದ, ಊರು ಮುಂದೆ ಎಷ್ಟು ಬೆಳೆಯಬಹುದೆಂಬುದನ್ನು ಯೋಚನೆ ಮಾಡಿ, ಆ ವ್ಯಾಪ್ತಿಯ ಹೊರಗಡೆ ಕಾಡನ್ನು ಬೆಳೆಸುವ ಯೋಜನೆಯಿರಿಸಿಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಮಾಫಿ ಪಾಸ್ ಬಗ್ಗೆ ಅರ್ಜಿ ಕೊಟ್ಟ ಮೂರು ತಿಂಗಳೊಳಗೆ ಅದು ಪರಿಗಣನೆಯಾಗದಿದ್ದರೆ, ಅದರ ಬಗ್ಗೆ ಕೊಡುವ ಅಕನಾಲೆಡ್ಜ್‌ಮೆಂಟ್‌ನ್ನೇ ಲೈಸೆನ್ಸ್ ಎಂದು ಪರಿಗಣಿಸಿ ರೈತರಿಗೆ ಮರ ಕಡಿಯುವುದಕ್ಕೆ ಅವಕಾಶ ಕೊಡಲಾಗುವುದೆಂದು ಮಾನ್ಯ ಸಚಿವರು ಹೇಳಿದ್ದರು. ಆದರೆ, ಲೈಸೆನ್ಸ್‌ಗಾಗಿ ಐದಾರು ತಿಂಗಳುಗಳಿಂದ ಒದ್ದಾಡುತ್ತಿರುವ ರೈತರನ್ನು ನಾವಿಂದು ಕಾಣುತ್ತಿದ್ದೇವೆ. ಆದುದರಿಂದ, ಈ ಲೈಸೆನ್ಸ್ ಬೇಗನೆ ದೊರೆಯುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ಕಾಡನ್ನಾಧರಿಸಿದ ಎಷ್ಟೋ ಕೈಗಾರಿಕೆಗಳು ಸ್ಥಾಪನೆಯಾಗುತ್ತಿವೆ. ಈ ಕೈಗಾರಿಕೆಗಳೆಲ್ಲ ನಗರ ಪ್ರದೇಶಗಳಲ್ಲಿ ಮಾತ್ರ ಸ್ಥಾಪನೆಯಾಗುತ್ತಿವೆ. ಇದು ತಪ್ಪು. ಕಾಡನ್ನಾಧರಿಸಿದ ಕೈಗಾರಿಕೆಗಳು ಹೆಚ್ಚು ಕಾಡಿರುವ ಪ್ರದೇಶಗಳಲ್ಲೇ ಸ್ಥಾಪನೆಯಾಗಬೇಕು.

ಇನ್ನು ಪ್ರಾಣಿಗಳ ಸಂರಕ್ಷಣೆ ಕುರಿತು ಒಂದು ಮಾತು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಪ್ರಾಣಿಗಳ ನಾಶ ತೀವ್ರ ಗತಿಯಲ್ಲಾಗುತ್ತಿದೆ. ಇದೇ ಪರಿಸ್ಥಿತಿ ಮುಂದೆ ಕೂಡ ಮುಂದುವರಿಯುವುದಾದರೆ ಪ್ರಾಣಿಗಳನ್ನು ನಾವು ಚಿತ್ರದಲ್ಲಿ ನೋಡುವ ಪರಿಸ್ಥಿತಿ ಬರಬಹುದೇನೋ ಎಂದು ಭಯವಾಗು

ತ್ತಿದೆ. ಕೆಲವರು ಅರಣ್ಯ ಇಲಾಖೆಯ ವಾಹನವನ್ನು ತೆಗೆದುಕೊಂಡುಹೋಗಿ ಕಾಡಿನಲ್ಲಿ ಪ್ರಾಣಿಗಳನ್ನು ಶಿಕಾರಿಯಾಡುವ ಹವ್ಯಾಸವನ್ನಿಟ್ಟು ಕೊಂಡಿದ್ದಾರೆ. ಆದುದರಿಂದ, ಅರಣ್ಯ ಇಲಾಖಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಟ್ಟು, ಪ್ರಾಣಿಗಳನ್ನು ಶಿಕಾರಿಯಾಡದ ಹಾಗೆ ಮಾಡಿದರೆ ಅವು ಉಳಿಯುತ್ತವೆ. ಪ್ರಾಣಿಗಳನ್ನು ಸಂರಕ್ಷಣೆ ಮಾಡುವ ಕಡೆಗೆ ಮಾನ್ಯ ಸಚಿವರು ಹೆಚ್ಚಿನ ಗಮನ ನೀಡಬೇಕೆಂದು ಹೇಳ ಬಯಸುತ್ತೇನೆ.

ಇನ್ನು ಜನತಾ ಗೃಹಗಳಿಗೆ ನಾಟಾಗಳನ್ನು ರಿಯಾಯತಿ ದರದಲ್ಲಿ ಕೊಡಲಾಗುವುದೆಂದು ಮಾನ್ಯ ಸಚಿವರು ಹಿಂದೆ ಹೇಳಿದ್ದರು. ಆದರೆ, ನಾಟಾಗಳ ಬೆಲೆ ಮಾರುಕಟ್ಟೆಯಲ್ಲಿ ಸಿಗುವ ಮರದ ಬೆಲೆಗಿಂತಲೂ ಜಾಸ್ತಿಯಾಗಿದೆ. ಇದನ್ನು ಸರಿಪಡಿಸಬೇಕು. ಅಲ್ಲದೆ, ಜನತಾ ಗೃಹಗಳಿಗೆ ಒಂದೂವರೆ ಇಂಚು ಗರ್ತ್ ಇರುವ ಮರವನ್ನು ಕೊಟ್ಟರೂ ಆಗುವುದಿಲ್ಲ. ಜನತಾ ಗೃಹಗಳಿಗೆ ಕೊಡುವ ಎರಡು ಸಾವಿರ ರೂಪಾಯಿ ಗಳು ಬರೀ ನಾಟಾ ಕೊಳ್ಳಲಿಕ್ಕೇ ಖರ್ಚಾಗುತ್ತದೆ. ಆದುದರಿಂದ, ಜನತಾ ಮತ್ತು ಹುಡ್ಕೋ ಯೋಜನೆಯಡಿಯಲ್ಲಿ ಬರುವ ಮನೆಗಳ ನಿರ್ಮಾಣಕ್ಕೆ ಯೋಗ್ಯ ಮರವನ್ನು ರಿಯಾಯತಿ ದರದಲ್ಲಿ ಒದಗಿಸುವ ಏರ್ಪಾಡು ಮಾಡಬೇಕೆಂದು ನಾನು ಮಾನ್ಯ ಅರಣ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಜೊತೆಗೆ ಎಲ್ಲಾ ಊರುಗಳಲ್ಲಿಯೂ ತಾವು ಸೌದೆ ಡಿಪೋಗಳನ್ನು ತೆರೆಯಲೇಬೇಕು. ಅಲ್ಲದೇ ಸೀಮೆಎಣ್ಣೆಯನ್ನು ಅಗತ್ಯವಸ್ತು ಎಂದು ಪರಿಗಣಿಸಿ ಅದನ್ನು ಸರ್ಕಾರ ತನ್ನ ಸ್ವಾಮ್ಯಕ್ಕೆ ತೆಗೆದುಕೊಂಡು,ಟಿ.ಎ.ಪಿ.ಸಿ.ಎಂ.ಗಳ ಮೂಲಕ ಹಂಚುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ನನ್ನ ಕ್ಷೇತ್ರದಲ್ಲಿ ೩-೪ರೂಪಾಯಿ ಕೊಟ್ಟರೂ ಕೂಡ ಸೀಮೆಎಣ್ಣೆ ಸಿಗುತ್ತಿಲ್ಲ. ಸೀಮೆ ಎಣ್ಣೆಗೋಸ್ಕರ ಗಲಾಟೆಗಳಾಗಿವೆ. ಹಳ್ಳಿಗಳ ಪ್ರದೇಶ ದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸೀಮೆಎಣ್ಣೆ ಸುಗಮವಾಗಿ ಸಿಗುವಂತ ವ್ಯವಸ್ಥೆಯನ್ನು ತಾವು ಮಾಡಲೇ ಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

೪-೩೦ ಪಿ. ಎಂ.

ಕಡೆಯದಾಗಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಇಲಾಖೆಯಿಂದ ಬೆಳೆಸಿದಂಥ ಮರಗಳನ್ನು ಹರಿಹರ ಪಾಲಿ ಫೈಬರ್‌ನವರಿಗೆ ೩೦ ರೂಪಾಯಿನಿಂದ ೬೫ ರೂಪಾಯಿಗಳವರೆಗೆ ಒಂದೂವರೆ ಲಕ್ಷ ಟನ್ ಕೊಡುತ್ತಿದ್ದೀರಿ. ಇದು ತೀರಾ ಅನ್ಯಾಯ; ಕಾರಣ ಒಂದು ಟನ್ ಕಟ್ಟಿಗೆಗೆ ೩೦-೪೦ ರೂಪಾಯಿ ಬೀಳುತ್ತದೆ. ಹರಿಹರ ಪಾಲಿ ಫೈಬರ್‌ನವರು ಭಾರಿ ಶ್ರೀಮಂತರು ಅವರಿಗೆ ಕಡಿಮೆ ದರದಲ್ಲಿ ನೀಲಗಿರಿ ಮರಗಳನ್ನು ಸರಬರಾಜು ಮಾಡುವುದನ್ನು ತಾವು ಕಿತ್ತುಹಾಕಬೇಕು ೬೫ರೂಪಾಯಿ ಕೊಡುವುದಕ್ಕಾಗುವುದಿಲ್ಲವೆಂದು ಅವರು ಕೋರ್ಟಿಗೆ ಹೋಗಿದ್ದಾರೆಂದು ತಿಳಿದು ಬಂದಿದೆ. ಯಾವ ಯಾವ ಕಾನೂನುಗಳನ್ನೋ ಬದಲಾವಣೆ ಮಾಡಲಾಗಿದೆ; ಈ ಒಂದು ಕಡಿಮೆ ದರಕ್ಕೆ ಒದಗಿಸತಕ್ಕ ವ್ಯವಸ್ಥೆಯನ್ನು ತಪ್ಪಿಸಿ; ಹೆಚ್ಚಿನ ಬೆಲೆಗೆ ಕೊಡುವಂತ ವ್ಯವಸ್ಥೆಯನ್ನು ತಾವು ಮಾಡುತ್ತೀರೆಂದು ನಾನು ನಂಬಿದ್ದೇನೆ.

ಮಾನ್ಯ ಶ್ರೀ ಸಿ. ಎಂ. ಇಬ್ರಾಹಿಂರವರು ನೇರವಾಗಿ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಸೌದೆ ಅಭಾವಕ್ಕೆ ಅರಣ್ಯ ಮಂತ್ರಿಗಳು ಒಬ್ಬರೇ ಕಾರಣರಲ್ಲ; ಎಲ್ಲರೂ ಕಾರಣರಾಗಿದ್ದಾರೆ ಅರಣ್ಯ ರಕ್ಷಣೆ ಮಾಡುವ ದಿಸೆಯಲ್ಲಿ ಇಡೀ ರಾಷ್ಟ್ರವ್ಯಾಪಿ ಯೋಜನೆಯನ್ನು ಹಾಕಬೇಕೆಂದು ಹೇಳುತ್ತೇನೆ. ಅಲ್ಪ ಸಂಖ್ಯಾತರಿಗೆ ಈ ಇಲಾಖೆಯಲ್ಲಿ ಸೂಕ್ತ ಅವಕಾಶ ನೀಡಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಬೇರೆ ಬೇರೆ ರಾಜ್ಯಗಳ ಅಂಕಿ ಅಂಶಗಳನ್ನು ಒದಗಿಸಿ ಸಮರ್ಪಕವಾದ ಉತ್ತರ ಕೊಡುತ್ತಾರೆಂದು ನಂಬಿದ್ದೇನೆ. ನನ್ನ ದೃಷ್ಟಿಯಲ್ಲಿ ನಮ್ಮ ರಾಜ್ಯ ಸರ್ಕಾರ ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ ಕೊಟ್ಟಂತ ಅವಕಾಶವನ್ನು ಬೇರೆ ಯಾವ ರಾಜ್ಯಗಳು ಕೊಟ್ಟಿಲ್ಲವೆಂದು ತಿಳಿದಿದ್ದೇನೆ. ಇದನ್ನು ಇಬ್ರಾಹಿಂರವರು ಒಪ್ಪುತ್ತಾರೆಂದು ತಿಳಿದಿದ್ದೇನೆ. ಭತ್ತದ ಬೆಲೆ ಕಡಿಮೆ ಯಾಗಿದೆ; ಎಂದು ಅವರು ಹೇಳಿದರು; ಕೇಂದ್ರ ಸರ್ಕಾರ ಗೋಧಿಗೆ ೧೧೫ರೂಪಾಯಿ ಮಾಡಿದೆ. ಇಬ್ರಾಹಿಂ ರವರು ಚರಣಸಿಂಗ್‌ರವರನ್ನು ಕಂಡು ಭತ್ತಕ್ಕೂ ೧೧೫ ರೂಪಾಯಿ ಬೆಲೆ ನಿಗದಿ ಮಾಡಿಸಲಿ. ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಯನ್ನು ಟೀಕೆ ಮಾಡಬೇಕೂಂತ ಮನಸ್ಸು ಬರುತ್ತದೆ. ಶ್ರೀ ಮಾನ್ ರಾಮೇಗೌಡರಲ್ಲಿ ಒಳ್ಳೆಯ ಚಾಣಾಕ್ಯತನವಿದೆ ಯೆಂದು ನನಗನಿಸುತ್ತದೆ. ಅವರು ಒಂದು ಸರ್ಕುಲರ್ ಕಳುಹಿಸಿದ್ದಾರೆ. It is entitled: 'Tentative itinerary of the members of the Legislative Assembly and Legislative Council – Visit to Karnataka Forests.'

೫ನೇ ಮೇ ೧೯೭೯ ರಂದು ಭೇಟಿ ಕೊಟ್ಟು, ಬಂಡೀಪುರಕ್ಕೆ ಭೇಟಿ ಕೊಟ್ಟು ಊಟ ತಿಂಡಿ ಮಾಡ ತಕ್ಕದ್ದು, ಸವಾರಿ ಮಾಡತಕ್ಕದ್ದು ಎಂದು ಇದೆ. ಈ ಒಂದು ಟೆಂಪ್ಟೇಷನ್ ತಮಿಳುನಾಡು ಶಾಸನ ಸಭೆಯಲ್ಲಿ ಕೂಡ ಇದೆ. ಅಲ್ಲಿ ಅಯಾಯಾ ಡಿಮ್ಯಾಂಡುಗಳು ಬಂದಾಗ ಸಂಬಂಧಪಟ್ಟ ಸಚಿವರು ಇಂಥ ಒಂದು ಅವಕಾಶವನ್ನು ಸದಸ್ಯರುಗಳಿಗೆ ಒದಗಿಸಿಕೊಡುತ್ತಾರೆ. ಟೀಕೆ ಕಡಿಮೆಯಾಗುತ್ತದೆನ್ನುವ ದೃಷ್ಟಿ ಯಿಂದ ಈ ಟೂರ್ ಪ್ರೋಗ್ರಾಂ ಕೊಟ್ಟಿದ್ದಾರೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದುದರಿಂದ ನಾನು ಹೆಚ್ಚಿಗೆ ಟೀಕೆ ಮಾಡುವುದಕ್ಕೆ ಹೋಗದೆ, ಒಂದೆರಡು ವಿಚಾರಗಳನ್ನು ಮಾತ್ರ ಮಾನ್ಯ ಮಂತ್ರಿ ಗಳ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಬಹಳ ಜನ ಸದಸ್ಯರು ರೈತರ ಪರವಾಗಿ ಮಾತನಾಡಿ ದ್ದಾರೆ, ಬೆಳೆಗಳು ಬಿದ್ದು ಹೋಗಿವೆ ಎಂದು ಹೇಳಿದ್ದಾರೆ. ರೈತರ ಬಗ್ಗೆ ಕಾಳಜಿ ಇರತಕ್ಕವರು, ದೇಶದ ಬೆನ್ನೆಲುಬು ಆಗಿರತಕ್ಕ ರೈತ ಜನಾಂಗಕ್ಕೆ ನಾವು ಕೂಡ ಸೇರಿದ್ದೇವೆ. ಆದರೆ, ಸುಮಾರು ಒಂದು ಕೋಟಿ ಜನ ಕರ್ನಾಟಕ ರಾಜ್ಯದ ನಗರಗಳಲ್ಲಿ ವಾಸ ಮಾಡುತ್ತಿದ್ದಾರೆ. ನನ್ನ ಹತ್ತಿರ ಎಲ್ಲಾ ನಗರಗಳ ಅಂಕಿ ಅಂಶಗಳೂ ಇವೆ. ನಗರಗಳಲ್ಲಿ ವಾಸ ಮಾಡತಕ್ಕ ಒಂದು ಕೋಟಿ ಜನ ಬಳಕೆದಾರರ ಪರವಾಗಿ ಏನಾ ದರೂ ಒಂದು ವಿಷಯ ಅವರಿಗೆ ಪರಿಹಾರ ಕೊಡತಕ್ಕದ್ದು ಇದರಲ್ಲಿ ಇದೆ ಎಂದು ನೋಡಿದರೆ ಮಾನ್ಯ ಮಂತ್ರಿಗಳು ಇವರ ಬಗ್ಗೆ ಏನೂ ಸೂಚಿಸಿಲ್ಲ ಈ ಮಾತನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ನಾಗರೀಕ ಸರಬರಾಜು ಇಲಾಖೆಯ ವಾರ್ಷಿಕವರದಿಯಲ್ಲಿ, ಮೊದಲನೆ ಪಂಕ್ತಿಯಲ್ಲಿ ಬೆಲೆ ಏರಿಕೆ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. "The main functions of the Department of Food and Civil Supplies are procurement and distribution of foodgrains. However, in the recent past, the scale of operations have increased enormously due to the implementation of the various control orders undertaken to stabilise the prices and ensure more equitable distri-bntion of essential commodities."

ಈ ದೃಷ್ಟಿಯಿಂದ ಮಾತನಾಡಬೇಕಾದರೆ, ಈ ಖಾತೆ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಮೊನ್ನೆ ತಾನೇ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ, ಇನ್ನೊಮ್ಮೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದೇ ಫೆಬ್ರವರಿಯಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಏನಿದ್ದುವು, ಅವು ಮಾರ್ಚಿಯಲ್ಲಿ ಏಕಾ ಏಕಿ ಜಾಸ್ತಿಯಾದವು. ಒಂದು ಕೆ.ಜಿ. ಗೋಧಿಗೆ ೧.೬೫ ಪೈಸೆ ಇತ್ತು, ಅದು ೧.೭೦ ಪೈಸೆ ಆಯಿತು. ಅಕ್ಕಿ ೧.೯೦ ಇದ್ದುದು, ೨.೧೦ ಪೈಸೆ ಆಯಿತು. ರಾಗಿ ೧.೧೦ ಪೈಸೆ ಇದ್ದುದು, ೧.೧೫ ಏರಿತು. ಇದು ಒಂದು ತಿಂಗಳಲ್ಲಿ ಈ ಪ್ರಮಾಣದಲ್ಲಿ ಬೆಲೆ ಏರಿದೆ. ಸರ್ಕಾರ ಬೆಲೆ ತಡಗಟ್ಟುವುದರಲ್ಲಿ ಸಂಪೂರ್ಣವಾಗಿ ಅಸಮರ್ಥವಾಗಿದೆ. ಕಡಲೇಕಾಯಿ ಎಣ್ಣೆ ೬.೯೦ ರಿಂದ ೭.೫೦ಕ್ಕೆ ಏರಿತು, ಸಕ್ಕರೆ ೨-೧೮ರಿಂದ ೨.೭೦ಕ್ಕೆ ಏರಿತು,

ಶ್ರೀ ಜಿ. ರಾಮೇಗೌಡ.—ನಮ್ಮಲ್ಲಿ ಕಡಿಮೆ ಬೆಲೆಯ ಅಕ್ಕಿ ಇದ್ದರೂ ಅವರು ಅಲ್ಲಿ ಹೋಗಿ ಕೊಂಡುಕೊಂಡರೆ ನಾವು ಜವಾಬ್ದಾರರೆ ?

ಶ್ರೀ ಪಿ. ರಾಂದೇವ್.—ನಿಮ್ಮಲ್ಲಿ ಕಡಿಮೆ ಬೆಲೆಯ ಅಕ್ಕಿ ಇದೆ, ತಾವು ಹುಳ ಬಿದ್ದ ಅಕ್ಕಿ ಕೊಡ ತ್ತೀರಿ. ಕಬ್ಬಿಣದ ಗುಂಡು ಬೆರೆಸಿರತಕ್ಕ ಗೋಧಿ ಕೊಡುತ್ತೀರಿ, ಕಲಬೆರಕೆ ಮಾಡಿರತಕ್ಕ ಎಣ್ಣೆ ಕೊಡ ತ್ತೀರಿ. ಸ್ವಾಮಿ, ನಾವು ಕೊಂಡು ತಿನ್ನತಕ್ಕ ಜನ, ನಾವು ಬೆಳೆಯತಕ್ಕ ಜನ ಅಲ್ಲ. ನಾಗರೀಕ ಸರಬರಾಜು ಇಲಾಖೆ ಇಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆಯೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ ಬೆಲೆ ಏರಿಕೆಯನ್ನು ತಡೆಗಟ್ಟತಕ್ಕದ್ದು ತಮ್ಮ ಕರ್ತವ್ಯ. ಸರ್ಕಾರದ ಸ್ವಾಧೀನದಲ್ಲಿ ಸಹಕಾರ ಸಂಘಗಳು ಇವೆ, ಮಾರುಕಟ್ಟೆಯಲ್ಲಿ ಬೆಲೆ ಏರಿದ ತಕ್ಷಣ ಏಕ್‌ದಮ್ ಇವರು ಏರಿಸುತ್ತಾರೆ. ಕೋಟ್ಯಾಂತರ ರೂಪಾಯಿಗಳನ್ನು ಸಹಕಾರ ಸಂಘಗಳಿಗೆ ಸಾಲವಾಗಿ ಕೊಡುತ್ತೀರಿ, ಕಡಿಮೆ ಬಡ್ಡಿ ಪ್ರಮಾಣದಲ್ಲಿ ಸಾಲವನ್ನು ಕೊಡುತ್ತೀರಿ

ಅವರು ಬೇಕಾದಷ್ಟು ಆಹಾರ ಪದಾರ್ಥಗಳನ್ನು ಸಂಗ್ರಹಣೆ ಮಾಡುತ್ತಾರೆ, ಸಂಗ್ರಹಣೆ ಮಾಡತಕ್ಕ ಆಹಾರ ಪದಾರ್ಥಗಳನ್ನು ಮಾರುಕಟ್ಟೆಯಲ್ಲಿ ಬಜಾರಿನಲ್ಲಿ ಬೆಲೆ ಏರಿದ ತಕ್ಷಣ ಅಷ್ಟಕ್ಕೆ ಅಥವಾ ಅದಕ್ಕಿಂತ ಜಾಸ್ತಿ ಬೆಲೆಗೆ ಮಾರಾಟ ಮಾಡುತ್ತಾರೆ. ಇದನ್ನು ತಾವು ತಡೆಹಿಡಿಯಬೇಕು. ಒಂದನೆಯದಾಗಿ ತಮ್ಮ ಸ್ಟೆಬಿಲೈಸೇಷನ್ ಆಫ್ ಪ್ರೈಸ್ ಎಲ್ಲಿದೆ. ಇಲ್ಲಿ ತಮ್ಮ ನೀತಿ ಪೂರ್ತಿ ವಿಫಲವಾಗಿದೆ ಎಂದು ಹೇಳುತ್ತೇನೆ. ಯಾವಾಗ ಆಹಾರಧಾನ್ಯಗಳ ಬೆಲೆ ಏರುತ್ತದೆ ಅಗ ಬಫರ್ ಸ್ಟಾಕ್ ಮಾರ್ಕೆಟ್‌ನಲ್ಲಿ ಬಿಟ್ಟು ತಮ್ಮ ಫೇರ್ ಪ್ರೈಸ್ ಡಿಪೋಗಳಲ್ಲಿ ಅವರ ಕೈಗೆ ಎಟಕುವ ಬೆಲೆಯಲ್ಲಿ ಅಕ್ಕಿ, ರಾಗಿ, ಮಾರಾಟ ಮಾಡಬೇಕು. ಆದರೆ ಇದು ಆಗುತ್ತಾ ಇಲ್ಲ. ಇನ್ನು ಈಕ್ವಿಟಿಬಲ್ ಡಿಸ್ಟ್ರಿಬ್ಯೂಷನ್ ಬಗ್ಗೆ ಹೇಳಬೇಕು ಅಂದರೆ ಕೆಲವು ಆಹಾರ ಧಾನ್ಯಗಳು ನಿಮ್ಮ ಫೇರ್‌ಪ್ರೈಸ್ ಡಿಪೋಗಳಲ್ಲಿ ನ್ಯಾಯ ಬೆಲೆಯಲ್ಲಿ ಸಿಕ್ಕುತ್ತದೆ. ಇನ್ನು ಕೆಲವು ಕಡೆ ನ್ಯಾಯಬೆಲೆ ಅಂಗಡಿಗಳಲ್ಲಿ ದೊರೆಯುವುದಿಲ್ಲ. ಇಂತಹವು ಬೇಕಾದಷ್ಟು ಇದೆ. ಇನ್ನು ತಮ್ಮ ವರದಿಯನ್ನು ನೋಡಿದರೆ ಇಲ್ಲಿ ಯಾರ ಮೇಲೂ ಕ್ರಮ ತೆಗೆದುಕೊಂಡಿರುವ ವಿಚಾರ ಒಂದೂ ಇಲ್ಲ ಸ್ಟೇಟ್‌ಮೆಂಟ್ ಷೋಯಿಂಗ್ ದಿ ಕಂಟ್ರೋಲ್ ಆರ್ಡ‌ರ್ಸ್ ಸುಮಾರು ೨೦–೩೦ ಕಂಟ್ರೋಲ್ ಆರ್ಡರ್ಸ್ ಇದೆ. ಈ ಆರ್ಡರ್ಸ್ ಪ್ರಕಾರ ಎಷ್ಟು ಜನ ಬ್ಲಾಕ್‌ಮಾರ್ಕೆಟರ್ಸ್ ಹಿಡಿದಿದ್ದೀರಾ ? ಎಷ್ಟು ಜನ ಹೋಲ್ಡರ್ಸ್ ಹಿಡಿದಿದ್ದೀರಾ ? ಎಷ್ಟು ಜನ ಪ್ರಾಫಿಟಿಯರ್ಸ್ ಹಿಡಿದಿದ್ದೀರಾ? ಒಂದೂ ಕಾಣುವುದಿಲ್ಲ. ತಮ್ಮ ಡಿಪಾರ್ಟ್‌ಮೆಂಟ್, ಬ್ಲಾಕ್‌ಮಾರ್ಕೆಟ್ ಮಾಡತಕ್ಕವರು ಶಾಮೀಲಾಗಿ ಇಬ್ಬರೂ ಸೇರಿ ಲೂಟಿ ಮಾಡತಕ್ಕದ್ದು ಕಾಣುತ್ತದೆ. ಗ್ರಾಹಕರಿಗೆ ತಮ್ಮ ಡಿಪಾರ್ಟಮೆಂಟಿನಿಂದ ಏನೇನೂ ಉಪಯೋಗವಾಗಿಲ್ಲ ಎಂದು ಹೇಳುತ್ತೇನೆ. ಇನ್ನು ಲೆವಿ ಬಗ್ಗೆ ಒಂದು ಅಂಕಿ ಅಂಶ ಕೊಟ್ಟಿದ್ದೀರಿ ಸುಮಾರು ೩ ಲಕ್ಷ ೧೭ ಸಾವಿರ ಟನ್ ಅಕ್ಕಿಯನ್ನು ಮಾತ್ರ ಟಾರ್ಗೆಟ್ ಮಾಡಿದ್ದೀರಾ, ಆದರೆ ಪ್ರಕ್ಯೂರ್ ಮಾಡಿರುವುದು ೧ ಲಕ್ಷ ೧೦ ಸಾವಿರ ಟನ್ ಮಾತ್ರ. ಇನ್ನು ಟಾರ್ಗೆಟ್ ಫಾರ್ ಪ್ರಕ್ಯೂರಮೆಂಟ್ ಆಫ್ ಪ್ಯಾಡಿ ಅಂಡ್ ಜವಾರ್, ಬಗ್ಗೆ ಟಾರ್ಗೆಟ್ ಏನು ಹಾಕಿಕೊಂಡಿದ್ದೀರಿ ಆದರ ಬಗ್ಗೆ ಹೇಳುತ್ತೇನೆ. ೨ ಲಕ್ಷ ೫೦ ಸಾವಿರ ಟನ್ ಟಾರ್ಗೆಟ್ ಹಾಕಿಕೊಂಡಿದ್ದಿರಿ ಆದರೆ ೧ ಲಕ್ಷ ೩೨ ಸಾವಿರ ಟನ್ ಭತ್ತವನ್ನು ಮಾತ್ರ ಪ್ರಕ್ಯೂರ್ ಮಾಡಿದ್ದೀರಾ. ಆದೇ ರೀತಿ ಜವಾರ್ ಬಗ್ಗೆ ೬೦ ಸಾವಿರ ಟನ್ ಟಾರ್ಗೆಟ್ ಹಾಕಿಕೊಂಡಿದ್ದು, ೧೬ ಸಾವಿರ ಮಾತ್ರ ಪ್ರಕ್ಯೂರ್ ಮಾಡಿದ್ದೀರಿ. ಏತಕ್ಕೆ ಈ ರೀತಿ ಮಾಡಬೇಕು. ಈಗ ಇನ್ನೊಂದ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಅದು ಏನೆಂದರೆ Statement showing the allotment and off-take of food-grains in the State from January 1978 to February 79. ಆದರಲ್ಲಿ ಅಲಾಟ್‌ಮೆಂಟ್ ಅದು ಒಂದು ಕಡೆ. ಲೆವಿ ಇನ್ನೊಂದು ಕಡೆ ನೀವು ಕೊಟ್ಟಿರತಕ್ಕದ್ದು ೩ ಲಕ್ಷ ೧೭ ಸಾವಿರ ಟನ್ ಟಾರ್ಗೆಟ್, ಪ್ರಕ್ಯೂರ್ ೧ ಲಕ್ಷ ೧೦ ಸಾವಿರ ಟನ್. ಆದೇ ರೀತಿ ೧ ಲಕ್ಷ ೨೦ ಸಾವಿರ ಟನ್ ಗೋಧಿಯನ್ನು ಅಲಾಟ್ ಮಾಡಿದ್ದೀರಾ, ಆದರೆ ನ್ಯಾಯಬೆಲೆ ಅಂಗಡಿಯವರು ತೆಗೆದುಕೊಂಡಿರತಕ್ಕದು ೨೦ ಸಾವಿರ ಟನ್. ಏತಕ್ಕೆ ಇಷ್ಟೊಂದು ಕಡಿಮೆ ತೆಗೆದುಕೊಳ್ಳುತ್ತಿದ್ದಾರೆ ಎನುವ ಬಗ್ಗೆ ಕಾರಣ ಕಂಡುಹಿಡಿದಿದ್ದೀರಾ ? ಈಗ ನೀವು ಅಲಾಟ್ ಮಾಡಿರತಕ್ಕ ಒಂದು ಸ್ಟಾಕ್ ಏನಿದೆ, ಅದನ್ನು ಫೇರ್‌ಪ್ರೈಸ್ ಡಿಪೋಗಳವರಾಗಲಿ, ಸೊಸೈಟಿಯವರಾಗಲಿ, ಏತಕ್ಕೆ ಲಿಫ್ಟ್ ಮಾಡುತ್ತಾ ಇಲ್ಲ ಎನ್ನುವ ಬಗ್ಗೆ ಕಾರಣ ಕೊಟ್ಟಿಲ್ಲ. ಇದರಿಂದ ನನಗಾದರೂ ಅನ್ನಿಸುತ್ತದೆ, ನೀವು ಕೊಡತಕ್ಕ ಪದಾರ್ಥಗಳು ತಿನ್ನುವಂತಹ ಪರಿಸ್ಥಿತಿಯಲ್ಲಿ ಇರುವುದಿಲ್ಲ, ಅಷ್ಟು ಕೆಟ್ಟಿರುತ್ತವೆ. ಅಂತಹ ಪದಾರ್ಥ ಕೊಡುವುದರಿಂದ ಜನರು ತೆಗೆದುಕೊಳ್ಳುವುದಿಲ್ಲ. ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಇನ್ನು ಲೆವಿ ವಿಚಾರ ಹೇಳಬೇಕಾದರೆ ದಯವಿಟ್ಟು ಇದನ್ನು ಕೈ ಬಿಡುವುದು ಒಳ್ಳೆಯದು ಎಂದು ಹೇಳುತ್ತೇನೆ. ನೀವು ಲೆವಿ ಹಾಕಿರುವುದು ಒಂದು, ಪ್ರಕ್ಯೂರ್ ಮಾಡಿರುವುದು ಒಂದು. ಆದುದರಿಂದು ಇದನ್ನು ಕೈ ಬಿಡಿ, ಇಲ್ಲ ಈ ನೀತಿ ಸರಳಗೊಳಿಸಿ ಎಂದು ಹೇಳುತ್ತೇನೆ. ಇದರಲ್ಲಿ ಲಂಚಕ್ಕೆ ಆವಕಾಶ ಕೊಟ್ಟಿರುವುದು ಕಂಡುಬರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಲೆವಿಯನ್ನು ಬಲತ್ಕಾರವಾಗಿ ತೆಗೆದುಕೊಳ್ಳುವ ಬಗ್ಗೆ ಕೈ ಬಿಡುವುದು ಒಳ್ಳೆಯದು. ಇನ್ನು ಬೆಂಗಳೂರು ಜಿಲ್ಲೆಯಲ್ಲಿ ೧೮೩೨ ಡಿಪೋಗಳ ಮುಖಾಂತರ ಡಿಸ್ಟ್ರಿಬ್ಯೂಷನ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಇತ್ತೀಚೆಗೆ ಕೇಂದ್ರ ಸರ್ಕಾರದ ಮಂತ್ರಿಗಳು ಅತ್ಯಾವಶ್ಯಕ ವಸ್ತುಗಳನ್ನು ಜೂನ್ ಒಂದರಿಂದ ಸಾರ್ವಜನಿಕ ವಿತರಣೆ ಮಾಡುತ್ತೇವೆಂದು ಮಾನ್ಯ ಮೋಹನಧಾರಿಯ ಅವರು ಹೇಳುತ್ತಿದ್ದಾರೆ. ಈ ಪದ್ಧತಿಯಲ್ಲಿ ಇನ್ನೂ ಕೆಲವು ಎಸೆನ್‌ಷಿಯಲ್ ಆರ್ಟಿಕಲ್ಸ್ ಸೇರಿಸಿಕೊಳ್ಳಬೇಕಾದ್ದು ಕಾಣುತ್ತದೆ. ಈಗ ಕೆರೋಸಿನ್ ಮಾಡುತ್ತಿದ್ದೀರಿ. ಆದರ ಜೊತೆಯಲ್ಲಿ ಈ ಫ್ಯೂಯಲ್ ಏನಿದೆ ಅದನ್ನು

ಎಸೆನ್‌ಷಿಯಲ್ ಆರ್ಟಿಕಲ್ಸ್‌ನಲ್ಲಿ ತರತಕ್ಕದ್ದು ಒಳ್ಳೆಯದು. ಏಕೆಂದರೆ ಒಂದು ಹೆಣ ಸುಡಬೇಕಾದರೆ ಸುಮಾರು ಫ್ಯೂಯಲ್ ಬೇಕಾಗುತ್ತದೆ. ನಿಮ್ಮ ಅಂಗಡಿಗಳು ಎಲ್ಲಿಯೋ ಇರುತ್ತವೆ. ಅಲ್ಲಿ ಕಟ್ಟಿಗೆ ಸಿಕ್ಕುವುದಿಲ್ಲ. ಅಲ್ಲಿಗೆ ಬಂದವರಿಗೆ ಹೆಣ ಸುಡುವಷ್ಟು ಸೀಮೆ ಎಣ್ಣೆ, ಕಟ್ಟಿಗೆ ಸಿಕ್ಕದೇ ೧೦ ರೂಪಾಯಿ ನಿಂದ ೨೦೦ ರೂಪಾಯಿಗಳವರೆಗೆ ಖರ್ಚು ಬೀಳುವುದರಿಂದ ಬಹಳ ತೊಂದರೆಯಾಗಿದೆ. ಆದುದರಿಂದ ಸ್ಮಶಾನದಲ್ಲಿ ಸರ್ಕಾರದಿಂದ ಒಂದು ಡಿಪೋ ಮಾಡಿ ಸತ್ತವರ ಬಗ್ಗೆ ಕಳಕಳಿ ಇಟ್ಟು, ಯಾರೇ ಸಾಯಲಿ, ಅವರ ಕರ್ಮಾಂತರಕ್ಕೆ ೧೦ ಟನ್ ಸೌದೆ ಕಂಟ್ರೋಲ್ ರೇಟ್‌ನಲ್ಲಿ ಸಿಕ್ಕತಕ್ಕ ವ್ಯವಸ್ಥೆಯನ್ನು ಮಾಡ ಬೇಕು. ಇವೊತ್ತು ಒಂದು ಟನ್ ಕಬ್ಬಿಗೆ ೬೦ ರೂಪಾಯಿ, ಇದೆ, ಅದೇ ಒಂದು ಟನ್ ಸೌದೆಗೆ ೧೨೦ ರೂಪಾಯಿ ಇದೆ. ಆದರೆ ಕಬ್ಬಿನಲ್ಲಿ ಹೆಣ ಸುಡಲಿಕ್ಕೆ ಆಗುವುದಿಲ್ಲ.

ಶ್ರೀ ಎಸ್. ಎಮ್. ಶೀರನಾಳಿ ಚಂದ್ರಶೇಖರ್.—ಒಂದು ಹೆಣ ಸುಡಲಿಕ್ಕೆ ೧೦ ಟನ್ ಸೌದೆ ಬೇಕಾಗುವುದಾದರೆ. ಬಹುಶಃ ಬಕಾಸುರ ಇದ್ದ ಹಾಗೆ ಇರಬೇಕು ಎಂದು ಕಾಣುತ್ತದೆ.

ಶ್ರೀ ಪಿ. ರಾಂದೇವ್.—ನಾನು ಸರ್ಕಾರವನ್ನು ಸತ್ತವರ ಪರವಾಗಿ ಕೇಳಿಕೊಳ್ಳುತ್ತೇನೆ. ಅವರಿಗೆ ಕಂಟ್ರೋಲ್ ರೇಟ್‌ನಲ್ಲಿ ಸೌದೆ ಕೊಡುವಂತಹ ಏರ್ಪಾಡು ಮಾಡಬೇಕು. ಏಕೆಂದರೆ ಇದರ ಬಗ್ಗೆ ನಾನು ಅಲ್ಲಿ ಕಣ್ಣಾರೆ ನೋಡಿದ್ದೇನೆ. ಅಲ್ಲದೇ ಮೊನ್ನೆ ದಿವಸ ಕಾರ್ಪೊರೇಷನ್ ಕಮಿಷನರ್ ಅವರನ್ನು ಕೂಡ ಕರೆದುಕೊಂಡು ಹೋಗಿ ತೋರಿಸಿದ್ದೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಹಿಂದೆ ಸತ್ತವರ ಪರವಾಗಿ ಕೇಳಿದರೆ ಪ್ರಯೋಜನವಿಲ್ಲ. ಮುಂದೆ ಸಾಯುವವರ ಪರವಾಗಿ ಕೇಳುವುದು ಒಳ್ಳೆಯದು.

ಶ್ರೀ ಪಿ. ರಾಂದೇವ್.—ಮಾನ್ಯ ರಾಮೇಗೌಡರು ಮಲ್ಲೇಶ್ವರದಲ್ಲಿ ಇದ್ದರು. ಶ್ರೀರಾಂಪುರ ದಲ್ಲಿ ಸ್ಮಶಾನ ಇದೆ. ಅಲ್ಲಿ ಒಂದು ಸಾರಿ ಒಂದು ಹೆಣವನ್ನು ಅರ್ಧಂಬರ್ಧ ಸುಟ್ಟು ಹಾಗೆ ಬಿಟ್ಟು ಹೋಗಿದ್ದರು, ಅದರ ಬಗ್ಗೆ ಕಾರ್ಪೊರೇಷನ್ ಕಮಿಷನರ್ ಅವರು ಅದನ್ನು ತೆಗೆಸಿ ಸರಿಪಡಿಸಿದರು. ಅಲ್ಲಿ ಏನಾಗುತ್ತದೆ ಎಂದರೆ ಅರ್ಧ ಸುಟ್ಟ ಮೇಲೆ ಕಟ್ಟಿಗೆ ತೆಗೆದುಕೊಂಡು ಹೋಗುತ್ತಾರೆ. ಮತ್ತೆ ಅದನ್ನೇ ಮಾರಿ ಇನ್ನೊಂದು ಹೆಣವನ್ನು ಸುಡುವುದಕ್ಕೆ ತರುತ್ತಾರೆ.

ಶ್ರೀಮತಿ ಎಸ್. ಪ್ರಮೀಳ.—ಮೆಡಿಕಲ್ ಕಾಲೇಜಿಗೆ ಕಳುಹಿಸಿದರೆ ಅನುಕೂಲವಾಗುತ್ತದೆ.

ಶ್ರೀ ಪಿ. ರಾಂದೇವ್.—ಈಗ ಒಟ್ಟಿನಲ್ಲಿ ಸತ್ತವರಿಗೆ ಡಿಪೋ ಮುಖಾಂತರ ೧೦ ಟನ್ ಸೌದೆ ಸಿಕ್ಕುವಂತಹ ವ್ಯವಸ್ಥೆ ಮಾಡಬೇಕು.

ಶ್ರೀ ಎಸ್. ಎಮ್. ಶೀರನಾಳಿ ಚಂದ್ರಶೇಖರ್.—ಮಾನ್ಯ ಸದಸ್ಯರಿಗೆ ೧೦ ಟನ್ ಕಟ್ಟಿಗೆಗೆ ಎಷ್ಟು ಬರುತ್ತದೆ ಎನ್ನುವುದು ಸರಿಯಾಗಿ ಅರ್ಥವಾಗಿಲ್ಲ ಎಂದು ಕಾಣುತ್ತದೆ.

ಶ್ರೀ ಪಿ. ರಾಂದೇವ್.—೧೦ ಟನ್ ಬೇಡ, ೫ ಟನ್ ಕಟ್ಟಿಗೆಯಾದರೂ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು,

ಶ್ರೀ ಮತಿ ಎಸ್. ಪ್ರಮೀಳ.—ಈಗ ಇರುವವರಿಗೆ ಸೌದೆ ಇಲ್ಲ.

ಶ್ರೀ ಮಂಳ್ಳೂರು ಅನಂದರಾವ್.—ಅಧ್ಯಕ್ಷರೆ, ಈಗ ಒಬ್ಬರನ್ನು ಸುಡಬೇಕಾದರೆ ಎಷ್ಟು ಟನ್ ಸೌದೆ ಬೇಕಾಗುತ್ತದೆ ಎನ್ನುವ ಬಗ್ಗೆ ವಿವಾದಾತ್ಮಕ ಸಂಶಯವಾಗಿದೆ. ಅದಕ್ಕೋಸ್ಕರ ಒಂದು ಕಮಿಟಿ ಮಾಡುವುದು ಒಳ್ಳೆಯದು.

ಛೇರ್‌ಮೆನ್‌ರವರು.—ಅದಕ್ಕೆ ತಮ್ಮನ್ನೇ ಛೇರ್‌ಮನ್ ಮಾಡೋಣ.

ಶ್ರೀ ಪಿ. ರಾಮದೇವ್.—ಮಾನ್ಯ ರಾಮೇಗೌಡರೂ ಕೂಡ ಸಹಕಾರಿ ರಂಗದಲ್ಲಿ ಬಹಳ ಅನುಭವವನ್ನು ಪಡೆದಿದ್ದಾರೆ. ಇವತ್ತು ಏನಾಗಿದೆ ಎಂದರೆ, ಕಂಟ್ರೋಲ್ಡ್ ಆರ್ಟಿಕಲ್ಸ್‌ನ್ನು ಹಂಚು ವುದರಲ್ಲಿ ವಂಚನೆ ನಡೆಯುತ್ತಿದೆ. ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಅವ್ಯವಹಾರ ನಡೆಸಿ ತಮ್ಮ ಜೇಬುಗಳಿಗೆ ಬಿಟ್ಟುಕೊಳ್ಳುತ್ತಾರೆ. ಇದು ಸಹಕಾರಿ ರಂಗದಲ್ಲಿ ಆಗುತ್ತಿರುವ ಮೊದಲನೇ ದುರ್ವ್ಯವ ಹಾರ. ಆದ್ದರಿಂದ ಸರ್ಕಾರದವರು ಈ ದುರ್ವ್ಯವಹಾರ ತಪ್ಪಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳ ಬೇಕು. ನಾನು ಏತಕ್ಕೆ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ, ಅಳತೆಯಲ್ಲಿ ಕಡಿಮೆ ಕೊಡುತ್ತಿದ್ದಾರೆ, ತೂಕದಲ್ಲಿ ಕಡಿಮೆ ಕೊಡುತ್ತಿದ್ದಾರೆ. ಉತ್ತಮವಾದ ಪದಾರ್ಥಗಳು ಜನ ಸಾಮಾನ್ಯರಿಗೆ ಸಿಕ್ಕುತ್ತಿಲ್ಲ.

ಇದೆಲ್ಲಕ್ಕೂ ಹೆಚ್ಚಾಗಿ ಕಲಬೆರಕೆ ಪದಾರ್ಥಗಳ ಹಾವಳಿ. ನಾವು ಹಳ್ಳಿಗಳ ಕಡೆ ಹೋಗಿ ಅಲ್ಲಿನ ಕಾಯಿ ಪಲ್ಲೆಗಳನ್ನು ಉಪಯೋಗಿಸಿದರೆ ಆರೋಗ್ಯವಂತರಾಗಿರುತ್ತೇವೆ. ಆದರೆ ಅದೇ ಬೆಂಗಳೂರು ಮುಂತಾದ ನಗರ ಪ್ರದೇಶಗಳಿಗೆ ಬಂದು ಇಲ್ಲಿನ ತರಕಾರಿಯನ್ನು ಉಪಯೋಗಿಸಿದರೆ ಆರೋಗ್ಯ ಕೆಡುತ್ತದೆ. ನಮ್ಮ ಜೀವಮಾನ ಪರ್ಯಂತ ಬರೀ ಕಲಬೆರಕೆಯಲ್ಲೇ ಆಗಿಹೋಗಿದೆ. ನಾವು ಯಾವುದೇ ವಸ್ತುವನ್ನೂ ತೆಗೆದುಕೊಂಡರೂ ಅದರಲ್ಲಿ ಮೊದಲು ಕಾಣುವುದು ಕಲಬೆರಕೆ. ತಮಗೆ ಒಂದು ಉದಾಹರಣೆ ಕೊಡುವುದಾದರೆ, ನಮ್ಮ ಬೆಂಗಳೂರು ನಗರದಲ್ಲಿ ಸುಮಾರು ೧೦೦–೧೫೦ ಕೇಸುಗಳನ್ನು ಕಲಬೆರಕೆಗೆ ಸಂಬಂಧಿಸಿದಂತೆ ಹಾಕಿದ್ದಾರೆ. ಆದರೆ ಅದನ್ನು ಸಾಬೀತು ಮಾಡಿ ಶಿಕ್ಷೆ ಕೊಟ್ಟಿರುವುದು ಒಂದು ನಿದರ್ಶನವೂ ಕೂಡ ಇಲ್ಲ. ಆದ್ದರಿಂದ ತಮ್ಮ ಮೂಲಕ ನಾನು ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ ಮೊದಲು ಈ ಕಲಬೇರಕೆ ತಪ್ಪಿಸುವ ವಿಚಾರದಲ್ಲಿ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು.

ಸ್ವಾಮಿ, ಇನ್ನು ಕಂಟ್ರೋಲ್ ಬಟ್ಟೆ ವಿಚಾರದಲ್ಲಿ ಒಂದು ಮಾತು ಹೇಳುವುದಾದರೆ, ಇದು ಬಡವರಿಗಾಗಿ ತಯಾರು ಮಾಡತಕ್ಕದ್ದು. ಈ ಬಟ್ಟೆಯನ್ನು ಕರ್ನಾಟಕ ಕೋ ಆಪರೇಟಿವ್ ಕನ್‌ಸ್ಯೂಮರ್ಸ್ ಫೆಡರೇಷನ್‌ನವರ ಮೂಲಕ ಹಂಚುತ್ತಿದ್ದೀರಿ. ಆದರೆ ಇಲ್ಲಿ ಏನಾಗುತ್ತಿದೆ ಎಂದರೆ, ಅವರು ಕಂಟ್ರೋಲ್ ಬಟ್ಟೆಯನ್ನು ಮಾರಾಟ ಮಾಡಿದಂತೆ ಬಿಲ್ ಹಾಕಿ ತೋರಿಸಿದರೂ ಅದನ್ನು ಕೊಡುವುದು ಮಾತ್ರ ವರ್ತಕರಿಗೆ. ಆದ್ದರಿಂದ ಇದನ್ನು ಮೊದಲು ತಪ್ಪಿಸಿ ಬಡ ಜನತೆಗಾಗಿ ತಯಾರಾಗುವ ಕಂಟ್ರೋಲ್ ಬಟ್ಟೆ ಬಡವರಿಗೇ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಬೆಂಗಳೂರಿನ ಸುತ್ತಮುತ್ತಲೂ ಹಸಿರು ಗಿಡಗಳನ್ನು ಬೆಳಸಿ ಇದನ್ನು ಗ್ರೀನ್ ಬೆಲ್ಟ್ ಏರಿಯಾ ಆಗಿ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಆದನ್ನು ಏನೂ ಮಾಡಿದಂತೆ ಕಾಣುತ್ತಿಲ್ಲ. ಇವತ್ತು ಬೆಂಗಳೂರಿನ ಉಷ್ಣಾಂಶ ಸುಮಾರು ೩೫–೩೬ ಡಿಗ್ರಿಗೆ ಹೋಗಿದೆ. ನಗರದಲ್ಲಿನ ಜಮೀನನ್ನೆಲ್ಲಾ ಕೇವಲ ಮನೆ ಕಟ್ಟುವ ಸಲುವಾಗಿ ನಿವೇಶನಗಳಾಗಿ ಮಾಡುತ್ತಿದ್ದೀರಿ. ಆದ್ದರಿಂದ ಇನ್ನು ಮುಂದೆ ಮನೆ ನಿವೇಶನಗಳನ್ನು ಕಡಿಮೆ ಮಾಡಿ ಬೆಂಗಳೂರಿನ ಸುತ್ತಮುತ್ತಲೂ ಹೆಚ್ಚು ಹೆಚ್ಚು ಗಿಡಮರಗಳನ್ನು ಬೆಳೆಸಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಔಷಧಿಗಳ ಬಗ್ಗೆ ಒಂದು ಮಾತು ಹೇಳುವುದಾದರೆ, ಈ ಔಷಧಿಗಳನ್ನೂ ಕೂಡ ಜೀವನಾವಶ್ಯಕ ವಸ್ತುಗಳ ಪಟ್ಟಿಯಲ್ಲಿ ಸೇರಿಸಬೇಕು. ಇವತ್ತು ಯಾವ ಔಷಧಿಗಳೂ ಸಹ ಸರಿಯಾಗಿ ಸಿಕ್ಕುತ್ತಿಲ್ಲ. ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರಿಗೆ ಹೇಗೋ ಔಷಧಿಗಳನ್ನು ಸಕಾಲದಲ್ಲಿ ಸರಬರಾಜು ಮಾಡಿ ಅವರನ್ನು ಬದುಕಿಸಿದರು. ಆದರೆ ಬಡವರಿಗೆ ಯಾರು ಔಷಧಿಗಳನ್ನು ತಂದುಕೊಡುತ್ತಾರೆ. ಆದ್ದರಿಂದ. ಔಷಧಿಗಳನ್ನು, ಕೂಡ ಜೀವನಾವಶ್ಯಕ ವಸ್ತುಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತು ಹೇಳುವುದಾದರೆ, ಪ್ರಾಣಿ ಸಂಗ್ರಹಾಲಯವನ್ನು ನೋಡಬೇಕೆಂದು ಬಂದರೆ ಇಲ್ಲಿ ಆದಕ್ಕೆ ಅವಕಾಶವಿಲ್ಲ. ಅವರು ಶಾಸಕರ ಭವನ, ವಿಧಾನ ಸೌಧ ಇವುಗಳನ್ನು ನೋಡಿಕೊಂಡು ಹೋಗಬೇಕಾಗಿದೆ. ಆದ್ದರಿಂದ ಬೆಂಗಳೂರಿನ ಸುತ್ತಮುತ್ತಲೂ ಗಿಡಮರಗಳನ್ನು ಬೆಳೆಸಿ ಪ್ರಾಣಿ ಸಂಗ್ರಹಾಲಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇಷ್ಟು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಎಂ. ಘಾಡಿ (ಹಳಿಯಾಳ್).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಾನ್ಯ ಅರಣ್ಯ ಸಚಿವರು ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗೆ ನನ್ನ ಬೆಂಬಲವನ್ನು ಕೊಟ್ಟು ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಫ್ರೆಂಚ್ ಕವಿಯೊಬ್ಬ ಹೀಗೆ ಹೇಳಿದ್ದಾನೆ.

'Forest is the back bone of the country' ಎಂದು. ಇವತ್ತು ರೈತ ನಮ್ಮ ದೇಶದ ಬೆನ್ನೆಲುಬು ಹೇಗೋ ಹಾಗೆಯೇ ಅರಣ್ಯ ಸಂಪತ್ತೂ ಸಹ ದೇಶಕ್ಕೆ ಅತಿ ಮುಖ್ಯವಾದುದು. ಆದ್ದರಿಂದ ಈ ಅರಣ್ಯವನ್ನು ಉಳಿಸಿ, ಬೆಳೆಸಿ ಕಾಪಾಡಿಕೊಂಡು ಹೋಗಬೇಕಾಗಿದೆ. ನ್ಯಾಷನಲ್ ಫಾರೆಸ್ಟ್ ಪಾಲಿಸಿ ಪ್ರಕಾರ ೩೩ ೧/೩ ಪರ್ಸೆಂಟ್ ಅರಣ್ಯ ಸಂಪತ್ತು ಇರಬೇಕಾಗಿದೆ. ಆದರೆ ನಮ್ಮ ದೇಶದಲ್ಲಿ ಕೇವಲ ೧೬ ಪರ್‌ಸೆಂಟ್ ಮಾತ್ರ ಅರಣ್ಯ ಸಂಪತ್ತು ಇದೆ. ಅಂದರೆ ಇನ್ನೂ ೧೩

ಪರ್ಸೆಂಟ್ ಕಡಿಮೆ ಇದೆ. ಕಾರವಾರದಲ್ಲಿ ೮೦ ಪರ್‌ಸೆಂಟ್ ಅರಣ್ಯ ಪ್ರದೇಶವಿದ್ದುದು ಇವತ್ತು ೬೦ ಪರ್ಸೆಂಟ್‌ಗೆ ಇಳಿಸಿದೆ. ಏಕೆಂದರೆ ಅಲ್ಲಿ ಕಾಳೀನದಿ ಯೋಜನೆ, ವಾರಾಹಿ, ಬೇಡ್ತಿ, ಕಬಿನಿ ಮುಂತಾದ ಜಲಾಶಯಗಳ ನಿರ್ಮಾಣಕ್ಕಾಗಿ ಬೇಕಾದಷ್ಟು ಅರಣ್ಯ ಪ್ರದೇಶವನ್ನು ಕಡಿದುಹಾಕಿದ್ದೇವೆ.

ಸ್ವಾಮಿ, ತಮಗೆ ಒಂದು ಉದಾಹರಣೆ ಹೇಳುವುದಾದರೆ, ನನ್ನ ಕ್ಷೇತ್ರವಾದ ಹಳಿಯಾಳದಲ್ಲಿ ಹಿಂದೆ ದಂಡಕಾರಣ್ಯ ಇತ್ತು. ಶ್ರೀ ರಾಮಚಂದ್ರನು ವನವಾಸಕ್ಕೆ ಬಂದಿದ್ದಾಗ ಅಲ್ಲಿ ಅಡ್ಡಾಡುತ್ತಿದ್ದ. ಅಂಬಿಕಾ ನಗರದಲ್ಲಿ ಸಾಧಾರಣವಾಗಿ ಸಂಜೆ ೫ ಗಂಟೆ ಆಯಿತು ಎಂದರೆ ಹೊರಗಡೆ ಯಾರೂ ಅಡ್ಡಾಡು ವುದಕ್ಕೆ ಹೋಗುತ್ತಿರಲಿಲ್ಲ. ಅಂಥ ದಟ್ಟವಾದ ಕಾಡು ಅಲ್ಲಿ ಇತ್ತು. ಆದರೆ, ಇವತ್ತು ಅಲ್ಲಿನ ಕಾಡೆಲ್ಲಾ ನಾಶವಾಗಿ ಹೋಗುತ್ತಿದೆ. ಆದ್ದರಿಂದ, ಹಿಂದೆ ಇದ್ದಂತೆಯೇ ಆದಷ್ಟೂ ಅರಣ್ಯ ಸಂಪ ತ್ತನ್ನು ಉಳಿಸಿ, ಬೆಳೆಸಿ, ಕಾಪಾಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಒಂದು ದುರ್ದೈವದ ಸಂಗತಿ ಎಂದರೆ ನಮ್ಮ ಸರ್ಕಾರೀ ಅಧಿಕಾರಿಗಳು ಫಾರೆಸ್ಟ್ ಕಂಟ್ರಾಕ್ಟರ್‌ಗಳ ಜೊತೆ ಜೊತೆಯಲ್ಲಿ ಸೇರಿಕೊಂಡು ಅರಣ್ಯ ಸಂಪತ್ತನ್ನು ಹಾಳು ಮಾಡುತ್ತಿದ್ದಾರೆ. ಇತ್ತೀಚೆಗೆ ಫಾರೆಸ್ಟ್ ಕಂಟ್ರಾಕ್ಟರ್ಸ್ ಅಸೋಸಿಯೇಷನ್‌ನವರು ತಮ್ಮನ್ನು ಕಂಡು ಒಂದು ಮನವಿಯನ್ನು ಕೊಟ್ಟು ಹೋಗಿ ದ್ದಾರೆಂದು ತಿಳಿದಿದ್ದೇನೆ. ಆದರೆ ತಾವು ಅವರ ಮಾತನ್ನು ಕೇಳದೆ ಅರಣ್ಯವನ್ನು ಉಳಿಸಿ, ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರದಲ್ಲಿ ನಾನು ಸರ್ಕಾರದವರಿಗೆ ಧನ್ಯವಾದಗಳನ್ನರ್ಪಿಸ ಬೇಕಾಗಿದೆ ಏನೆಂದರೆ, ಅರಣ್ಯ ಪ್ರದೇಶದಲ್ಲಿ ಅತಿಕ್ರಮಿಸಿದ ಜನರನ್ನು ಅಲ್ಲಿಂದ ಓಡಿಸುವಂತೆ ಸರ್ಕಾರ ಒಂದು ಆಜ್ಞೆಯನ್ನು ಮಾಡಿತು. ನಾನೇ ಒಂದೇ ಕಡೆ ಸ್ವತಃ ಹೋಗಿ ನೋಡಿದಾಗ ಅರಣ್ಯವನ್ನು ಕಾಯುವಂತಹ ಗಾರ್ಡ್‌ಗಳು (ನಾವು ಇವರನ್ನು ಗರುಡಗಳು ಎಂದು ಕರೆಯುತ್ತೇವೆ) ಅತಿಕ್ರಮಿಸಿದ ಜನರನ್ನು ಆ ಜಮೀನಿಂದ ಬಿಟ್ಟು ಹೋಗುವಂತೆ ಹಿಂಸೆ ಕೊಡುತ್ತಿದ್ದಾರೆ. ಆ ಜನರು ಸುಮಾರು ೩೦ ಕುಟುಂಬಗಳಿರಬಹುದು. ಅವರ ಮೇಲೆ ಕೇಸ್ ಹಾಕಿ ಅವರು ಪ್ರತಿಸಾರಿಯೂ ಸುಮಾರು ೫೦-೬೦ ಕಿಲೋಮೀಟರ್ ದೂರ ಕೋರ್ಟಿಗಾಗಿ ಅಡ್ಡಾಡುವಂತೆ ಮಾಡಿದ್ದಾರೆ. ಆದ್ದರಿಂದ ದಯವಿಟ್ಟು ಈ ಬಡ ಕುಟುಂಬಗಳ ಮೇಲೆ ಹಾಕಿರತಕ್ಕ ಕೇಸನ್ನು ವಾಪಸು ತೆಗೆದುಕೊಂಡು ಆ ಜನರಿಗೆ ಅವರು ಮಾಡುತ್ತಿರುವ ಜಮೀನನ್ನು ಬಿಟ್ಟುಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳುತ್ತೇನೆ. ಸ್ವಾಮಿ, ಈ ಸಂದರ್ಭದಲ್ಲಿ ತಮಗೆ ಒಂದು ಉದಾರಣೆಯನ್ನು ಕೊಡುವುದಾದರೆ ಕಿರುವತಲ್ ಗ್ರಾಮದಲ್ಲಿ ವಾಸವಾಗಿರತಕ್ಕ ಗೌಳಿ ಜನಾಂಗದವರಲ್ಲಿ ಒಬ್ಬನನ್ನು ಅರಣ್ಯ ಕಾಯುವ ಗಾರ್ಡ್ ಒಬ್ಬನು ಕಳೆದ ೨೬ನೇ ತಾರೀಖು ಹೋಗಿ ಅರ್ಧ ಕ್ವಿಂಟಾಲ್ ಭತ್ತವನ್ನು ಕೊಡುವಂತೆ ಕೇಳಿದ. ಆದರೆ ಅವನು ಕೊಡಲು ಒಪ್ಪದಿದ್ದುದರಿಂದ ಸುಮಾರು ೩,೦೦೦ ರೂಪಾಯಿ ಬೆಲೆ ಬಾಳತಕ್ಕ ಬತ್ತವನ್ನು ಸುಟ್ಟುಹಾಕಿ ಅವನನ್ನು ಹೊಡೆದು ಗಲಾಟೆ ಮಾಡಿದ್ದಾನೆ.

೫.೦೦ ಪಿ. ಎಂ.

ಒಂದು ರೀತಿಯಾದ ಉದ್ರಿಕ್ತ ವಾತಾವರಣ ಉಂಟಾಗಿರುತ್ತದೆ. ಅಲ್ಲಿರತಕ್ಕಂಥ ಗೌಳಿ ಜನರಿಗೆ ತೊಂದರೆಯುಂಟಾಗಿರುತ್ತದೆಂದು ಎಷ್ಟು ಹೇಳಿದರೂ ಅಧಿಕಾರಿಗಳು ಗಮನಕ್ಕೆ ತೆಗೆದುಕೊಳ್ಳದೆ ರಿವ್ಮ ಕಾರ್ಯವನ್ನು ಮುಂದುವರಿಸುತ್ತಲೇ ಇರುತ್ತಾರೆ. ಈ ರೀತಿ ಅಧಿಕಾರಿಗಳು ವರ್ತಿಸುತ್ತಿರುವುದ ರಿಂದ ಒಂದು ರೀತಿಯಾದ ಉದ್ರಿಕ್ತ ವಾತಾವರಣ ಉಂಟಾಗಿ ಅಧಿಕಾರಿಗಳಿಗೆ ಏನು ಮಾಡುತ್ತಾರೆ ಎನ್ನುವುದನ್ನು ಹೇಳಲಿಕ್ಕೆ ಬರುತ್ತಿಲ್ಲ ಫಾರೆಸ್ಟ್ ಆಫೀಸರ್‌ರವರಾದ ಶ್ರೀ ನಟರಾಜನ್‌ರವರಿಗೂ ಫೋನ್ ಮುಂಖಾಂತರವಾಗಿ ವಿಷಯವನ್ನು ತಿಳಿಸಿರುತ್ತೇನೆ, ಆದರೂ ಅವರ ಸಂಬಂಧಪಟ್ಟ ಅಧಿ ಕಾರಿಗಳ ಮೇಲೆ ಯಾವ ವಿಧವಾದ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ದಯವಿಟ್ಟು ತಾವು ರವಿವಾರ ನನ್ನ ಜೊತೆಯಲ್ಲಿ ಬಂದರೆ ಅದನ್ನು ಸಾಬೀತು ಮಾಡಿಕೊಡುತ್ತೇನೆ. ಈ ಒಂದು ಜನಾಂಗಕ್ಕೆ ಯಾವ ರೀತಿಯಲ್ಲಿ ಲುಕ್ಸಾನು ಮಾಡಿರುತ್ತಾರೆ ಅದನ್ನು ತುಂಬಿಕೊಡಲು ಮಾನವೀಯತೆ ಯಿಂದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಯಾರು ಯಾರು ಈ ಒಂದು ಅಕ್ರಮ ನಡೆಸಿರುತ್ತಾರೆ ತವರು ಜ್ಯುಡಿಷಿಯಲ್ ಪ್ರೋಬ್‌ಗೆ ಒಳಪಡಬೇಕು ಎಂದು ಒತ್ತಾಯ ಮಾಡುತ್ತೇನೆ. ಇನ್ನು ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ರಚನೆ ಮಾಡಿದ್ದೀರಿ, ಹೀಗೆ ರಚನೆ

ಮಾಡಿರತಕ್ಕಂಥ ಇಂಡಸ್ಟ್ರೀಗೆ ಎಷ್ಟು ಜನರು ಬೇಕೋ ಅದಕ್ಕಿಂತ ಹೆಚ್ಚು ಜನರು ಇದ್ದಾರೆ. ದಾಂಡೇಲಿ ಜೈನ್ ಸಾ ಮಿಲ್‌ನ ಪರಿಸ್ಥಿತಿಯೂ ಹಾಗೆಯೇ ಇರುತ್ತದೆ. ಫಸ್ಟ್ ಡಿವಿಜನ್, ಕ್ಲರ್ಕ್ಸ್‌ಗಳು ಸೆಕೆಂಡ್ ಡಿವಿಜನ್ ಕ್ಲಾರ್ಕ್‌ಗಳು ಎಷ್ಟು ಜನರು ಬೇಕೋ ಅದಕ್ಕಿಂತ ಹೆಚ್ಚು ಜನರು ಇರುತ್ತಾರೆ. ೧೯೭೫ ರಿಂದ ವರ್ಕರ್ಸ್ ಏನು ತೆಗೆದುಕೊಂಡಿರುತ್ತಾರೆ ಅವರನ್ನು ಈವತ್ತಿವರೆಗೂ ಖಾಯಂ ಮಾಡಿಲ್ಲ. ತಾವು ಕಾಯಂ ಮಾಡುತ್ತೇವೆಂದು ಹಿಂದೆ ವಚನವನ್ನು ಕೊಟ್ಟಿದ್ದೀರಿ. ತಾವು ಉತ್ತರವನ್ನು ಕೊಡುವ ಸಂದರ್ಭದಲ್ಲಿಯಾದರೂ ಒಂದು ಆರ್ಡರನ್ನು ಹೊರಡಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಬೋನಸ್ ವಿಚಾರ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ವಾದವಿವಾದಗಳು ಹಾಗೆಯೇ ಇರುತ್ತದೆ ಲೇಬರ್ ಕಮಿಷನರ್‌ರವರು ಮತ್ತು ಅಲ್ಲಿಯ ಕಾರ್ಮಿಕರು ಚರ್ಚೆ ಮಾಡಬೇಕೆಂದು ಹೇಳಿದ್ದಾರೆ. ಆ ವಿಷಯದ ಬಗ್ಗೆಯೂ ತಾವು ಪರಿಶೀಲನೆ ಮಾಡಿ ಬೋನಸ್ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಗಂಧದಮರಗಳ ವಿಷಯದ ಬಗ್ಗೆ ಹೇಳುವುದಾದರೆ; ಈ ಮರಗಳು ಕಳುವಾದನಂತರ ಕೇಸ್ ಹಾಕುತ್ತಾರೆ. ಕೇಸ್ ಕೋರ್ಟಿನಲ್ಲಿ ಮುಗಿಯುವವರೆಗೆ ಗಂಧದ ಮರಗಳಿಗೆ ಹುಳುಗಳು ಬಿದ್ದು ಮರಗಳೆಲ್ಲ ನಾಶವಾಗುತ್ತದೆ. ಆದ್ದರಿಂದ ಈ ರೀತಿ ನಾಶವಾಗದಂತೆ ನೋಡಿಕೊಳ್ಳಲು ಒಂದು ಲೀಗಲ್ ಅಡ್ವೈಸ್ ತೆಗೆದುಕೊಂಡು ಮರಗಳನ್ನು ಡಿಸ್‌ಪೋಸ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇಲ್ಲವಾದರೆ ಕೋರ್ಟ್ ಕೇಸ್ ನಿಕಲೆಯಾಗಬೇಕೆಂದರೆ ೧೦-೧೨ ವರ್ಷಗಳಾದರೂ ಬೇಕಾಗುತ್ತದೆ. ಅಲ್ಲಿಯತನಕ ಮರಗಳಿಗೆ ಹುಳು ಬಿದ್ದು ನಾಶವಾಗುತ್ತದೆಂದು ಹೇಳುತ್ತೇನೆ.

ಇನ್ನು ಆಹಾರದ ಬಗ್ಗೆ ಹೇಳುವುದಾದರೆ ರೈತ ಬೆಳೆದಂಥ ಧಾನ್ಯಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಕಬ್ಬಿಣ, ಉಕ್ಕು, ಸಿಮೆಂಟ್ ಮುಂತಾದ ಪದಾರ್ಥಗಳ ಬೆಲೆ ಮಾತ್ರ ವಿಪರೀತವಾಗಿ ಏರುತ್ತಿರುತ್ತದೆ. ಆದರೆ ಒಕ್ಕಲುತನ ಭತ್ತ, ಗೋಧಿ, ಹತ್ತಿ, ಜೋಳ ಮುಂತಾದ ಬೆಳೆಗಳಿಗೆ ಬೆಲೆಯು ಇಲ್ಲದಂತಾಗಿದೆ. ಇದಕ್ಕೆ ಕಾರಣವೇನೆಂದರೆ ಕೇಂದ್ರ ಸರ್ಕಾರದವರು ಇಂಟರ್‌ಸ್ಟೇಟ್ ರಿಸ್ಟ್ರಿಕ್ಷನ್ ತೆಗೆದಿರುವುದರಿಂದ ಇಂಥ ಒಂದು ಪರಿಸ್ಥಿತಿ ಬಂದಿರುತ್ತದೆ. ಆದ್ದರಿಂದ ಕೇಂದ್ರ ಸರ್ಕಾರದವರೇ ಯಾವ ಪ್ರಕಾರವಾಗಿ ಗೋಧಿ ಬೆಲೆಯನ್ನು ಹೆಚ್ಚು ಮಾಡಿರುತ್ತಾರೋ ಅದೇ ಪ್ರಕಾರವಾಗಿ ಬತ್ತದ ಬೆಲೆಯನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನು ಟ್ರಾನ್ಸ್‌ಪೋರ್ಟ್ ಚಾರ್ಜಸ್ ಎಂದು ೬ ರೂಪಾಯಿಗಳನ್ನು ಏನು ಕೊಡುತ್ತಿದ್ದಾರೆ ಅದು ನಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬೀಳುತ್ತಾ ಇದೆ. ಕೇಂದ್ರ ಸರ್ಕಾರಕ್ಕೆ ತಾವು ಕನ್‌ವಿನ್ಸ್ ಮಾಡಿ ಬತ್ತದ ಬೆಲೆ ಕುಸಿದು ಬೀಳದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಈವತ್ತಿನದಿವಸ ಇಂಥ ಬೆಳೆಯನ್ನು ಬೆಳೆದಂಥ ರೈತರಿಗೆ ಸರಿಯಾದ ಬೆಲೆಯು ಸಿಗದಿರುವುದರಿಂದ ಸಹಕಾರಿ ಸಂಘಗಳಿಂದ ಮತ್ತು ಬ್ಯಾಂಕ್‌ಗಳಿಂದ ಪಡೆದಿರತಕ್ಕಂಥ ಸಾಲವನ್ನು ತೀರಿಸಲಿಕ್ಕೆ ಸಾಧ್ಯವಾಗದೆ ತೊಂದರೆಗೆ ಒಳಗಾಗಿರುತ್ತಾನೆ. ಈ ತೊಂದರೆಯನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಇನ್ನು ಕಲಬೆರಕೆ ವಿಷಯದ ಬಗ್ಗೆ ಹೇಳುವುದಾದರೆ ಇಲಾಖೆಯವರು ಎಚ್ಚರಿಕೆಯಿಂದ ಕೆಲಸ ಮಾಡುತ್ತಿಲ್ಲ. ಇಲಾಖೆಯವರ ನಜರಿಗೆ ತಂದರೂ ಸಹಿತ ಯಾವ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಉದಾಹರಣೆಗೆ ದಾಂಡೇಲಿ ಜನರಲ್ ಆಸ್ಪತ್ರೆಗೆ ಸಪ್ಲೈ ಮಾಡುತ್ತಿರುವ ಬ್ರೆಡ್ ಉತ್ತಮವಾಗಿಲ್ಲವೆಂದು ಅಧಿಕಾರಿಗಳ ನಜರಿಗೆ ತಂದರೂ ಸಹಿತ ಏನು ಒಂದು ಕ್ರಮವನ್ನು ತೆಗದುಕೊಂಡಿಲ್ಲ. ಉತ್ತಮವಾದ ಬ್ರೆಡ್ಡನ್ನು ಸಪ್ಲೈ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಕಲಬೆರಕೆ ಬ್ರೆಡ್‌ನ್ನು ಸಪ್ಲೈ ಮಾಡುವುದರಿಂದ ಜನರ ಆರೋಗ್ಯ ಕೆಡುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪ್ಲಾಂಟೇಷನ್ ಬೆಳೆಸತಕ್ಕಂಥ ಒಂದು ಉತ್ತಮವಾದ ಯೋಚನೆಯನ್ನು ಸರ್ಕಾರದವರು ಹಾಕಿಕೊಂಡಿರುವುದು ಶ್ಲಾಘನೀಯವಾದುದಾಗಿರುತ್ತದೆ. ಇದರಲ್ಲಿ ಒಂದು ವಿಷಯವನ್ನು ಮಾತ್ರ ತಮ್ಮ ನಜರಿಗೆ ತರಬಯಸುತ್ತೇನೆ. ಅದೇನೆಂದರೆ ಪ್ಲಾಂಟೇಷನ್ ಕಾರ್ಪೊರೇಷನ್‌ನವರು ಅಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ದಿನಗೂಲಿಯನ್ನು ಕೊಡುತ್ತಾರೆ. ರೋಲ್‌ನಲ್ಲಿ ಎಷ್ಟು ಜನರು ಇರುತ್ತಾರೆ ಅವರಿಗೆ ನಿಮ್ಮ ದರದ ಪ್ರಕಾರವಾಗಿ ೪-೫ ರೂಪಾಯಿಗಳಂತೆ ತೋರಿಸಿರುತ್ತಾರೆ, ಆದರೆ ಅವರು ಕೊಡುತ್ತಿರುವುದು ನಿಜವಾಗಿಯೂ ೨-೩ ರೂಪಾಯಿಗಳನ್ನು ಮಾತ್ರ. ಇದನ್ನು ತಮ್ಮ

ನಪರಿಗೆ ಅರ್ಜಿಗಳ ಮುಖಾಂತರ ತಂದಿದ್ದರೂ ಸಹಿತ ಯಾವ ವಿಧವಾದ ಕ್ರಮ ತೆಗೆದುಕೊಂಡಿಲ್ಲ. ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೂಲಿಯನ್ನು ಕೊಡ ತಕ್ಕಂಥದ ವ್ಯವಸ್ಥೆಯಲ್ಲಿ ಯಾರು ಅಕ್ರಮವನ್ನು ಮಾಡಿರುತ್ತಾರೋ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಪ್ಲಾಂಟೇಷನ್‌ಗಳಲ್ಲಿ ನಡೆಯುತ್ತಿರುವ ಈ ಈ ರೀತಿಯಾದ ದುರ್ ವ್ಯವಹಾರದ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಪ್ಲಾಂಟೇಷನ್ ಮಾಡಲು ಒಂದು ಎಕರೆಗೆ ಎಷ್ಟು ಖರ್ಚು ಮಾಡುತ್ತೀರಿ ಅದರ ಬಗ್ಗೆ ಅಂಕಿಸಂಖ್ಯೆ ಗಳನ್ನು ಕೊಡಬೇಕೆಂದು ಕೇಳುತ್ತೇನೆ.

ಇನ್ನು ಹಳಿಯಾಳ, ಹುಬ್ಬಳ್ಳಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಕಾರ್ಪೊರೇಷನ್ ಮುಖಾಂತರ ಸೌದೆಯನ್ನು ಸಪ್ಲೈ ಮಾಡಬೇಕೆಂದು ಆರ್ಡರ್ ಮಾಡುತ್ತೀರಿ. ಆದರೆ ಒಂದು ಕಟ್ಟಿಗೆ ಸೌದೆಯೂ ಸಿಕ್ಕುತ್ತಿಲ್ಲ ಡಿವಿಜನ್ ಫಾರೆಸ್ಟ್ ಆಫೀಸರಿಗೆ ವಿಷಯವನ್ನು ತಿಳಿಸಿದರೂ ಉರುವಲು ಸಪ್ಲೈ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಲಿಲ್ಲ. ಆದ್ದರಿಂದ ಸೌದೆಯನ್ನು ಸಪ್ಲೈ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಂಡು ಇಷ್ಟು ಹೊತ್ತು ಮಾತನಾಡಲಿಕ್ಕೆ ಅವ ಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ಚೌಡಯ್ಯ (ಕೆರೆಗೋಡು).—ಸನ್ಮಾನ್ಯ ಅಧ್ಯಕ್ಷರೇ, ಆಹಾರ ಧಾನ್ಯಗಳ ಲೆವಿ ಬೆಲೆ ಯನ್ನು ಸರ್ಕಾರ ಏನು ನಿಗದಿ ಮಾಡಿದೆಯೋ ಈ ವಿಷಯದಲ್ಲಿ ಅನೇಕ ಜನ ಮಿತ್ರರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಇವತ್ತಿನ ದಿವಸ ವ್ಯವಸಾಯದ ವೆಚ್ಚವನ್ನು ಮತ್ತು ವ್ಯವಸಾಯಗಾರ ದಿನ ನಿತ್ಯ ತನ್ನ ಬಳಕೆಗೆ ಕೊಂಡುಕೊಳ್ಳುವ ಸಾಮಾನುಗಳಿಗೆ ಆಗತಕ್ಕ ವೆಚ್ಚ ಇದನ್ನು ಹೋಲಿಕೆ ಮಾಡಿ ನೋಡಿದರೆ ವ್ಯವಸಾಯ ಲಾಭದಾಯಕವಾದುದಲ್ಲ ಎಂಬುದನ್ನು ನಾವೆಲ್ಲರೂ ಒಪ್ಪಬೇಕಾಗಿದೆ. ಈ ಲೆವಿ ಬೆಲೆಯನ್ನು ಗೊತ್ತು ಮಾಡತಕ್ಕದ್ದು ಕೇಂದ್ರ ಸರ್ಕಾರ. ಅದಕ್ಕೆ ಪೂರ್ವಭಾವಿಯಾಗಿ ರಾಜ್ಯ ಸರ್ಕಾರ ಆ ಬಗ್ಗೆ ತನ್ನದೇ ಆದಂಥ ಶಿಫಾರಸ್ಸನ್ನು ಮಾಡುತ್ತದೆ. ಈ ಒಂದು ಶಿಫಾರಸ್ಸಿನ ಆಧಾರದ ಮೇಲೆ ಕೇಂದ್ರ ಸರ್ಕಾರದವರು ನ್ಯಾಷನಲ್ ಅಗ್ರಿಕಲ್ಚರಲ್ ಕಮಿಷನ್ನಿನ ಸಲಹೆ ಪಡೆದು ಅಂತಿಮವಾಗಿ ಬೆಲೆ ಯನ್ನು ನಿಗದಿ ಮಾಡುತ್ತದೆ, ವ್ಯವಸಾಯದಲ್ಲಿ ಆಸಕ್ತಿ ಇರತಕ್ಕ ಹಾಗೂ ಪರಿಣತಿ ಇರತಕ್ಕ ಶಾಸಕರ ಮತ್ತು ಶಾಸಕೇತರರ ಒಂದು ಸಮಿತಿಯನ್ನು ತಾವು ರಚಿಸಿ ಆ ಸಮಿತಿಯ ಪೂರ್ಣವಾದ ಸಲಹೆಯನ್ನು ಈ ವಿಷಯದಲ್ಲಿ ಪಡೆದು ನಂತರ ತನ್ನ ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಕಳಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ. ಲೆವಿ ಬೆಲೆ ಎಂದರೆ ಭತ್ತ, ರಾಗಿ ಮಾತ್ರವಲ್ಲ, ಪ್ರತಿ ಯೊಂದು ಧಾನ್ಯದ ಬೆಲೆಯೂ ಜಾಸ್ತಿಯಾಗಬೇಕು. ಆ ರೀತಿ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಸ್ಥಳೀಯವಾಗಿ ಕೆಲವೊಂದು ಸಮಸ್ಯೆಗಳು ಇವತ್ತಿನ ದಿವಸ ಜನರನ್ನು ಕಾಡಿಸುತ್ತಿವೆ. ಆಹಾರ ಮತ್ತು ಸರಬರಾಜು ಇಲಾಖೆಗೆ ಸಂಬಂಧಪಟ್ಟಂತೆ ಹೇಳುವು ದಾದರೆ—ಈ ಷೆಲ್ಲರ್‌ಗಳಿಗೆ ಮತ್ತು ಹಲ್ಲರ್‌ಗಳಿಗೆ ಲೈಸೆನ್ಸನ್ನು ಕೊಡಬೇಕಾದರೆ ಯಾವ ರೀತಿ ಅನಾನು ಕೂಲಗಳಾಗುತ್ತಿವೆ ಎಂಬ ಬಗ್ಗೆ ನಾನು ಈಗಾಗಲೇ ಮಾನ್ಯ ಮಂತ್ರಿಗಳ ಜೊತೆಯಲ್ಲಿ ಖುದ್ದಾಗಿ ಚರ್ಚೆ ಮಾಡಿದ್ದೇನೆ. ಇದಕ್ಕೆ ಲೈಸೆನ್ಸನ್ನು ಕೊಡಬೇಕಾದರೆ ಕೆಲವು ನಿಯಮಾವಳಿಗಳಿವೆ. ದಯವಿಟ್ಟು ಮಾನ್ಯ ಮಂತ್ರಿಗಳು ನೋಡಬೇಕು ಈ ನಿಯಮಾವಳಿಗಳನ್ನು ಎಷ್ಟು ವರ್ಷದ ಹಿಂದೆ ಸರ್ಕಾರದವರು ಮಾಡಿ ದ್ದರು ಎಂಬುದನ್ನು ದೊಡ್ಡ ಅಕ್ಕಿ ಗಿರಣಿಗಳವರು ಷೆಲ್ಲರನ್ನು ಉಪಯೋಗಿಸುತ್ತಾರೆ, ಚಿಕ್ಕ ಅಕ್ಕಿ ಗಿರಣಿ ಗಳವರು ಹಲ್ಲರನ್ನು ಉಪಯೋಗಿಸುತ್ತಾರೆ. ಒಂದು ಕ್ವಿಂಟಾಲ್‌ಗಿಂತ ಕಡಿಮೆ ಭತ್ತವನ್ನು ಅಕ್ಕಿ ಮಾಡ ಬೇಕಾದರೆ ಅದನ್ನು ಷೆಲ್ಲರ್‌ಗಳಿಂದ ಮಾಡುವುದಕ್ಕಾಗುವುದಿಲ್ಲ. ಆದರೆ ಹಲ್ಲರ್‌ಗಳಲ್ಲಿ ೪ ಸೇರು ೫ ಸೇರು ಬೇಕಾದರೂ ಗಿರಣಿ ಮಾಡಬಹುದು. ಅಂದರೆ ಸಣ್ಣ ಬಳಕೆದಾರರು ಮತ್ತು ಸಣ್ಣ ರೈತರು ಬಳಸುವ ಯಂತ್ರ ಈ ಹಲ್ಲರ್, ಈ ಹಲ್ಲರ್ ಮತ್ತು ಷೆಲ್ಲರ್‌ಗಳನ್ನು ಇಡುವುದಕ್ಕೆ ಬೇಕಾದ ಲೈಸೆನ್ಸನ್ನು ಅಂತಿಮ ವಾಗಿ ಮಂಜೂರು ಮಾಡಬೇಕಾದರೆ ೪-೫ ವರ್ಷಗಳಾಗುತ್ತಿವೆ. ತಾವು ದಾಖಲೆಗಳನ್ನು ತೆಗೆದುಕೊಂಡು ನೋಡಬಹುದು ನಾಲ್ಕು ವರ್ಷವಾದರೂ ಕೂಡ ಲೈಸೆನ್ಸ್ ಮಂಜೂರಾತಿ ಆಗಿರುವುದಿಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಷೆಲ್ಲರ್ ಮತ್ತು ಹಲ್ಲರ್‌ಗಳಿಗೆ ಲೈಸೆನ್ಸ್ ಕೊಡುವುದಕ್ಕೆ ಇರತಕ್ಕ ಷರತ್ತುಗಳನ್ನು ಸಡಿಲಗೊಳಿಸಬೇಕು. ಮತ್ತು ಇದನ್ನು ವಿಕೇಂದ್ರೀ ಕರಣ ಮಾಡಬೇಕು, ಸಾಮಾನ್ಯವಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹೆಚ್ಚಾಗಿ ಈ ಮಾತನ್ನು

ಹೇಳುತ್ತೇವೆ. ಆದರೆ ಎಲ್ಲಾ ಇಲಾಖೆಗಳಲ್ಲೂ ಕೂಡ ವಿಕೇಂದ್ರಿಕರಣ ಆಗಬೇಕು. ಇದಕ್ಕೆ ಲೈಸೆನ್ಸ್ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೇ ಸಂಪೂರ್ಣವಾದ ಅಧಿಕಾರವನ್ನು ಏತಕ್ಕೆ ಕೊಡಬಾರದು ಎಂಬ ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಸನ್ಮಾನ್ಯ ಆಹಾರ ಮಂತ್ರಿಗಳಿಗೆ ಕೇಳ ಬಯಸುತ್ತೇನೆ, ಅನೇಕ ಶಾಸಕರಿಗೆ ಈ ಬಗ್ಗೆ ಅನುಭವ ಆಗಿರಬಹುದು. ಆದರೆ ನನ್ನ ವೈಯುಕ್ತಿಕವಾದ ಅನುಭವವನ್ನು ಹೇಳುವುದಾದರೆ ಯಾವುದೇ ಒಂದು ಸ್ಥಳದಿಂದ ಒಬ್ಬ ಮನುಷ್ಯಹಲ್ಲರ್‌ಗೆ ಅಥವಾ ಪೆಲ್ಲರ್‌ಗೆ ಲೈಸೆನ್ಸ್ ಮಂಜೂರಾತಿಗಾಗಿ ಅರ್ಜಿ ಹಾಕಿದರೆ ಅದು ಫುಡ್ ಇನ್‌ಸ್ಪೆಕ್ಟರಿಂದ ಹಿಡಿದು ತಹಸೀಲ್ದಾರ್ ಕಚೇರಿ ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡೈರೆಕ್ಟರ್ ಅವರ ಕಚೇರಿವರೆಗೆ ನಾಲ್ಕಾರು ಸಾರಿ ಓಡಾಡಿರುತ್ತದೆ. ಒಬ್ಬ ಹಲ್ಲರ್ ಇಡಬೇಕಾದರೆ ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೋ ಅಷ್ಟು ಹಣವನ್ನು ಇವನು ಲಂಚದ ರೂಪದಲ್ಲಿ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ನಿರ್ದೇಶಕರು ಐ. ಎ. ಎಸ್. ಅಧಿಕಾರಿಗಳು. ಅದೇ ರೀತಿ ಜಿಲ್ಲಾಧಿಕಾರಿಗಳೂ ಕೂಡ ಐ. ಎ. ಎಸ್. ಅಧಿಕಾರಿಗಳು. ನಿರ್ದೇಶಕರಿಗೆ ಎಷ್ಟು ಹೊಣೆಗಾರಿಕೆ ಇದೆಯೋ ಅಷ್ಟೇ ಹೊಣೆಗಾರಿಕೆ ಜಿಲ್ಲಾಧಿಕಾರಿಗಳಿಗೂ ಇದೆ. ಬೇರೆ ಬೇರೆ ಇಲಾಖೆಯ ಮುಖ್ಯಸ್ಥರನ್ನು ಗಮನಿಸಿದರೆ ಎಲ್ಲರಿಗಿಂತ ಹೆಚ್ಚು ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಲೈಸೆನ್ಸನ್ನು ಮಂಜೂರು ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೇ ಸಂಪೂರ್ಣವಾಗಿ ಏತಕ್ಕೆ ವಹಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬಾರದು? ಒಂದು ಲೈಸೆನ್ಸ್ ಮಂಜೂರಾತಿಗಾಗಿ ಸಾಮಾನ್ಯ ಜನ ಅದರಲ್ಲೂ ಹಳ್ಳಿಗಾಡಿನ ಜನ ಬಹಳ ಪರಿತಪಿಸುತ್ತಿದ್ದಾರೆ. ಇವರು ಇದಕ್ಕಾಗಿ ಹೆಚ್ಚು ಲಂಚವನ್ನು ತೆರಬೇಕಾಗಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಲೈಸೆನ್ಸ್ ಕೊಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೇ ವಿಕೇಂದ್ರೀಕರಣ ಮಾಡಿ ಆದಷ್ಟು ಸುಲಭವಾಗಿ ಮತ್ತು ಶೀಘ್ರವಾಗಿ ಜನರಿಗೆ ಲೈಸೆನ್ಸ್ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಲ್ಲರ್ ಮತ್ತು ಪೆಲ್ಲರ್‌ಗಳಿಗೆ ಸಂಬಂಧಪಟ್ಟಂತೆ ಅದನ್ನು ಆಧುನೀಕರಣ ಮಾಡಬೇಕೆಂದು ಇತ್ತೀಚೆಗೆ ಎಲ್ಲಾ ಹಲ್ಲರ್ ಮತ್ತು ಪೆಲ್ಲರ್ ಮಾಲೀಕರುಗಳಿಗೆ ನೋಟೀಸ್ ಜಾರಿ ಮಾಡಿದ್ದಾರೆ. ಪೆಲ್ಲರ್ ವಿಷಯದಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಹಲ್ಲರ್‌ಗಳನ್ನು ಇಟ್ಟಿರತಕ್ಕ ಜನ ಅನುಕೂಲಸ್ಥರೇನಲ್ಲ, ಸಾಮಾನ್ಯವಾಗಿ ಮಧ್ಯಮ ವರ್ಗದ ಜನ ಅದನ್ನು ಇಟ್ಟಿರುತ್ತಾರೆ. ಈ ಹಲ್ಲರ್‌ಗಳನ್ನು ಇಟ್ಟಿರುವ ಜನ ಅದನ್ನು ಆಧುನೀಕರಣ ಮಾಡಬೇಕಾದರೆ ಕಡೇಪಕ್ಷ ಆರೇಳು ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ನಿಜವಾಗಿ ಅವರಿಗೆ ಇದು ಬಹಳ ಕಷ್ಟದ ಕೆಲಸವಾಗುತ್ತದೆ. ಜಿಲ್ಲಾಧಿಕಾರಿಗಳ ಕಚೇರಿಯಿಂದ ಆಧುನೀಕರಣ ಮಾಡುವ ವಿಷಯದಲ್ಲಿ ಈಗಾಗಲೇ ನೋಟೀಸ್ ಕಳಿಸಿ ಏಪ್ರಿಲ್ ಮತ್ತು ಮೇ ತಿಂಗಳ ಕೊನೆಯೊಳಗಾಗಿ ಅದನ್ನು ಆಧುನೀಕರಣಗೊಳಿಸಬೇಕು, ಇಲ್ಲದಿದ್ದರೆ ಲೈಸೆನ್ಸನ್ನು ರದ್ದು ಮಾಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಹಿಂದೆ ಒಂದು ಬಾರಿ ಮಂಡ್ಯಕ್ಕೆ ಬಂದಿದ್ದಾಗ ನಾನು ಈ ವಿಷಯವನ್ನು ಅವರ ಗಮನಕ್ಕೆ ತಂದಿದ್ದೇನೆ. ದಯಮಾಡಿ ಹಲ್ಲರ್‌ಗೆ ಸಂಬಂಧಪಟ್ಟ ಹಾಗೆ ಆಧುನೀಕರಣ ಕಾಯವನ್ನು ಕೈಬಿಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

ಇನ್ನು ಸೀಮೆ ಎಣ್ಣೆ ವಿತರಣೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ರಾಮದೇವ್ ಅವರು ಅನೇಕ ಸಾರಿ ಈ ವಿಷಯ ಪ್ರಸ್ತಾಪ ಮಾಡಿ ಬೆಂಗಳೂರು ನಗರದಲ್ಲಿ ಸೀಮೆಎಣ್ಣೆ ಅಭಾವ ಜಾಸ್ತಿ ಇದೆ ಎಂದು ಹೇಳಿದ್ದಾರೆ. ನನಗನ್ನಿಸುತ್ತದೆ ಹಳ್ಳಿಗಳಲ್ಲಿ ಇರತಕ್ಕ ಅಭಾವ ಬೆಂಗಳೂರು ನಗರದಲ್ಲಿಲ್ಲ ಎಂದು ಅಂದ ಮಾತ್ರಕ್ಕೆ ನಾನು ಬೆಂಗಳೂರು ನಾಗರೀಕರಿಗೆ ಸೀಮೆ ಎಣ್ಣೆಯನ್ನು ಸರಬರಾಜು ಮಾಡಬಾರದು ಎಂದು ಹೇಳುತ್ತಿಲ್ಲ.

ಶ್ರೀಮತಿ ಎಸ್. ಪ್ರಮಿಳಾ:—ನಿಮಗೆ ಬೆಂಗಳೂರು ವಿಷಯ ಸರಿಯಾಗಿ ಗೊತ್ತಿಲ್ಲ.

ಶ್ರೀ ಎಚ್. ಡಿ. ಚೌಡಯ್ಯ;—ನನಗೆ ಗೊತ್ತಿದೆ. ಅಂದರೆ ನಾನು ಹೇಳುತ್ತಿರುವುದು ಹಳ್ಳಿಗಳಲ್ಲಿರುವಷ್ಟು ಅಭಾವ ಇಲ್ಲಿ ಇಲ್ಲ ಎಂದು. ಹಳ್ಳಿಗಳಲ್ಲಿ ಇವತ್ತಿನ ದಿವಸ ಒಂದು ಮನೆಗೆ ಎರಡು ಲೀಟರ್ ಸೀಮೆ ಎಣ್ಣೆ ಸಿಗುತ್ತಿಲ್ಲ. ಕೆಲವು ಹಳ್ಳಿಗಳಲ್ಲಿ ಸೀಮೆ ಎಣ್ಣೆ ವಿತರಣೆಗೋಸ್ಕರ ಡೀಲರ್ಸ್ ಎಂದು ಅನಾದಿ ಕಾಲದಿಂದ ನೇಮಕ ಮಾಡಿದ್ದೀರಿ. ಬಹುಶಃ ಅವರು ಬರತಕ್ಕ ಕೋಟಾವನ್ನು ಸಂಪೂರ್ಣವಾಗಿ ಗ್ರಾಹಕರಿಗೆ ಸರಿಯಾಗಿ ಸರಬರಾಜು ಮಾಡುತ್ತಿಲ್ಲ, ಸೀಮೆ ಎಣ್ಣೆ ವಿತರಣೆ ಕಾರ್ಯವನ್ನು ಸಹಕಾರ ಸಂಘಗಳ ಮೂಲಕ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಮಂಡ್ಯ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಅಲ್ಲಿ

ಸೊಸೈಟಿಗಳ ವ್ಯವಸ್ಥೆ ಚೆನ್ನಾಗಿದೆ. ಸಹಕಾರ ಸಂಘಗಳ ಮೂಲಕ ಮಾಡಿದರೆ ಹಂಚಿಕೆ ವಿಷಯದಲ್ಲಿ ಕೆಟ್ಟ ಹೆಸರು ಬರುತ್ತದೆ ಎಂಬ ಶಂಕೆಯನ್ನು ತಾವು ಇಟ್ಟುಕೊಂಡರೆ ಅದಕ್ಕೆ ಆಧಾರವಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಸೀಮೆ ಎಣ್ಣೆ ಸರಬರಾಜಿನ ವಿಷಯದಲ್ಲಿ ಈಗ ಬಹಳ ತೊಂದರೆ ಇದೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ವೈಯುಕ್ತಿಕವಾಗಿ ಹೇಳಿದ್ದೇನೆ ಮತ್ತು ಒಂದು ಪತ್ರವನ್ನು ಕೂಡ ಬರೆದಿದ್ದೇನೆ. ಈಗ ಏನಾಗಿದೆಯೆಂದರೆ ಬೆಂಗಳೂರಿನಿಂದ ಮಂಡ್ಯಕ್ಕೆ ಸೀಮೆ ಎಣ್ಣೆ ಟ್ರಕ್ಕುಗಳು ಬರಬೇಕಾದರೆ ಸಾಯಂಕಾಲ ೪ ಗಂಟೆ ೫ ಗಂಟೆ ಮೇಲೆ ಬರುತ್ತದೆ. ಅಲ್ಲಿ ಸೊಸೈಟಿಗಳು ಕೆಲಸ ಮಾಡತಕ್ಕ ಕಾಲ ಬೆಳಗ್ಗೆ ೯ ರಿಂದ ಸಂಜೆ ೫ ಗಂಟೆವರೆಗೆ ಅಂದರೆ ಸೊಸೈಟಿ ಬಾಗಿಲು ಮುಚ್ಚಿದ ಮೇಲೆ ಟ್ರಕ್ಕುಗಳು ಬರುತ್ತವೆ. ನಂತರ ಅಲ್ಲಿಂದ ಹಳ್ಳಿಗಳಿಗೆ ಕಳಿಸಿಕೊಡಬೇಕು. ಸಾಯಂಕಾಲ ಸೊಸೈಟಿ ಬಾಗಿಲು ಮುಚ್ಚಿದ ಮೇಲೆ ಟ್ರಕ್ಕುಗಳು ಬರುವುದರಿಂದ ಬಹಳ ತೊಂದರೆಯಾಗಿದೆ ಒಂದು ವೇಳೆ ಏನಾದರೂ ರಾತ್ರಿ ಬಾಗಿಲು ತೆಗೆದು ಸೀಮೆಣ್ಣೆ ಹಾಕಿಕೊಂಡರೆ ಈ ಸೊಸೈಟಿ ಸೆಕ್ರೆಟರಿ ಏನೋ ಅವ್ಯವಹಾರ ಮಾಡುತ್ತಿದ್ದಾನೆ ಎಂಬ ಕೆಟ್ಟ ಹೆಸರು ಬರುತ್ತದೆ. ಅನುಮಾನಕ್ಕೆ ಕಾರಣವಾಗುತ್ತದೆ. ಒಂದು ತಿಂಗಳ ಹಿಂದೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಒಂದು ಮೀಟಿಂಗನ್ನೂ ಕೂಡ ಕರೆದಿದ್ದರು. ಆಗ ಇದರ ಪ್ರತಿನಿಧಿಗಳು ಹೇಳಿದರು ಸರ್ಕಾರದ ಆದೇಶ ಇದೆ, ಮೊದಲು ಬೆಂಗಳೂರು ನಗರಕ್ಕೆ ಕಳಿಸಿ ನಂತರ ಉಳಿದರೆ ಆಮೇಲೆ ಬೇರೆ ಕಡೆಗೆ ಕಳಿಸಬೇಕು ಎಂದು. ಆದರೆ ಮಾನ್ಯ ಮಂತ್ರಿಗಳು ಹೇಳಿದರು ಗ್ರಾಮಾಂತರ ಪ್ರದೇಶದ ಬೇಡಿಕೆ ಏನಿದೆ ಅದನ್ನು ಪೂರೈಕೆ ಮಾಡಬೇಕು ಎಂಬುದು ಸರ್ಕಾರದ ನೀತಿಯಾಗಿದೆ ಬೆಂಗಳೂರಿಗೆ ಕಳಿಸಿ ಉಳಿದರೆ ಮಾತ್ರ ಬೇರೆ ಕಡೆಗೆ ಕಳಿಸುತ್ತಾರೆ ಎಂಬುದು ನಿಜವಲ್ಲ ಎಂದು. ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ಸೀಮೆಣ್ಣೆ ಸರಬರಾಜು ಮಾಡುವಾಗ ಸಕಾಲದಲ್ಲಿ ಸೊಸೈಟಿಗಳಿಗೆ ಅದು ತಲುಪುವಂತೆ ವ್ಯವಸ್ಥೆ ಮಾಡಬೇಕು.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಮತ್ತು ಡೀಸಲ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸಕಾಲದಲ್ಲಿ ಬಸ್ಸು ಓಡುತ್ತಿಲ್ಲ, ದಾರಿಯ ಮಧ್ಯದಲ್ಲೇ ನಿಂತುಹೋಗುತ್ತಿವೆ ಎಂಬ ಮಾತನ್ನು ನಾವುಗಳು ಪ್ರತಿ ನಿತ್ಯ ಈ ಸದನದಲ್ಲಿ ಹೇಳುತ್ತಲೇ ಇದ್ದೇವೆ. ನಿನ್ನೆ ತಾನೇ ಒಬ್ಬ ಶಾಸಕ ಮಿತ್ರರೊಬ್ಬರು ಮಂಡ್ಯದಿಂದ ಬೆಂಗಳೂರಿಗೆ ಬರಬೇಕಾದರೆ ಸುಮಾರು ೬ ಘಂಟೆಗಳ ಕಾಲ ಹಿಡಿಯಿತು ಎಂಬುದನ್ನು ಬಹಳ ಆಗ್ರಹದಿಂದ ತಮ್ಮ ಕಷ್ಟವನ್ನು ಹೇಳಿದರು. ಆದ್ದರಿಂದ ಇವತ್ತಿನ ದಿವಸ ಸಿವಿಲ್ ಬಸ್ಸುಗಳು ಏನಿವೆ ಅಂದರೆ ಹಳ್ಳಿಗಳ ಕಡೆಯಲ್ಲಿ ಓಡುತ್ತಿರತಕ್ಕಂಥ ಸಿವಿಲ್ ಬಸ್‌ಗಳೇನಿವೆ ಅವುಗಳಿಗೆ ದಿವಸಕ್ಕೆ ೫೦ ಲೀಟರ್ ಡೀಸೆಲ್‌ನ್ನು ಕೊಟ್ಟರೆ ಅದು ಖಂಡಿತವಾಗಿಯೂ ಸಾಲುವುದಿಲ್ಲ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಿ ಬರಬೇಕಾಗಿರತಕ್ಕಂಥ ಬಸ್ಸು ಸುಮಾರು ೬೦ ಮೈಲಿ ದೂರವನ್ನು ಹೋಗಿ ಪುನಃ ವಾಪಸ್ಸು ಬರುವುದಕ್ಕಾಗದೆ ಅಲ್ಲೇ ನಿಂತು ಬಿಟ್ಟಿರತಕ್ಕಂಥ ಪ್ರಸಂಗಗಳು ಇವೆ. ಇದಕ್ಕೆ ಕೇಂದ್ರ ಸರ್ಕಾರದ ನೆರವು ಬೇಕೆಂಬುವುದಾಗಿ ತಾವು ಹೇಳಬಹುದು, ಕೇಂದ್ರ ಸರ್ಕಾರದಿಂದ ನೆರವನ್ನು ತೆಗೆದುಕೊಂಡು ಸ್ವಲ್ಪ ಮಟ್ಟಿಗಾದರೂ ಕೂಡ ಈ ಒಂದು ಖೋತಾ ಏನಿದೆ ಅದನ್ನು ತಪ್ಪಿಸಬೇಕು. ಮತ್ತು ಈಗ ಇರತಕ್ಕಂಥ ೫೦ ಲೀಟರನ್ನು ಇನ್ನೂ ಸ್ವಲ್ಪ ಜಾಸ್ತಿಗೆ ಹೆಚ್ಚಿಸಬೇಕೆಂದು ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ನನಗೆ ಸಾಕಷ್ಟು ಅನುಭವ ಕೂಡ ಇಲ್ಲ. ಆದರೆ ಇದರ ಬಗ್ಗೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಸಸಿಗಳನ್ನು ಬೆಳೆಸತಕ್ಕಂತಹ ವಿಚಾರದಲ್ಲಿ ಹೇಳುವುದಾದರೆ ಕೇವಲ ಮಲೆನಾಡಿನಲ್ಲಿ ಸಸಿಗಳನ್ನು ಬೆಳೆಸುವುದರ ಜೊತೆಗೆ ಮೈದಾನದಲ್ಲೂ ಕೂಡ ಸಸಿಗಳನ್ನು ಬೆಳೆಸುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ. ಕಳೆದ ವಾರ ನನ್ನ ಕ್ಷೇತ್ರಕ್ಕೆ ಸನ್ಮಾನ್ಯ ಮಂತ್ರಿಯವರು ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಅವರಿಗೆ ನಾನು ೪-೬ ದೊಡ್ಡ ದೊಡ್ಡ ಬೆಟ್ಟಗಳನ್ನು ತೋರಿಸಿದ್ದೇವೆ. ಆ ಬೆಟ್ಟಗಳ ಪಕ್ಕದಲ್ಲಿರುವ ಪ್ರದೇಶದಲ್ಲಿ ಟ್ರಂಚ್‌ನ್ನು ಹೊಡೆಸಿ ಅಲ್ಲಿ ಸಸಿಗಳನ್ನು ಏಕೆ ಹಾಕಬಾರದು ಎಂಬುದಾಗಿ ಹೇಳಿದ್ದಕ್ಕೆ ಮಾನ್ಯ ಮಂತ್ರಿಯವರು ಸ್ಥಳದಲ್ಲಿಯೇ ಅದರ ಬಗ್ಗೆ ಆದೇಶ ಕೊಟ್ಟರು. ಪ್ರಕೃತಿಯ ದೃಷ್ಟಿಯಿಂದ ಆ ಬೆಟ್ಟಗಳು ಬೇಸಿಗೆಯಲ್ಲಿ ಒಣಗಿ ಬಂಡೆ ರೂಪದಲ್ಲಿ ಕಾಣುವುದರ ಬದಲು ಹಸಿರು ರೂಪದಲ್ಲಿ ಕಂಡರೆ ನೋಡುವುದಕ್ಕೂ ಚೆನ್ನಾಗಿ ಕಾಣುತ್ತದೆ. ಇದರಿಂದ ಮಳೆ ಬರುವುದಕ್ಕೂ ಕೂಡ ಸಹಾಯಕವಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ತಾವು ಹೆಚ್ಚು ಆಸಕ್ತಿ ವಹಿಸಿ ಕುಷ್ಕಿ ಪ್ರದೇಶದಲ್ಲೂ

ಮತ್ತು ಮೈದಾನ ಪ್ರದೇಶದಲ್ಲೂ ಈ ಸಸಿಗಳನ್ನು ಬೆಳೆಸುವುದಕ್ಕೆ ತಾವು ಹೆಚ್ಚಿನ ಮಟ್ಟಿಗೆ ಆಸಕ್ತಿ ವಹಿಸ ಬೇಕೆಂದು ಈ ಸಂದರ್ಭದಲ್ಲಿ ತಮ್ಮ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ ನನ್ನ ಕ್ಷೇತ್ರವಾದ ಬೆಟ್ಟಹಳ್ಳಿಗೆ ತಮ್ಮ ಕಾರ್ಯಕ್ರಮವನ್ನು ಹಾಕಿ ಕೊಂಡು ಅಲ್ಲಿಗೆ ಭೇಟಿಕೊಟ್ಟಿದ್ದರೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಆ ಹಳ್ಳಿಯಲ್ಲಿ ೧೯೭೬ನೇ ಇಸವಿಯಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಂತಹ ಕಾಲದಲ್ಲಿ ಅಲ್ಲಿಯ ೪-೫ ಜನ ರೈತರನ್ನು ನಿಮ್ಮ ಅರಣ್ಯ ಇಲಾಖೆಯವರು ಜಬರದಸ್ತು ಮಾಡಿ ಆ ರೈತರನ್ನು ಅಲ್ಲಿಂದ ಹೊರದಬ್ಬಿ, ಆ ಜಮೀನಿನಲ್ಲಿ ಸಸಿಗಳನ್ನು ನೆಟ್ಟಿದ್ದಾರೆ. ಆ ಜನ ಬೀದಿಪಾಲಾಗಿದ್ದಾರೆ, ತಾವು ಅಲ್ಲಿಗೆ ಭೇಟಿ ಕೊಟ್ಟಿದ್ದಂತಹ ಸಮಯದಲ್ಲಿ ನಾನು ನಿಮಗೆ ಆ ವಿಷಯವನ್ನು ಹೇಳಿದೆ. ಅದರ ಬಗ್ಗೆ ತಾವು ಸಹಾನುಭೂತಿ ವ್ಯಕ್ತಪಡಿಸಿ ಒಂದಲ್ಲ ಒಂದು ರೀತಿಯಲ್ಲಿ ಅವರಿಗೆ ಪರಿಹಾರವನ್ನು ಮಾಡೋಣ ಎಂಬುದಾಗಿ ತಾವು ಸ್ಥಳದಲ್ಲೇ ಭರವಸೆಯನ್ನು ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ನನ್ನ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತಿದ್ದೇನೆ. ತಕ್ಷಣ ಪರಿಹಾರ ಅವರಿಗೆ ಸಿಕ್ಕುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ಕಾಲಾವಕಾಶ ಇಲ್ಲದೆ ಇರುವ ಕಾರಣ ಅಧ್ಯಕ್ಷರು ನನ್ನ ಕಡೆಗೆ ದೃಷ್ಟಿಯನ್ನು ಬೀರಿದ್ದಾರೆ. ಆದ್ದರಿಂದ ಇನ್ನೂ ಹೆಚ್ಚು ಕಾಲವನ್ನು ತೆಗೆದುಕೊಳ್ಳದ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ, (ಹುಬ್ಬಳ್ಳಿ).— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮೊದಲು ನಾನು ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ಮೊದಲನೆಯದಾಗಿ ಆಹಾರಧಾನ್ಯಗಳ ಬೆಲೆ ಕಡಿಮೆಯಾದ ಮೇಲೆ ಸರ್ಕಾರದ ಧೋರಣೆಗನುಣವಾಗಿ ಜೋಳ, ರಾಗಿ, ಬತ್ತಕ್ಕೆ ಸಪೋರ್ಟ್ ಪ್ರೈಜನ್ನು ಕೊಟ್ಟಿದ್ದಾರೆ. ತಾವು ಕೊಟ್ಟಿರುವ ಪುಸ್ತಕದ ಪ್ರಕಾರ ಪೇಜ್ ನಂ. ೩ ರಲ್ಲಿ:—

		Tonnes
Levy Paddy	...	1,32,681
Price Support Paddy	...	16,041
Price Support Ragi	...	10,448
Price Support Jowar	...	55

ಎಂಬುದಾಗಿ ಹೇಳಿದ್ದೀರಿ. ಇದರ ಮಾರ್ಚಿ ೧೯೭೯ರ ವರೆಗೆ ಜೋಳವನ್ನು ಪರ್ಚೇಸ್ ಮಾಡಿಲ್ಲ ಎಂಬುದಾಗಿ ಹೇಳಬಹುದು, ಏಕೆಂದರೆ ರೈತ ಕಷ್ಟದಲ್ಲಿದ್ದಾನೆ. ಸರ್ಕಾರದ ಧೋರಣೆಗನುಗುಣವಾಗಿ ರೈತನು ಬೆಳೆದಂತಹ ರಾಗಿಯನ್ನು ಖರೀದಿ ಮಾಡಬೇಕು, ಬತ್ತವನ್ನು ಖರೀದಿ ಮಾಡಬೇಕು, ಜೋಳ ವನ್ನು ಖರೀದಿ ಮಾಡಬೇಕು. ಇದು ಸರ್ಕಾರದ ನಿಯಮ. ಮಹಾರಾಷ್ಟ್ರದಲ್ಲಿ ಎಷ್ಟೇ ಜೋಳವನ್ನು ರೈತನು ಮಾರುವುದಕ್ಕೆ ಮುಂದೆ ಬಂದರೆ ಅಷ್ಟನ್ನೂ ತೆಗೆದುಕೊಂಡಿದ್ದಾರೆ. ಅದೇ ರೀತಿ ಗುಜರಾತಿನಲ್ಲಿ ಸರ್ಕಾರದವರು ೫ ಕೋಟಿ ರೂಪಾಯಿಯವರೆಗೆ ಆಹಾರಧಾನ್ಯಗಳನ್ನು ರೈತರಿಂದ ತೆಗೆದುಕೊಂಡಿದ್ದಾರೆ. ಗುಜರಾತಿನಲ್ಲಿ ಸಜ್ಜೆಯನ್ನು ಹೇರಳವಾಗಿ ಬೆಳೆಯುತ್ತಾರೆ ಅದನ್ನೂ ಕೂಡ ಸರ್ಕಾರದವರು ಸಪೋರ್ಟ್ ಪ್ರೈಸ್ ಕೊಟ್ಟು ಪರ್ಚೇಸ್ ಮಾಡಿದ್ದಾರೆ. ಇದೇ ರೀತಿಯ ರಾಷ್ಟ್ರದ ಬೇರೆ ಬೇರೆ ಸರ್ಕಾರಗಳು ರೈತನಿಗೆ ಸಹಾಯ ಮಾಡುವ ದೃಷ್ಟಿಯಿಂದ ಆಹಾರಧಾನ್ಯಗಳನ್ನು ಪರ್ಚೇಸ್ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಕೇವಲ ೫೫ ಟನ್ ಪರ್ಚೇಸ್ ಮಾಡಿದ್ದೇವೆಂದು ತಮ್ಮ ಪುಸ್ತಕದಲ್ಲಿ ಹೇಳಿದ್ದೀರಿ. ಇದಕ್ಕೆ ಕಾರಣ ತಿಳಿಯದು. ಜೋಳವನ್ನು ಮಾರುಕಟ್ಟೆಯಲ್ಲಿ ತೆಗೆದುಕೊಳ್ಳುವವರೇ ಇಲ್ಲ. ಅದರ ಬೆಲೆಯೂ ಕೂಡ ಬಿದ್ದುಹೋಗಿದೆ. ಅಂತಹ ಸಮಯದಲ್ಲಿ ರೈತನ ಸಹಾಯಕ್ಕೆ ಸರ್ಕಾರ ಬಂದು ರೈತರು ಆಹಾರ ಧಾನ್ಯಗಳನ್ನು ಮಾರುವುದಕ್ಕೆ ಮುಂದೆ ಬಂದಲ್ಲಿ ಅದನ್ನು ಸಪೋರ್ಟ್ ಪ್ರೈಸ್ ಕೊಟ್ಟು ತೆಗೆದುಕೊಳ್ಳ ಬೇಕು. ರೈತರಿಂದ ಕಡಿಮೆ ಬೆಲೆಯಲ್ಲಿ ಆಹಾರಧಾನ್ಯಗಳನ್ನು ತೆಗೆದುಕೊಂಡು ಅದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರೆ, ಬಳಕೆದಾರರಿಗೆ ೨೦-೩೦ ಪರ್ಸೆಂಟ್ ಬೆಲೆ ಜಾಸ್ತಿಯಾಗಿರುತ್ತದೆ. ಇದರ ಬಗ್ಗೆ ೨೦ ಪರ್ಸೆಂಟಿಗಿಂತ ಕಡಿಮೆ ದರದಲ್ಲಿ ಮಾರಾಟ ಮಾಡಿ ಬಳಕೆದಾರರಿಗೆ ಅನುಕೂಲ ಒದಗಿಸಿ ಕೊಡುವ ಬಗ್ಗೆ ಸರ್ಕಾರದವರು ಏನಾದರೂ ಆಲೋಚನೆ ಮಾಡಿದ್ದಾರೆಯೇ ? ಎಂಬುದನ್ನು ತಿಳಿಸಬೇಕು.

ಮೂರನೆಯದಾಗಿ ತಾವೇನೋ ತಮ್ಮ ಇಲಾಖೆಯ ಬಗ್ಗೆ ವರದಿಯನ್ನು ಕೊಟ್ಟಿದ್ದೀರಿ. ಆದರೆ ತಮ್ಮ ಕೈಕೆಳಗೆ ಬರತಕ್ಕಂಥಹ ಅನೇಕ ಕಾರ್ಪೊರೇಷನ್‌ಗಳು ಇವೆ. ಅವರ ಬಗ್ಗೆ ಒಂದು ಮಾತನ್ನು ಕೂಡ ಹೇಳಲಿಲ್ಲ. ನನಗೆ ತಿಳಿದ ಮಟ್ಟಿಗೆ ತಮ್ಮ ಕೈಕೆಳಗೆ ಬರತಕ್ಕಂತಹ ೪-೫ ಕಾರ್ಪೊರೇಷನ್‌ಗಳು ಇವೆ. ಅವುಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಒಂದು ಮಾತನ್ನೂ ಕೂಡ ಹೇಳಿಲ್ಲ. ಅದರ ಬಗ್ಗೆ ಹೇಳದೇ ಹೋದರೆ ಹೇಗೆ ?

ಶ್ರೀ ಜಿ. ರಾಮೇಗೌಡ.— ಅದರ ಬಗ್ಗೆ ಒಂದು ಪ್ಯಾರ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಆ ಕಾರ್ಪೊರೇಷನ್‌ಗಳಿಂದ ಬಂದಿರುವ ಲಾಭ ಎಷ್ಟು ? ಅಥವಾ ಆಗಿರುವ ನಷ್ಟವೆಷ್ಟು ? ನನಗೆ ಬೇಕಾಗಿರುವುದು ಅದು. ಅದರ ಲೆಕ್ಕಾಚಾರವೇ ಇಲ್ಲಿ ಇಲ್ಲ. ಅವುಗಳಿಗೆ ಹಣವನ್ನು ನಾವು ಈ ಸಭೆಯಲ್ಲಿ ಮಂಜೂರು ಮಾಡುತ್ತೇವೆ. ಅದರ ಲೆಕ್ಕ-ಪತ್ರದ ವಿಷಯವನ್ನು ಕೇಳತಕ್ಕಂತಹ ಹಕ್ಕು ನಮಗಿಲ್ಲ. ಇಲಾಖೆಯ ಬಗ್ಗೆ ಚರ್ಚೆಯಾಗುತ್ತಿರುವಾಗ ಕಾರ್ಪೊರೇಷನ್‌ಗಳ ಕಾರ್ಯಚಟುವಟಿಕೆಗಳ ಬಗ್ಗೆ ವಿವರಗಳನ್ನು ಕೊಟ್ಟರೆ ಚರ್ಚೆಗೆ ಅನುಕೂಲವಾಗು ವಾಗುತ್ತದೆ. ಅನೇಕ ವ್ಯವಹಾರಗಳು ಕಾರ್ಪೊರೇಷನ್ ಮುಖಾಂತರ ನಡೆಯುತ್ತಿವೆ. ಈ ಸಾರಿ ಸಾಧ್ಯವಾದರೆ ಕೊಡಲಿ. ಆದರೆ ಮುಂದಿನ ಸಾರಿ ಬೇಡಿಕೆಗಳ ಮೇಲೆ ಚರ್ಚೆಯಾಗುವ ಸಮಯಕ್ಕೆ ಸಂಬಂಧಪಟ್ಟ ಮಂತ್ರಿಗಳು ತಮ್ಮ ಕೈಕೆಳಗೆ ಬರತಕ್ಕಂತಹ ಕಾರ್ಪೊರೇಷನ್ ವ್ಯವಹಾರಗಳ ಬಗ್ಗೆ ತಿಳಿಸ ಬೇಕು. ಲಾಭವ ಗಿದ್ದರೆ ಲಾಭವಾಗಿದೆ ಎಂಬುದಾಗಿ ತಿಳಿಸಿ. ಹಾನಿಯಾಗಿದ್ದರೆ ಹಾನಿಯಾಗಿದೆ ಎಂದು ತಿಳಿಸಿ.

ನಾಲ್ಕನೆಯದಾಗಿ ಲೆವಿ ಬತ್ತವನ್ನು ಹೋದ ವರ್ಷ ಎಷ್ಟು ಸಂಗ್ರಹ ಮಾಡಿದ್ದೀರಿ ? ಆ ವ್ಯವಹಾರ ದಲ್ಲಿ ಬತ್ತ ಎಷ್ಟು ಕೆಟ್ಟು ಹೋಗಿದೆ ? ಎಷ್ಟು ಹಾನಿಯಾಗಿದೆ. ಇದರಲ್ಲಿ ಎಷ್ಟು ಲಾಭವಾಗಿದೆ ಇದರ ಬಗ್ಗೆ ವಿವರಗಳನ್ನು ಕೊಡಬೇಕು. ನನಗೆ ತಿಳಿದ ಮಟ್ಟಿಗೆ ಒಂದು ಕಡೆ ೩೦-೪೦ ಸಾವಿರ ಬ್ಯಾಗ್ ಕೆಟ್ಟು ಹೋಗಿದೆ ಎಂಬುದಾಗಿ ಹೇಳುತ್ತಿದ್ದಾರೆ. ಅದರ ಬಗ್ಗೆ ವಿವರಗಳನ್ನು ಕೊಡದಿದ್ದರೆ ಸುಮ್ಮನೆ ಈ ವರದಿ ಮೇಲೆ ಏನು ಚರ್ಚೆ ಮಾಡುವುದು ? ಲಾಭವಾಗಿದ್ದರೆ ಲಾಭವಾಗಿದೆ ಎಂಬುದಾಗಿ ಹೇಳಿ. ಹಾನಿಯಾಗಿದ್ದರೆ ಹಾನಿಯಾಗಿದೆ ಎಂಬುದಾಗಿ ಹೇಳಿ ಕೊಟ್ಟಂತಹ ಹಣ ಯಾವ ರೀತಿ ವ್ಯಯವಾಗಿದೆ ಎಂಬುದು ಈ ಸಭೆಗೆ ಗೊತ್ತಾಗುವುದಿಲ್ಲ. ಈ ವಿಚಾರವನ್ನು ತಾವು ಈ ಸಭೆಗೆ ತಿಳಿಸಬೇಕು. ಈ ಸಭೆ ಯಿಂದ ಸಾರ್ವಜನಿಕರಿಗೆ ನಾವು ಹೇಳಬೇಕು.

ಕೊನೆಯದಾಗಿ ಉರುವಲು ಕಟ್ಟಿಗೆ ಸಿಕ್ಕುವುದು ಬಹಳ ಕಷ್ಟವಾಗಿದೆ ಇದರಿಂದ ಜನಸಾಮಾನ್ಯರು ಬಹಳ ತೊಂದರೆ ಪಡುತ್ತಿದ್ದಾರೆ. ತಾವು ಉರುವಲು ಕಟ್ಟಿಗೆಯನ್ನು ಫಾರೆಸ್ಟ್ ಕಾರ್ಪೊರೇಷನ್ ಮೂಲಕ ಮಾರಾಟ ಮಾಡುತ್ತಿದ್ದೀರಿ ಅದು ಒಂದು ದೊಡ್ಡ ರಾಮಾಯಣ. ಹುಬ್ಬಳ್ಳಿಯಲ್ಲಿ ನಾನು ನೋಡಿದ್ದೇನೆ. ಬೇರೆ ನಗರಗಳಲ್ಲೂ ಇರುವ ಪರಿಸ್ಥಿತಿಯನ್ನು ನಾನೂ ನೋಡಿದ್ದೇನೆ. ೧೦-೬ ಜನರು ರಾತ್ರಿ ಮೂರು ಘಂಟೆಯಿಂದ ಸಾಲು ನಿಂತಿದ್ದರೂ ಅವರಿಗೆ ಸೌದೆ ಸಿಕ್ಕುತ್ತಿಲ್ಲ. ಇದರ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡುವುದರ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ ? ಅದರ ಬಗ್ಗೆ ತಾವು ದಯಮಾಡಿ ತಿಳಿಸಬೇಕು.

೫-೩೦ ಪಿ. ಎಂ.

† ಶ್ರೀ ಜಿ. ರಾಮೇಗೌಡ (ಆಹಾರ ಹಾಗೂ ಅರಣ್ಯ ಶಾಖೆಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ನನ್ನ ಗೆಳೆಯ ಶಾಸಕರು ಬಹಳ ವಿವರವಾಗಿ ಅನೇಕ ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅವುಗಳಲ್ಲಿ ಹಲವಾರು ವಿಚಾರಗಳು ಈಗ ನಡೆಯುತ್ತಿರತಕ್ಕಂಥಹ ವ್ಯವಸ್ಥೆ ಹಾಗೂ ವ್ಯವಹಾರ ಗಳಿಗಿಂತಲೂ ದೂರವಾಗಿದೆ ಎಂದು ಹೇಳಬಯಸುತ್ತೇನೆ. ಆದರೆ ಇದರಲ್ಲಿ ಕೆಲವು ನ್ಯೂನತೆಗಳು ಇವೆ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾದ್ದೇ. ಆದರೆ ನನ್ನ ದುರಾದೃಷ್ಟವೋ ಏನೋ, ಈ ಎರಡು ಮುಖ್ಯ ಖಾತೆಗಳಿಗೆ ಹಣ ಜಾಸ್ತಿ ಕೊಡಬೇಕೆಂದು ಯಾರೂ ಹೇಳಿಕೊಂಡಿಲ್ಲವಲ್ಲಾ ಎನ್ನುವುದು. ಈ ಬಗ್ಗೆ ಒಂದು ಗಾದೆ ಹೇಳಬೇಕಾದರೆ ಹಣ ಇದ್ದವನನ್ನು ಮದುವೆ ಆದರೂ ಕೂಡ ಋಣ ಇದ್ದಷ್ಟೇ ಎಂಬಂತೆ ಕೆಲಸ ಮಾಡಬೇಕಾದ್ದು ನನ್ನ ಕರ್ತವ್ಯವಾಗಿದೆ. ಇದು ನನ್ನ ಕರ್ಮವೋ ಏನೋ. ಇದ್ದುದರಲ್ಲಿ ಶ್ರದ್ಧೆ ವಹಿಸಿ ಕೆಲಸ ಮಾಡಬೇಕೆನ್ನುವುದೇ ನನ್ನ ಒಂದು ಆಸೆ. ಈಗ ಆಹಾರದ ವಿಚಾರವಾಗಿ ನನ್ನ

ಸ್ನೇಹಿತರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲಿ ಅವರುಗಳು ಬಹುಮುಖ್ಯವಾದ ವಿಚಾರ ಏನು ಹೇಳಿದ್ದಾರೆ ಎಂದರೆ ಆಹಾರ ಪದಾರ್ಥಗಳ ಬೆಲೆಗಳು ಕಡಿಮೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಮತ್ತೆ ಇನ್ನೇನು ಹೇಳಿದ್ದಾರೆ ಎಂದರೆ ಐ. ಎ. ಎಸ್. ಆಫೀಸರ್ಸ್ ಸರಿಯಾಗಿ ವ್ಯವಸಾಯ ಗಾರನೊಂದಿಗೆ ಮಾತನಾಡುವುದಿಲ್ಲ, ಅವರ ಹತ್ತಿರ ಹೋಗಿ ಮಾತನಾಡುವುದಕ್ಕೆ ಸರಿಯಾದ ಅವಕಾಶ ಇಲ್ಲಾ, ಹಾಗೆ ಇಲ್ಲಾ. ಹೀಗೆ ಇಲ್ಲಾ ಅನ್ನುವ ವಿಚಾರ ಹೇಳಿದ್ದಾರೆ. ಅದಕ್ಕೆ ಆ ವಿಷಯಗಳೂ ಕೂಡ ನನ್ನ ಅನುಭವದಲ್ಲಿ ಇದೆ. ಈ ಆಹಾರ ಪದಾರ್ಥಗಳ ಬೆಲೆಗಳ ಬಗ್ಗೆ ನ್ಯಾಷನಲ್ ಪ್ರೈಸ್ ಕಮೀಷನ್ ನವರು ಮೊದಲೇ ಇದಕ್ಕೆ ೮೨ ರೂಪಾಯಿ ಎಂದು ಗೊತ್ತು ಮಾಡಿದ್ದರು. ಹಾಗೆ ಗೊತ್ತು ಮಾಡಿದಾಗ ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಾದ ಶ್ರೀಮಾನ್ ಬರ್ನಾಲಾರವರು ವ್ಯವಸಾಯ ಮಂತ್ರಿಗಳ ಒಂದು ಸಭೆಯನ್ನು ಕರೆದರು. ಆವಾಗ ನಾನು ನಮ್ಮ ಮುಖ್ಯಮಂತ್ರಿಗಳ ಹತ್ತಿರ ಹೋಗಿ ನಮ್ಮ ಕಷ್ಟಗಳನ್ನು ಹೇಳಿಕೊಂಡೆವು. ನಾವು ಅವರೊಂದಿಗೆ ಏನು ಹೇಳಿಕೊಂಡೆವು ಎಂದರೆ ನಾವು ಈ ಬಗ್ಗೆ ಎಷ್ಟೇ ವಾದ ಮಾಡಿದಾಗ್ಯೂ ಕೂಡ ನಿಮ್ಮ ತರಹ ಮಾತನಾಡುವುದಕೆ ಬರುವುದಿಲ್ಲ. ನೀವು ಬರಲೇ ಬೇಕು ಎಂದು ಕೇಳಿದಾಗ ಅವರು ತಮ್ಮ ಕೆಲಸವನ್ನು ಬಿಟ್ಟು ಈ ಸಭೆಗೆ ಬಂದಿದ್ದರು. ಆ ಸಭೆಗೆ ತಮಿಳುನಾಡಿನ ಮುಖ್ಯಮಂತ್ರಿಗಳು, ಆಂಧ್ರದ ಮುಖ್ಯಮಂತ್ರಿಗಳು ಬಂದಿದ್ದರು, ಕೇರಳದ ಮುಖ್ಯಮಂತ್ರಿಗಳಿಗೆ ಸ್ವಲ್ಪ ತೊಂದರೆಯಾದುದರಿಂದ ಅವರು ಬೇರೆ ಒಬ್ಬರು ಮಂತ್ರಿಗಳನ್ನು ಕಳುಹಿಸಿ ದ್ದರು. ಸ್ವಾಮಿ, ನನ್ನ ಅನುಭವದಲ್ಲಿ ಹೇಳಬೇಕಾದರೆ ಯಾರೇ ಒಬ್ಬ ದೊಡ್ಡ ಲಾಯರ್ ಆಗಲಿ ಅವರು ಹೈಕೋರ್ಟ್ ಮುಂದೆ ಹೋಗಿ ಯಾವ ರೀತಿ ವಾದ ಮಾಡುತ್ತಾರೋ ಅದಕ್ಕಿಂತಲೂ ಕೂಡ ಚೆನ್ನಾಗಿ ನಮ್ಮ ಮುಖ್ಯಮಂತ್ರಿಗಳು ಈ ಬಗ್ಗೆ ಅಲ್ಲಿ ವಾದ ಮಾಡಿದರು. ಏನು ವಾದ ಮಾಡಿದರು ಎಂದರೆ ಈಗ ನಮ್ಮಲ್ಲಿ ಸೆನ್ಸಸ್ ಹೆಚ್ಚಾಗಿದೆ, ಔಷಧಿ ಬೆಲೆಗಳು ಜಾಸ್ತಿಯಾಗಿದೆ, ಗೊಬ್ಬರದ ಬೆಲೆಗಳು ಜಾಸ್ತಿಯಾಗಿದೆ, ವ್ಯವಸಾಯಗಾರನ ಕೂಲಿ ಜಾಸ್ತಿಯಾಗಿದೆ ಹೀಗೆಲ್ಲಾ ವಾದ ಮಾಡಿ ಬೇಕಾದಷ್ಟು ವಿವರ ಗಳನ್ನು ಕೇಂದ್ರ ಸರ್ಕಾರದವರಿಗೆ ಕೊಟ್ಟರು, ಇಷ್ಟೇ ಅಲ್ಲದೆ ಅವರನ್ನು ಕೈ ಮುಗಿದು ಕೇಳಿದರು ಮತ್ತು ಸರ್ಕಾರದ ಒಂದು ಕಾನೂನಿನ ಬಗ್ಗೆಯೂ ಸಹ ಹೇಳಿದರು. ಇಷ್ಟೆಲ್ಲಾ ಹೇಳಿದರೂ ಕೂಡ ಅವರು ಏನು ಹೇಳಿದರು ಎಂದರೆ ಆಗಲಿ ಪರಿಶೀಲಿಸುತ್ತೇನೆ ಎಂದು ಹೇಳಿ ನಮ್ಮನ್ನೆಲ್ಲಾ ಕಳುಹಿಸಿಬಿಟ್ಟರು. ಊಟಾನೂ ಸಹ ನಮಗೆ ಹಾಕಲಿಲ್ಲಾ, ನಾವು ಕರ್ನಾಟಕ ಭವನಕ್ಕೆ ಬಂದು ಊಟ ಮಾಡಿದೆವು. ಮೂರು ರಾಜ್ಯದ ಮುಖ್ಯಮಂತ್ರಿಗಳೂ ಸಹ ಹೋಗಿ ಈ ಬಗ್ಗೆ ವಾದ ಮಾಡಿದ್ದಕ್ಕೆ ೩ ರೂಪಾಯಿ ಮಾತ್ರ ಬೆಲೆ ಯನ್ನು ಹೆಚ್ಚಿಸಿದರು. ಇದಕ್ಕೆ ನಾವು ಜವಾಬ್ದಾರರೇ ಎಂದು ನಾನು ತಮ್ಮನ್ನು ಕೇಳಬೇಕಾಗಿದೆ. ಇನ್ನೊಬ್ಬರು ಹೇಳಿದರು ಗೋಧಿಗೆ ನೀವು ಅಷ್ಟು ಬೆಲೆ ಅವರಿಗೆ ಕೊಟ್ಟಿದ್ದೀರಿ ನಮಗೆ ನೀವು ಇಲ್ಲಿ ಕಡಿಮೆ ಬೆಲೆ ಕೊಟ್ಟಿದ್ದೀರಿ ಎಂದು. ಆದಕ್ಕೆ ಅವರು ಏನು ಹೇಳಿದರು ಎಂದರೆ ಗೋಧಿ ಆದರೆ ಕನ್‌ವರ್ಟೆಡ್ ಕ್ರಾಪ್, ಭತ್ತ ನಾನ್ ಕನ್‌ವರ್ಟೆಡ್ ಕ್ರಾಪ್ ಅಂತ ಹೇಳಿದರು ಮತ್ತು ಇನ್ನೇನು ಹೇಳಿದರು ಎಂದರೆ ೧೦೦ ಕೆ. ಜಿ. ಭತ್ತವನ್ನು ಅಕ್ಕಿ ಮಾಡಿಸಲು ತೆಗೆದುಕೊಂಡು ಹೋದರೆ ೬೦-೭೦ ಕೆ. ಜಿ. ಅಕ್ಕಿ ಬರುತ್ತದೆ, ಆದುದರಿಂದ ಅದಕ್ಕೆ ಸರಿಸಮನಾಗಿ ಇರುವ ಹಾಗೆ ಇದರ ಬೆಲೆಯನ್ನು ೮೫ ರೂಪಾಯಿ ಕೊಟ್ಟರೆ ಸಾಕು ಅಂತ ಹೇಳಿದರು. ನಾವು ಈ ಬಗ್ಗೆ ಎಷ್ಟೇ ವಾದ ವಿವಾದ ಮಾಡಿದಾಗ್ಯೂ ಕೂಡ ಏನೂ ಪ್ರಯೋಜನ ವಾಗಲಿಲ್ಲಾ. ಆದುದರಿಂದ ನಾನು ಹೇಳುತ್ತೇನೆ ಈ ಬಗ್ಗೆ ನೀವು ಏನು ಕಳಕಳಿಯನ್ನು ವ್ಯಕ್ತಪಡಿಸಿ ದ್ದೀರೋ, ಅದರಲ್ಲಿ ನಾನು ಒಬ್ಬನಾಗಿ ನನ್ನ ಕಳಕಳಿಯನ್ನು ವ್ಯಕ್ತಪಡಿಸುತ್ತೇನೆ, ಮತ್ತು ಅವರ ಬಗ್ಗೆ ಕರುಣೆ ತೋರಿಸುತ್ತೇನೆ. ಆಹಾರ ಬೆಳೆಯುವವರಲ್ಲಿ ನಾನೂ ಸಹ ಒಬ್ಬ ನಾಗಿದ್ದೇನೆ. ಆದರೆ ಅದೇನೇ ಇರಲಿ ಈ ಲೆವಿ ರೇಟ್ ಗೊತ್ತು ಮಾಡುವುದಕ್ಕೆ ನಮ್ಮ ಸರ್ಕಾರ ಕಾರಣವಲ್ಲ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಈ ಬಗ್ಗೆ ಯಾವುದೋ ಮೆರವಣಿಗೆ ಒರುತ್ತದೆ ಹಾಗೆ ಹೀಗೆ ಅಂತ ಹೇಳಿ ದರು. ಅವರಿಗೂ ಸಹ ನಾನು ಹೇಳುತ್ತೇನೆ ಹಾಗೇನಾದರೂ ಈ ಬಗ್ಗೆ ಮೆರವಣಿಗೆ ಬಂದರೆ ಆ ಮೆರವಣಿಗೆಯಲ್ಲಿ ನಾನೇ ಮುಂದೆ ಹೋಗಿ ನಿಂತುಕೊಳ್ಳುತ್ತೇನೆ ಎಂದು. ನಿಜವಾಗಿಯೂ ಹೇಳಬೇಕಾದರೆ ಈ ಆಹಾರ ಪದಾರ್ಥಕ್ಕೆ ಇದು ಸರಿಯಾದ ಬೆಲೆ ಅಲ್ಲ ಎಂದು ನಾನೂ ಕೂಡ ನಿಮ್ಮೆಲ್ಲರೊಂದಿಗೆ ಧ್ವನಿ ಗೂಡಿಸುತ್ತೇನೆ. ಇದಕ್ಕೆ ಕೊಟ್ಟಿರುವ ದರ ಸರಿಯಲ್ಲ ಎಂದು ಮತ್ತೊಮ್ಮೆ ಹೇಳುತ್ತೇನೆ. ಈ ಬಗ್ಗೆ ತಮ್ಮೆಲ್ಲರಲ್ಲೂ ನಾನು ಕೇಳಿಕೊಳ್ಳುವುದು ಇಷ್ಟೆ. ನಾವು ಮಾಡಬೇಕಾದ ಕೆಲಸಗಳು ಬಹಳಷ್ಟು ಇವೆ. ಈ ಬಗ್ಗೆ ನಾವು ಸ್ವಲ್ಪ ಮುತುವರ್ಜಿ ವಹಿಸಿ ಕೆಲಸ ಮಾಡಬೇಕಾಗಿದೆ. ಏನು ಮಾಡಬೇಕು ಎಂದರೆ

ತಮ್ಮ ತಮ್ಮ ಕ್ಷೇತ್ರಗಳಿಗೆ ತಾವು ಹೋಗಿ ರೈತರಿಗೆ ಸರಿಯಾದ ಒಂದು ತಿಳುವಳಿಕೆ ಕೊಡಬೇಕು ಏನೆಂದರೆ ಭತ್ತ, ರಾಗಿ ಈ ಪದಾರ್ಥಗಳು ಬೆಳೆಯುವುದು ಸರಿಯಿಲ್ಲ ಅದಕ್ಕೆ ಬದಲಾಗಿ ಇನ್ನು ಇತರ ಪದಾರ್ಥಗಳು ಅಂದರೆ ಬೇಳೆ, ಆಯಿಲ್ ಸೀಡ್ಸ್ ಬೆಳೆಯುವ ಹಾಗೆ ಹೇಳಬೇಕು. ಮಾನ್ಯ ಇಬ್ರಾಹಿಂ ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ನನ್ನ ದುರಾದೃಷ್ಟ ಅವರು ಇಲ್ಲ. ಅವರು ಹೇಳಿದರು ಏನೆಂದರೆ ನಾವು ಒಂದು ರೈತರ ಸಮ್ಮೇಳನ ಮಾಡುತ್ತೇವೆ ಅಲ್ಲಿಗೆ ಚರಣಸಿಂಹರು ಬರುತ್ತಾರೆ ಎಂದು ಹೇಳಿದರು. ಅವರು ಮಾಡಬೇಕಾದ ಕೆಲಸ ಇಷ್ಟೆ. ಆಯಾಯಾ ಕ್ಷೇತ್ರದ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಿ ರೈತರಿಗೆ ಸರಿಯಾದ ತಿಳುವಳಿಕೆ ಕೊಟ್ಟು ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯುವುದು ಕಡಿಮೆ ಮಾಡಿ ಇತರೇ ಬೆಳೆಗಳು ಮತ್ತು ಆಯಿಲ್ ಸೀಡ್ಸ್ ಮುಂತಾದವನ್ನು ಬೆಳೆಯುವ ಹಾಗೆ ಮಾಡಬೇಕು. ಆ ಪದಾರ್ಥಗಳೂ ಕೂಡ ಹೆಚ್ಚು ಹೆಚ್ಚು ಬೇಕಾಗುತ್ತದೆ. ನಮ್ಮಲ್ಲಿ ಸಾಕಷ್ಟು ಆಯಿಲ್ ಸೀಡ್ಸ್ ಇಲ್ಲಾ. ಅಂಥಾದ್ದನ್ನು ಬೆಳೆದರೆ ಬೆಲೆಯೂ ಕೂಡ ಜಾಸ್ತಿ ಬರುತ್ತದೆ. ಹಾಗೆ ಮಾಡಬೇಕು. ತರಕಾರಿ ಬೆಳೆದರೂ ಕೂಡ ಜಾಸ್ತಿ ಬೆಲೆ ಬರುತ್ತದೆ. ಮಾನ್ಯ ಗಂಗಾಧರ್‌ರವರು ಟೊಮೆಟೋ ವಿಚಾರವಾಗಿ ಹೇಳಿದರು ಅದರ ಬೆಲೆ ಅಧೋಪತನಕ್ಕೆ ಇಳಿದಿದೆ ಎಂದು. ಈವೊತ್ತು ಒಂದು ಕೆ. ಜಿ ಟೊಮೆಟೋಗೆ ೨-೧೦ ಪೈಸೇ ಇದೆ. ಇದನ್ನು ಅವರು ತಿಳಿಯಬೇಕು, ಆದುದರಿಂದ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಿ ಇದನ್ನು ಸುಧಾರಿಸುವಂಥಾ ಒಂದು ಕ್ರಮವನ್ನು ಮಾಡಬೇಕು. ತಮ್ಮ ತಮ್ಮ ಕ್ಷೇತ್ರದಲ್ಲಿ ಈ ಬಗ್ಗೆ ಒಂದು ಸೊಸೈಟಿ ಮಾಡಿಕೊಂಡು ಅಲ್ಲಿ ತಮ್ಮ ಸಾಮಾನುಗಳನ್ನು ಮಾರಾಟ ಮಾಡುವುದು ಇತ್ಯಾದಿ ಉಪಯೋಗಗಳನ್ನು ಮಾಡುವಂಥಾ ಒಂದು ವ್ಯವಸ್ಥಿತವಾದ ಕ್ರಮವನ್ನು ಮಾಡಬೇಕು ಎಂದು ಹೇಳುತ್ತೇನೆ ಮತ್ತು ಅವರು ಒಂದು ಕೋಲ್ಡ್ ಸ್ಟೋರೇಜ್ ಇಟ್ಟುಕೊಂಡು ಸ್ವಲ್ಪ ಸ್ವಲ್ಪ ಮಾಲುಗಳನ್ನು ಮಾತ್ರ ಹೊರಗೆ ಬಿಟ್ಟು ಬಾಕಿದನ್ನು ಇಟ್ಟುಕೊಂಡು ಮಾರಾಟ ಮಾಡುವುದಾದರೆ ಹೆಚ್ಚು ಬೆಲೆ ಬರುತ್ತದೆ. ಅದರಲ್ಲಿ ನಾನೂ ಕೂಡ ಒಬ್ಬನಾಗಿರುತ್ತೇನೆ. ನಾನಂತೂ ನಿಜವಾಗಿ ಹೇಳಬೇಕಾದರೆ ಈ ರೈತರ ಬಗ್ಗೆ ಬಹಳ ಸಂಕಟ ಪಡುತ್ತೇನೆ : ಏತಕ್ಕೆಂದರೆ ಅವರಿಗೆ ಹೆಚ್ಚಿಗೆ ಸಹಾಯ ಮಾಡುವುದಕ್ಕಾಗಲಿಲ್ಲವಲ್ಲಾ ಎಂದು. ನಮ್ಮ ಸರ್ಕಾರದ ಮುಖ್ಯಮಂತ್ರಿಗಳಿಗೂ ಈ ಬಗ್ಗೆ ವಂದನೆಯನ್ನರ್ಪಿಸುತ್ತೇನೆ. ಏತಕ್ಕೆಂದರೆ ಅವರು ಈ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಎಷ್ಟೇ ವಾದ ಮಾಡಿದರೂ ಸಹ ಏನೂ ಆಗಲಿಲ್ಲಾ. ಕೊನೆಗೆ ಅವರಿಗೆ ಟ್ರಾನ್ಸ್‌ಪೋರ್ಟ್ ಛಾರ್ಜಸ್ ಅಂತ ೬ ರೂಪಾಯಿಯನ್ನು ಅವರಿಗೆ ನಾವು ಸೇರಿಸಿ ಕೊಟ್ಟರೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಬಹುದು. ಅಂತ ನಮ್ಮ ಕೈಲಾದಷ್ಟನ್ನು ಮಾಡಿದ್ದೇವೆ. ನಾನು ಮೊದಲು ಒಂದು ಪರಿಪಾಟ ಹೇಳಿದೆ ೯೫ ರೂಪಾಯಿ ಅಂತ ಹೇಳಿದೆ. ಹಾಗಿಲ್ಲಾ. ಈ ರೀತಿಯಾಗಿದೆ ಇದೆ ೮೫-೯೦-೯೫-೧೦೦ ಹೀಗೆ ಇದೆ. ರೈತರ ಮೇಲೆ ಒಂದು ಕಳಕಳಿಯನ್ನು ಇಟ್ಟುಕೊಂಡೇ ಈ ಒಂದು ಸೂಚನೆ ಕೊಟ್ಟು ನಮ್ಮ ಕೈಯಲ್ಲಿ ರೈತರಿಗೆ ಎಷ್ಟು ಉಪಯೋಗ ಮಾಡಬೇಕೋ ಅಷ್ಟನ್ನು ಮಾಡಿದ್ದೇವೆ.

ಇನ್ನು ಲೆವಿ ವಿಚಾರದ ಬಗ್ಗೆ ಎಲ್ಲರೂ ಹೇಳಿದರು. ಮತ್ತು ವಿರೋಧಪಕ್ಷದ ನಾಯಕರೂ ಸಹ ಈ ಬಗ್ಗೆ ಹೇಳಿದರು. ಈ ಜಾವರ್ ಅನ್ನು ಏತಕ್ಕೆ ಇಷ್ಟು ಕಡಿಮೆಯಾಗಿ ಕೊಂಡಿದ್ದೀರಿ ಎಂದು ಕೇಳಿದರು. ನಾವು ಕೊಂಡಿರುವ ಜಾವರ್ ಧಾರವಾಡ ಕಡೆಯದು, ಅದು ಬರೇ ರೊಟ್ಟಿ ಮಾಡುವಂಥಾ ಜಾವರ್ ಆಗಿರುವುದರಿಂದ ಅದಕ್ಕೆ ಹೆಚ್ಚು ಬೆಲೆ ಕೊಡುವುದಕ್ಕಾಗುವುದಿಲ್ಲಾ. ಆದುದರಿಂದ ಅದನ್ನು ಹೆಚ್ಚು ಕೊಂಡುಕೊಳ್ಳಬೇಕು ಅನ್ನು ಇಷ್ಟ ಇರಲಿಲ್ಲಾ. ಎರಡು ತಿಂಗಳ ಹಿಂದೆ ಕೇಂದ್ರದಿಂದ ಒಂದು ಆರ್ಡರ್ ಬಂದಿತ್ತು. ಏನೆಂದರೆ ಹೈಬ್ರಿಡ್ ಜಾವರ್ ಅನ್ನು ಕೊಂಡುಕೊಳ್ಳಬೇಕು ಎಂದು. ಅದಕ್ಕೆ ಕೇಂದ್ರ ಸರ್ಕಾರದವರು ೮೫ ರೂಪಾಯಿ ಅಂತ ಗೊತ್ತು ಮಾಡಿದ್ದರು, ನಾವು ಅದರ ಜೊತೆಗೆ ಆ ಹೈಬ್ರಿಡ್ ಜಾವರ್‌ಗೂ ಕೂಡ ೬ ರೂಪಾಯಿ ಜಾಸ್ತಿ ಸೇರಿಸಿ ಒಟ್ಟು ೯೧ ರೂಪಾಯಿ ಕೊಡುತ್ತೇವೆ ಕೊಡಿ ಎಂದು ಹೇಳಿದೆವು. ಆ ವೇಳೆಗೆ ರೈತರಲ್ಲಿ ಒಳ್ಳೆಯ ಕ್ವಾಲಿಟಿ ಇರತಕ್ಕಂಥಾ ಜಾವರ್ ಏನು ಇತ್ತೋ ಅದು ಆಗಲೇ ಮಾರಾಟ ಆಗಿಹೋಗಿತ್ತು. ಇದರ ಜೊತೆಗೆ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಕೆಲವರಿಗೆ ಇದರ ಬಗ್ಗೆ ಟ್ರೈನಿಂಗ್ ಕೊಟ್ಟರು, ಇದರ ಕಾಳು ಹೀಗೆ ಇರಬೇಕು, ಇದರ ರೂಪರೇಷೆಗಳು ಹೀಗೆ ಇರಬೇಕು ಎನ್ನುವ ವಿವರಣೆ ಕೊಟ್ಟು ಟ್ರೈನಿಂಗ್‌ನ್ನೂ ಕೊಟ್ಟು ಪಾಲಿಥಿನ್ ಬ್ಯಾಗ್‌ನಲ್ಲಿ ಕೆಲವು ಸ್ಯಾಂಪಲ್ಸ್ ಕೂಡ ಕೊಟ್ಟರು. ನಮ್ಮ ರೈತರು ಅದನ್ನು ಕೊಂಡು ಕೊಂಡು ಕೊನೆಗೆ ತಾವು ಬೆಳೆದುದನ್ನು ಇಲ್ಲಿ ಮಾರಾಟ ಮಾಡಲು ತಂದರು. ಆವಾಗ ನೋಡಿದರೆ ಅವರಿಗೆ ಪಾಲಿಥಿನ್ ಬ್ಯಾಗ್‌ನಲ್ಲಿ ಯಾವ ರೀತಿ ಒಂದು ಸ್ಯಾಂಪಲ್ ಕೊಟ್ಟಿದ್ದರೋ, ಅದು ಹೇಗೆ ಇರ

ಬೇಕು ಎಂದು ಹೇಳಿದ್ದರೋ ಅದನ್ನೂ ಇದನ್ನು ಹಿಡಿದು ನೋಡಿದರೆ ಪಾಲಿಥಿನ್ ಬ್ಯಾಗ್‌ನಲ್ಲಿ ಅದರದ್ದು ಏನು ಒಂದು ಬಣ್ಣ ಇತ್ತೋ ಆ ಬಣ್ಣ ಇದಕ್ಕೆ ಸರಿಯಾಗಿ ಹೋಲಿಲ್ಲಾ, ಅದರ ಸೈಜ್ ಸರಿಯಾಗಿ ಇರಲಿಲ್ಲಾ, ಜೊತೆಗೆ ಕಸಕಡ್ಡಿಗಳು ಇದ್ದುವು, ಬಹಳ ವ್ಯತ್ಯಾಸಗಳು ಇದ್ದುವು, ಆದುದರಿಂದ ಅವರು ಅದನ್ನು ರಿಜೆಕ್ಟ್ ಮಾಡಿದರು. ಅವರಿಗೆ ಮೊದಲೇ ಹೇಳಿದ್ದರು ಏನಂತ ಅಂದರೆ ಕ್ವಾಲಿಟಿ ಹೀಗೆ ಇರಬೇಕು, ಹೀಗೆ ಮಾಡಬೇಕು ಸರಿಯಾಗಿ ಇಲ್ಲದೇ ಹೋದರೆ ನಾವು ತೆಗೆದುಕೊಳ್ಳುವುದಿಲ್ಲಾ ಎನ್ನುವ ಒಂದು ಕಂಡೀಷನ್ ಅನ್ನು ಅವರು ಮೊದಲೇ ಹಾಕಿದ್ದರು. ಆದುದರಿಂದ ಅವರಲ್ಲಿ ವ್ಯತ್ಯಾಸ ಇದ್ದುದರಿಂದ ನಮ್ಮ ಸಹಕಾರ ಸೊಸೈಟಿಗಳು ಅದನ್ನು ಕೊಂಡುಕೊಳ್ಳುವುದಕ್ಕೆ ಹೋಗಲಿಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ.— ತಮ್ಮ ಉತ್ತರ ನೋಡಿದರೆ ಕೇಂದ್ರ ಸರ್ಕಾರದವರು ಈ ಜಾವರ್ ಅನ್ನು ಖರೀದಿ ಮಾಡಬೇಕಾಗಿತ್ತು, ಇದು ಅವರ ಕರ್ತವ್ಯ ಅವರಲ್ಲಿ ಸಿಬ್ಬಂದಿ ಇತ್ತು. ಅವರೇ ಮಾಡಬೇಕಾಗಿತ್ತು ಅನ್ನುವ ಅರ್ಥದಲ್ಲಿ ಹೇಳುತ್ತಾ ಇದ್ದೀರಿ. ನಾನು ಹೇಳುತ್ತೇನೆ ಗುಜರಾತ್ ಸರಕಾರದವರು ಕೇಂದ್ರ ಸರ್ಕಾರದವರ ಸಹಾಯ ಇಲ್ಲದೇನೇ ಅವರು ಜೋಳವನ್ನು ಖರೀದಿ ಮಾಡಿದ್ದಾರೆ. ಹಾಗೇ ಹೈಬ್ರೀಡ್ ಜಾವರ್ ಅನ್ನು ಮಹಾರಾಷ್ಟ್ರ ಸರ್ಕಾರದವರು ಷೋಲಾಪುರ ಮತ್ತು ಕೊಲ್ಹಾಪುರ ಜಿಲ್ಲೆಯಲ್ಲಿ ಖರೀದಿ ಮಾಡಿದ್ದಾರೆ. ಅದರ ವಿವರಣೆಯನ್ನು ನಾನು ಬಡ್ಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೇನೆ. ಗುಜರಾತ್‌ನವರು ಸಜ್ಜೆಯನ್ನು ಕೇಂದ್ರ ಸರ್ಕಾರದ ಸಹಾಯವಿಲ್ಲದೇನೇ ಖರೀದಿ ಮಾಡಿದ್ದಾರಲ್ಲಾ ಹಾಗೇಕೆ ತಾವು ಮಾಡಲಿಲ್ಲಾ ಎಂದು ನಾನು ಕೇಳುತ್ತೇನೆ.

ಶ್ರೀ ಜಿ. ರಾಮೇಗೌಡ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ್ದಕ್ಕೆ ಸ್ವಲ್ಪ ಮಟ್ಟಿಗೆ ಉತ್ತರ ಹೇಳುವ ಜವಾಬ್ದಾರಿ ನನ್ನದಾಗಿರುವುದರಿಂದ ತಾವು ಇದಕ್ಕೆ ಸ್ವಲ್ಪ ಅಪ್ಪಣೆ ಕೊಟ್ಟರೆ, ಸ್ವಲ್ಪ ಕಾಲಾವಕಾಶ ಕೊಟ್ಟರೆ ಅದಕ್ಕೆ ಉತ್ತರ ಹೇಳುತ್ತೇನೆ, ಸ್ವಾಮಿ.

ನಾವು ಹೈಬ್ರಿಡ್ ಜೋಳವನ್ನು ತೆಗೆದುಕೊಳ್ಳಬಾರದು ಎಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ಕಾರಣ ಏನೆಂದರೆ ಇದನ್ನು ನಮ್ಮ ಕರ್ನಾಟಕದಲ್ಲಿ ಊಟಕ್ಕೆ ಉಪಯೋಗಿಸುವುದು ಬಹಳ ಕಡಿಮೆ. ಉತ್ತರ ಕರ್ನಾಟಕದಲ್ಲಿಯೂ ಹೈಬ್ರಿಡ್ ಜೋಳವನ್ನು ಜನರು ತಿನ್ನುವುದಿಲ್ಲ. ಖಾರೀಫ್ ಜೋಳವನ್ನು ಬೆಳೆಯುತ್ತಾರೆ, ಅದನ್ನೇ ಉಪಯೋಗಿಸುತ್ತಾರೆ. ನಾವು ಹೈಬ್ರಿಡ್ ಜೋಳವನ್ನು ಸರಿಯಾದ ರೀತಿಯಲ್ಲಿಡತಕ್ಕ ವ್ಯವಸ್ಥೆಯನ್ನು ಮಾಡಿದ್ದರೂ ಕೂಡ ಅದು ಮೂರು ತಿಂಗಳ ಮೇಲೆ ನಿಲ್ಲುವುದಿಲ್ಲ. ಆದ್ದರಿಂದ ನಾವು ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಿ, ಇದನ್ನು ತೆಗೆದುಕೊಳ್ಳಬಾರದು ಎಂದು ತೀರ್ಮಾನ ಮಾಡಿದ್ದೇವೆ. ನಮ್ಮ ವಿರೋಧ ಪಕ್ಷದ ನಾಯಕರು ಮತ್ತೆ ಈ ವಿಷಯವನ್ನು ಪರಿಶೀಲನೆ ಮಾಡಿ ಎಂದು ಹೇಳುತ್ತಿದ್ದಾರೆ, ಇದಕ್ಕೆ ಸೇಫ್‌ಟಿ ಮೆಷರ್ಸ್ ಏನಾದರೂ ಇದ್ದರೆ ಅವರು ಹೇಳಲಿ ನಾನು ಅವರೊಡನೆ ಕಲೆತು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತೇನೆ. ಇದು ಹೆಚ್ಚು ಕಾಲ ಕೆಡದ ರೀತಿ ಇದ್ದರೆ ಸಾಕು.

ಇನ್ನು ಕೆಲವು ಸದಸ್ಯರು ಲೆವಿ ಭತ್ತದಿಂದ ನಮಗೆ ನಷ್ಟವಾಗಿದೆ, ಇದರಲ್ಲಿ ನಷ್ಟ ಏಕೆ ಆಯಿತು ಎನ್ನುವ ವಿಚಾರವನ್ನು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇದರಲ್ಲಿ ನಮಗೆ ನಷ್ಟವಾಗಿಲ್ಲ. ನಾವು ಇದರ ಬಗ್ಗೆ ಸಬ್ಸಿಡಿ ಕೊಟ್ಟು ಮಾರಾಟ ಮಾಡಿಸಿದ್ದೇವೆ. ನಮ್ಮ ಅಕ್ಕಿಯ ರೇಟಿಗೂ, ಮಾರ್ಕೆಟನಲ್ಲಿ ಮಾರಾಟ ಮಾಡತಕ್ಕ ಅಕ್ಕಿಗೂ ಬಹಳ ವ್ಯತ್ಯಾಸ ಇದೆ. ನಾವು ಇಲ್ಲಿ ಬಡವರಿಗೆ ಅನುಕೂಲವಾಗುವ ಹಾಗೆ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರಾದ ರಾಮದೇವ್ ಅವರು, ಅಕ್ಕಿಯಲ್ಲಿ ಕಲ್ಲು, ಮಣ್ಣು ಕಡ್ಡಿ ಕಸ ಇರುತ್ತದೆನ್ನುವ ಮಾತನ್ನು ಹೇಳಿದ್ದಾರೆ. ನಾನು ಮಾನ್ಯ ಸದಸ್ಯರನ್ನು ಅವರವರ ಕ್ಷೇತ್ರದಲ್ಲಿರುವ ಅಂಗಡಿಗಳಿಗೆ ಕರೆದುಕೊಂಡು ಹೋಗಿ, ಚೆಕ್ ಮಾಡೋಣ ಎಂದರೆ ಯಾರೂ ಬರುವುದಿಲ್ಲ. ಯಾರಾದರೂ ಬಂದರೆ ನಾವು ಹೋಗಿ ಚೆಕ್ ಮಾಡಿ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಮಾನ್ಯ ಸದಸ್ಯರು ಈ ವಿಷಯದಲ್ಲಿ ನಮಗೆ ಸಹಕಾರ ಮಾಡದೆ, ನನ್ನ ಮೇಲೆ ಆಕ್ಷೇಪಣೆ ಮಾಡಿದರೆ ಅದು ಸರಿಯಲ್ಲ. ನಾನು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಕನ್‌ಸ್ಯೂಮರ್ಸ್ ಪ್ರೊಟೆಕ್ಷನ್ ಸೆಲ್ ಎಂದು ಮಾಡಿದ್ದೇನೆ. ಇದರಲ್ಲಿ ಮಹಿಳೆಯರನ್ನು ಸೇರಿಸಿಕೊಂಡಿದ್ದೇನೆ. ಮಾನ್ಯ ಸದಸ್ಯಣಿಯರಾದ ಪ್ರಮಿಳಾ ಅವರನ್ನು ಇದರಲ್ಲಿ ಕೋಆಪ್ಟ್ ಮಾಡಿಕೊಳ್ಳಬೇಕು ಎಂದು ಇದ್ದೇನೆ. ಇದರಲ್ಲಿ ಟಿ.ಎ. ಡಿ.ಎ ಏನೂ ಸಿಕ್ಕುವುದಿಲ್ಲ. ಬೇಕಾದರೆ ತಮ್ಮನ್ನು ಫ್ರಂಟ್ ಸೀಟಿನಲ್ಲಿಯೇ ಕೂಡಿಸುವ ವ್ಯವಸ್ಥೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಒಂದು ಅವಕಾಶದಿಂದ ಅಮೇರಿಕಾಕ್ಕೆ ಹೋಗಿದ್ದೆ. ನಾನು ಅಲ್ಲಿ ಹೆಚ್ಚಾಗಿ ಅಧಿಕಾರಿಗಳನ್ನೇ ಭೇಟಿ ಮಾಡಿದ್ದೇನೆ. ಮತ್ತು ಅಲ್ಲಿನ ಅನೇಕ ಅಭಿಪ್ರಾಯಗಳನ್ನು ನಾನು ತಿಳಿದುಕೊಂಡು ಬಂದಿದ್ದೇನೆ. ಅಲ್ಲಿ ಅಧಿಕಾರಿಗಳಿಗೆ ಅಗಾಧವಾದ ಅಧಿಕಾರವನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಅಷ್ಟು ಅಧಿಕಾರವನ್ನು ನಾವು ಅಧಿಕಾರಿಗಳಿಗೆ ಕೊಟ್ಟಿಲ್ಲ. ಅಡಲ್ಟರೇಷನ್ ಮಾಡಿರುವುದನ್ನು ನಾವು ಕೋರ್ಟಿನಲ್ಲಿ ರುಜುವಾತು ಮಾಡಬೇಕು ನಮಗೆ ಸಾಕ್ಷಿ ಹೇಳುವಂಥ ಜನಗಳು ಇಲ್ಲ. ಆದ್ದರಿಂದ ನಾವು ಒಂದೊಂದು ಏರಿಯಾದಲ್ಲಿ ಒಂದೊಂದು ಮಂಡಳಿಯನ್ನು ಮಾಡಿ, ಅಲ್ಲಿರತಕ್ಕ ಅಂಗಡಿಗಳಿಂದ ಸ್ಯಾಂಪಲ್ಸ್ ಕಲೆಕ್ಟ್ ಮಾಡಿ ಏನಾದರೂ ಅಡಲ್ಟರೇಷನ್ ಇದ್ದರೆ, ಅವರ ಮೂಲಕ ಸಾಕ್ಷಿಯನ್ನು ಪಡೆದು ಕೋರ್ಟಿನಲ್ಲಿ ಕೇಸ್ ಹಾಕಬಹುದು. ಇಂಥ ಒಂದು ವ್ಯವಸ್ಥೆ ನಮ್ಮಲ್ಲಿ ಇಲ್ಲದೆ ಇರುವುದರಿಂದ. ನಮ್ಮ ಕಾನೂನು ಇದಕ್ಕೆ ಅನುಗುಣವಾಗಿಲ್ಲದೆ ಇರುವುದರಿಂದ ಸ್ವಲ್ಪ ಇದು ಕಷ್ಟವಾಗಿದೆ. ಆದ್ದರಿಂದ ನಾನು ಒಂದು ಸ್ಟೇಟ್ ಲೆವೆಲ್ ಕಮಿಟಿಯನ್ನು ಇದಕ್ಕಾಗಿ ಮಾಡಿ, ಅದರ ಅಧ್ಯಕ್ಷ, ನಾನೇ ಆಗಿದ್ದೇನೆ. ಆರೋಗ್ಯ ಮಂತ್ರಿಗಳನ್ನು ಇದರಲ್ಲಿ ಸೇರಿಸಿದ್ದೇನೆ. ಮೇಲ್ಮನೆಯ ಸದಸ್ಯಣಿಯರಾದ ಮಂದಣ್ಣ ಅವರನ್ನು ಇದರಲ್ಲಿ ಸೇರಿಸಿದ್ದೇನೆ. ಇವರೆಲ್ಲರ ಸಲಹೆಯನ್ನು ತೆಗೆದುಕೊಂಡು ಪ್ರತಿಯೊಂದು ಜಿಲ್ಲೆ ಹೆಡ್ ಕ್ವಾರ್ಟರ್ಸ್‌ನಲ್ಲಿ ಆಸ್ಪತ್ರೆಯ ಜೊತೆಗೆ ಫುಡ್ ಅಡಲ್ಟರೇಷನ್ ಲ್ಯಾಬೊರೆಟರಿಯನ್ನು ತೆರೆಯುವುದಕ್ಕೆ ಏರ್ಪಾಡು ಮಾಡಿದ್ದೇವೆ. ಇದರಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿ ನಮ್ಮ ಕಂಟ್ರೋಲ್‌ನಲ್ಲಿ ಕೆಲಸ ಮಾಡುವ ಹಾಗೆ ಮಾಡಿದ್ದೇವೆ. ಸಧ್ಯದಲ್ಲಿ ನಮ್ಮ ಕರ್ನಾಟಕದಲ್ಲಿ ಫುಡ್ ಲ್ಯಾಬೊರಟರೀಸ್ ಎರಡು ಮಾತ್ರ ಇವೆ. ಒಂದು ಬೆಂಗಳೂರಿನಲ್ಲಿದೆ, ಇನ್ನೊಂದು ಮೈಸೂರಿನಲ್ಲಿದೆ. ಬೇರೆ ಕಡೆಗಳಲ್ಲಿ ಇದನ್ನು ಓಪನ್ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಈ ವರ್ಷ ಇದನ್ನು ಮಾಡತಕ್ಕ ನಂಬಿಕೆಯನ್ನು ನಾನು ಹೊಂದಿದ್ದೇನೆ. ಇದರ ಬಗ್ಗೆ ಮಾನ್ಯ ಸದಸ್ಯರು ಕಳವಳಪಡಬೇಕಾದ ಅವಶ್ಯಕತೆ ಇಲ್ಲ. ಆದಷ್ಟು ಮಟ್ಟಿಗೆ ಈ ಅಡಲ್ಟರೇಷನ್‌ನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಸೀಮೆಎಣ್ಣೆಯ ವಿಚಾರ, ವಿಚಾರ ತಿಳಿದು, ತಿಳಿದು ಮಾನ್ಯ ಸದಸ್ಯರುಗಳು ನನ್ನ ಮೇಲೆ ಆಕ್ಷೇಪಣೆ ಮಾಡುತ್ತಿದ್ದಾರೆ, ಇದು ಮಹಾ ಪಾಪ. ಮೊನ್ನೆ ಮಾನ್ಯ ಬಹುಗುಣ ಅವರು ಇಲ್ಲಿ ಭಾಷಣ ಮಾಡಿದ್ದಾರೆ. ಅವರು ಸ್ಪಷ್ಟವಾಗಿ ಹೇಳಿದ್ದಾರೆ, ಹಿಂದೆ ಕೊಟ್ಟಷ್ಟು ಆಯಿಲ್ ಇನ್ನು ಮುಂದೆ ಕೊಡುವುದಕ್ಕಾಗುವುದಿಲ್ಲವೆಂದು. ಹಿಂದೆ ಕೊಟ್ಟದ್ದರಲ್ಲಿ ಪ್ರಮಾಣ ಇನ್ನೂ ಕಡಿಮೆಯಾಗುತ್ತದೆನ್ನುವ ಮಾತನ್ನು ಅವರು ಹೇಳಿದ್ದಾರೆ. ನಾಗರೀಕ ಸರಬರಾಜು ಮಂತ್ರಿಗಳು ಇದ್ದುದರಲ್ಲಿ ಇತಿಮಿತಿಯಾಗಿ ಹಂಚಿಕೆ ವ್ಯವಸ್ಥೆ ಮಾಡುವುದು ಒಳ್ಳೆಯದು ಎಂದು ಅವರು ಹೇಳಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ನಾವು ಹೇಗೆ ಮಾಡುವುದು ? ಅವರ ಗತಿ ಹಾಗೆ ಆಗಿರುವಾಗ ಇನ್ನು ನನ್ನ ಗತಿ ಏನು ಸ್ವಾಮಿ ? ನಾವೆಲ್ಲರೂ ದೇವರ ಪ್ರಾರ್ಥನೆ ಮಾಡಿ ಮಂಗಳೂರಿನಲ್ಲಿ ಕ್ರೂಡ್ ಆಯಿಲ್ ಸಾಕಷ್ಟು ಸಿಕ್ಕರೆ, ಅದನ್ನು ಮೊದಲು ಕರ್ನಾಟಕ್ಕೆ ಕೊಡುತ್ತೇನೆಂದು ಹೇಳಿದ್ದಾರೆ. ಅದನ್ನು ನಾವು ಎದುರು ನೋಡೋಣ.

ಇನ್ನು ಸೌದೆಯ ಅಭಾವ.— ಇದನ್ನು ನೆನಸಿಕೊಂಡಾಗ ನನಗಂತೂ ಅಯ್ಯೋ ಎನಿಸುತ್ತದೆ. ಮಾನ್ಯ ಸದಸ್ಯರಾದ ರಾಮದೇವ್ ಅವರು ಹೆಣ ಸುಡುವುದಕ್ಕೂ ಸೌದೆ ಸಿಕ್ಕುವುದಿಲ್ಲವೆಂದು ಹೇಳಿದ್ದಾರೆ, ಹೆಣ ಸುಡುವುದಕ್ಕೆ ಹೋಗಲಿ, ಅನ್ನದ ಗಂಜಿಗಾದರೂ ಸೌದೆ ಬೇಕು. ಸೌದೆಯ ಸ್ಥಿತಿ ಏಕೆ ಹೀಗೆ ಆಯಿತೋ ಗೊತ್ತಿಲ್ಲ. ಅರಣ್ಯ ಇರಬೇಕು, ಎಂದು ಎಲ್ಲರೂ ಹೇಳುತ್ತಾರೆ, ಅದೇ ಸಂದರ್ಭದಲ್ಲಿ ನಮಗೆ ಸೌದೆಬೇಕು ಎಂದೂ ಹೇಳುತ್ತಾರೆ. ಅಕ್ಕಿಯೂ ಖರ್ಚಾಗಬಾರದು, ಮಕ್ಕಳೂ ಬಡವಾಗಬಾರದು ಎಂದರೆ ಹೇಗೆ ? ಅರಣ್ಯ ಚೆನ್ನಾಗಿರಬೇಕು ಎಂದು ಹೇಳುವುದರಲ್ಲಿ ನಾನು ನಿಮ್ಮೊಡನೆ ಸೇರುತ್ತೇನೆ. ಇದನ್ನೂ ಮಾನ್ಯ ಸದಸ್ಯರುಗಳು ಗಮನಿಸಬೇಕು. ಎಸನ್‌ಷಿಯಲ್ ಕಮಾಡಿಟೀಸ್ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಮುಖ್ಯಮಂತ್ರಿಗಳ ಕೈಯಲ್ಲಿಯೂ ಇದರ ಬಗ್ಗೆ ಹೇಳಿಸಿದ್ದೇನೆ. ಅವರೇನಾದರೂ ಒಪ್ಪಿದ್ದರೆ, ಹೆಚ್ಚು ಹೆಚ್ಚು ಸೌದೆಯನ್ನು ತಂದು ಆದಷ್ಟು ಮಟ್ಟಿಗೆ ಸರಿಯಾದ ರೀತಿಯಲ್ಲಿ ಹಂಚುವುದಕ್ಕೆ ಏರ್ಪಾಡು ಮಾಡುತ್ತೇನೆ. ಆದರೆ ಈಗ ಇರುವುದನ್ನು ಎಲ್ಲರೂ ಅವರವರ ಅನುಕೂಲಕ್ಕೆ ತಕ್ಕ ಹಾಗೆ ಹಂಚಿಕೊಳ್ಳಬೇಕು. ಇದೇ ನಮಗೆ ಇರುವ ದೊಡ್ಡ ಸಮಸ್ಯೆ. ಈಗ ಏನಾಗಿದೆ ಎಂದರೆ, ಫ್ಯಾಕ್ಟರೀಸ್ ಅವರಿಗೆ ಸೌದೆ ಬೇಕು, ಬ್ರಿಕ್ ಕಿಲ್ಸ್‌ಗೆ ಸೌದೆ ಬೇಕು, ಟೈಲ್ ಫ್ಯಾಕ್ಟರೀಸ್‌ಗೆ ಸೌದೆ ಬೇಕು, ಹೆಣ ಸುಡುವುದಕ್ಕೆ ಸೌದೆ ಬೇಕು, ಇದರಲ್ಲಿ ಯಾವುದನ್ನು ಬಿಡುವುದು ? ಇವುಗಳಲ್ಲದೆ, ನಮ್ಮ ರಾಜ್ಯದಲ್ಲಿ ಸುಮಾರು ೧೨ ಡಿಸ್ಟಿಲರೀಸ್ ಇವೆ, ಇವುಗಳಿಗೆ ಲಕ್ಷಗಟ್ಟಲೆ ಟನ್ ಸೌದೆ ಬೇಕು. ಪಾಲಿಫೈಬರ್ಸ್

ಫ್ಯಾಕ್ಟರೀಸ್‌ಗೆ ದಾಂಡೇಲಿ ಪೇಪರ್ ಮಿಲ್‌ಗೆ ಬೊಂಬು, ಯುಕಲಿಪ್ಟಸ್ ಮರ ಬೇಕು. ಅವರಿಗೆ ಮರ ಕೊಡದಿದ್ದರೆ. ಅವರು ನಾವು ಫ್ಯಾಕ್ಟರಿಯನ್ನು ನಿಲ್ಲಿಸಬೇಕಾಗುತ್ತದೆಂದು ಹೇಳುತ್ತಾರೆ. ಇದಲ್ಲದೆ ಅವರು ಕಾಡು ಸೌದೆಯನ್ನು ಕೇಳುತ್ತಿದ್ದಾರೆ, ಕಾಡು ಸೌದೆ ನಿಮಗೆ ಉಪಯೋಗವಾಗುವುದಿಲ್ಲವೆಂದರೂ ಸಹ ಅವರು, ಕಾಡು ಸೌದೆಯಲ್ಲಿಯೂ ಸಣ್ಣ ಪ್ರಮಾಣದಲ್ಲಿ ಪಲ್ಪ್ ಇದೆ. ಅದನ್ನೇ ನಾವು ಉಪಯೋಗಮಾಡಿ ಕೊಳ್ಳುತ್ತೇವೆ, ಕೊಡಿ ಎಂದು ಕೇಳುತ್ತಿದ್ದಾರೆ. ಒಂದು ಕಡೆ ಫ್ಯಾಕ್ಟರಿಯವರು ಹುಷಾರ್ ಎಂದು ಹೇಳುತ್ತಾರೆ, ಫ್ಯಾಕ್ಟರಿ ನಿಂತರೆ ಕೆಲಸಗಾರರು ನಮಗೆ ಹುಷಾರ್ ಎಂದು ಹೇಳುತ್ತಾರೆ, ಎಲ್ಲರೂ ನಮಗೆ ಹುಷಾರ್ ಎಂದು ಹೇಳುತ್ತಿದ್ದಾರೆ.

ನಮಗೆ ಈ ರೀತಿ ಹುಷಾರ್ ಕೊಟ್ಟರೆ ನಾವು ಯಾವ ಹುಷಾರಿನಿಂದ ನಡೆಸಬೇಕು? ಆದಕಾರಣ ನನ್ನ ಕಷ್ಟವನ್ನು ತಾವೂ ಸಹ ಹಂಚಿಕೊಳ್ಳಬೇಕು. ಕೂ-ಬಾಬುಲು ಎಂಬ ಜಾತಿಯ ಮರವನ್ನು ಬೆಳೆಸಿದರೆ ಒಂದು ಎಕರೆಯಲ್ಲಿ ಒಂದು ವರ್ಷದಲ್ಲಿ ೯ ಟನ್ ಸೌದೆಯನ್ನು ಪಡೆಯಬಹುದು, ಆದಕಾರಣ ಈ ಬಗ್ಗೆ ಒಂದು ಸ್ಕೀಮನ್ನು ತಯಾರಿಸಿ ಕಳುಹಿಸಿಕೊಡಿ ಎಂದು ಶ್ರೀ ಜಿ.ವಿ.ಕೆ ರಾವ್ ಅವರು ನಮಗೆ ಹೇಳಿದರು ಅದರಂತೆ ನಾವು ಒಂದು ಯೋಜನೆಯನ್ನು ತಯಾರು ಮಾಡಿ ಅಲ್ಲಿಗೆ ಕಳುಹಿಸುವ ಹೊತ್ತಿಗೆ ಅವರು ಅಲ್ಲಿಂದ ರಿಟೈರ್ ಆಗಿ ಪ್ಲಾನಿಂಗ್ ಸೆಕ್ಷನ್‌ಗೆ ಹೋದರು. ನಂತರ ಕೇಂದ್ರದವರು ರೋಡ್ ಅವಿನ್ಯೂ ಮಾಡಿಸಿ, ದುಡ್ಡು ಕೊಡುತ್ತೇವೆಂದು ಹೇಳಿದರು. ಈ ಬಗ್ಗೆ ಸಹ ನಾವು ಒಂದು ಸ್ಕೀಮನ್ನು ತಯಾರು ಮಾಡಿ ಅಲ್ಲಿಗೆ ಕಳುಹಿಸಿದೆವು. ಅದಕ್ಕೆ ಅವರು ಈ ಬಾಬಿಗೆ ಸ್ಪೆಷಲ್‌ಆಗಿ ಹಣ ಕೊಡುವುದಿಲ್ಲ. ಬಡ್ಜೆಟಿನಲ್ಲಿ ಜನರಲ್ ಆಗಿ ಕೊಟ್ಟಿರುವ ಹಣವನ್ನೇ ಇದಕ್ಕೂ ಉಪಯೋಗಿಸಿ ಎಂದು ಹೇಳಿದರು. ಇದು ನಮ್ಮ ದುರಾದೃಷ್ಟ, ಈ ನಮ್ಮ ಕಷ್ಟ ನಿಮಗೂ ಗೊತ್ತಿದೆ. ನೀಲಗಿರಿ ಮರಗಳನ್ನು ದಾಂಡೇಲಿಯಲ್ಲಿರುವ ಕಾರ್ಖಾನೆಯವರಿಗೆ ಕಡಿಮೆ ಬೆಲೆಗೆ ಕೊಡುತ್ತಿರುವುದು ಸರಿಯಲ್ಲವೆಂದು ಹೇಳಿದ್ದಾರೆ. ಈ ಮೊದಲು ಟನ್‌ಗೆ ೨೫ ರೂ. ಪ್ರಕಾರ ಕೊಡಲಾಗುತ್ತಿತ್ತು ನಾನು ಅಧಿಕಾರಕ್ಕೆ ಬಂದಮೇಲೆ ಅದನ್ನು ೭೫ ರೂ.ಗಳಿಗೆ ಹೆಚ್ಚಿಸಿದ್ದೇನೆ. ಇದು ೧೯೭೦ರಲ್ಲಿ ಆದಂಥ ಅಗ್ರಿಮೆಂಟ್. ನಾವು ಆ ಧಾರಣೆಗೆ ಕೊಡಲು ಒಪ್ಪಿಲ್ಲ. ಈ ಹಿಂದೆ ಏನು ಪರಿಸ್ಥಿತಿ ಇತ್ತೋ ಗೊತ್ತಿಲ್ಲ. ಆ ದರಕ್ಕೆ ಒಪ್ಪಿದ್ದರು. ಈ ಹಿಂದೆ ಆದ ಅಗ್ರಿಮೆಂಟನ್ನು ನಾವು ವಜಾ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಈ ಹಿಂದಿನ ಸರ್ಕಾರ ಅದಕ್ಕೆ ರುಜು ಹಾಕಿದೆ ರುಜು ಅವರು ಹಾಕಿದರೂ ಒಂದೇ, ನಾವು ಹಾಕಿದರೂ ಒಂದೇ ಅಗ್ರಿಮೆಂಟ್‌ನಲ್ಲಿ ಹೇಳಿರುವ ಪ್ರಕಾರ ಕೊಡ ಬೇಕಾಗುತ್ತದೆ. ಇಲ್ಲದಿದ್ದರೆ ಅವರು ಕೋರ್ಟಿಗೆ ಹೋಗುತ್ತಾರೆ. ಆದಕಾರಣ ಈ ಬಗ್ಗೆ ವಾದ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಇನ್ನು ಮಾನ್ಯ ಇಬ್ರಾಹಿಂ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ನನ್ನ ದುರಾದೃಷ್ಟ ಅವರು ಈಗ ಸಭೆಯಲ್ಲಿ ಇಲ್ಲ. ಕೋಲಾರಕ್ಕೆ ಮುಸಲ್ಮಾನರನ್ನೇ ನೇಮಕ ಮಾಡಲು ಕಾರಣವೇನೆಂದು ಅವರು ಕೇಳಿದರು. ಈ ಜಾತಿಯವರು ಕೋಲಾರವೇ ಬೇಕೆಂದು ಕೇಳುತ್ತಾರೆ. ಅಲ್ಲಿ ಒಂದು ಪ್ರಮೋಷನ್ ವೇಕೆನ್ಸಿ ಬರುತ್ತಿದೆ ಅದನ್ನು ತಮಗೇ ಕೊಡಬೇಕೆಂದು ಒಬ್ಬರು ಸಾಹೇಬರು ಅರ್ಜಿ ಹಾಕಿದ್ದಾರೆ. ಇದರ ಮರ್ಮವೇನೆಂಬುದು ನನಗೆ ಗೊತ್ತಿಲ್ಲ. ಶಾಸಕರಾದ ಶ್ರೀಮತಿ ರೇಣುಕಾರಾಜೇಂದ್ರನ ಅವರೂ ಸಹ ಆ ಭಾಗಕ್ಕೆ ಸಾಹೇಬರನ್ನೇ ಹಾಕಬೇಕೆಂದು ಪ್ರೆಸ್ ಮಾಡುತ್ತಾರೆ ಖಂಡಿತವಾಗಿಯೂ ನನಗೆ ಇದರಲ್ಲಿ ಕಮ್ಯು ನಲ್ ಫೀಲಿಂಗ್ಸ್ ಏನೂ ಇಲ್ಲ. ಮತ್ತು ನಾನು ಜಾತಿಯ ಆಧಾರದ ಮೇಲೆ ಯಾವ ಒಂದು ತೀರ್ಮಾನ ವನ್ನೂ ತೆಗೆದುಕೊಳ್ಳುತ್ತಿಲ್ಲ. ಅವರೇ ಬಂದು ಕೇಳಿಕೊಳ್ಳುತ್ತಾರೆ. ಕನ್ಸರ್‌ವೇಟರ್ ಒಬ್ಬರನ್ನು ಸಸ್ಪೆಂಡ್ ಮಾಡಿದ್ದು ಸರಿಯಲ್ಲವೆಂದು ಅವರು ಹೇಳಿದರು. ಇವರು ಐ.ಎಫ್.ಎಸ್. ಕೇಡರ್‌ಗೆ ಸೇರಿದವರು. ಆದ ಕಾರಣ ಕೇಂದ್ರ ಸರ್ಕಾರದ ಒಪ್ಪಿಗೆಯ ಮೇರೆಗೆ ಅವರನ್ನು ಸಸ್ಪೆಂಡ್ ಮಾಡಲಾಯಿತು ನಂತರ ಅವರು ಕೇಂದ್ರ ಸರ್ಕಾರಕ್ಕೆ ಅಪೀಲು ಹೋದರು ಏಕೆಂದರೆ ಎಲ್ಲ ಕಂಟ್ರೋಲ್ ಅವರಿಗೇ ಸೇರಿದ್ದು. ಅನಂತರ ಕೇಂದ್ರಸರ್ಕಾರದ ಆದೇಶದ ಮೇಲೆ ಅವರ ಸಸ್ಪೆಂಡ್ ಆರ್ಡರನ್ನು ವಜಾ ಮಾಡಲಾಯಿತು, ಆದಕಾರಣ ಇದರ ಬಗ್ಗೆ ನಮ್ಮನ್ನು ಆಕ್ಷೇಪಣೆ ಮಾಡುವುದು ಸಾಧುವಲ್ಲವೆಂದು ಅವರಿಗೆ ತಿಳಿಸುತ್ತೇನೆ. ಈ ವಿಚಾರ ದಲ್ಲಿ ಮಾನ್ಯ ಇಬ್ರಾಹಿಂ ಅವರು ನನ್ನನ್ನು ದೂಷಣೆ ಮಾಡುವುದು ಖಂಡಿತ ಸರಿಯಲ್ಲ. ನನ್ನ ಮನಸ್ಸು ಎಂಥದ್ದು ಎಂಬುದು ಅವರಿಗೆ ಗೊತ್ತಿದೆ. ಏಕೆಂದರೆ ಬಹಳ ದಿವಸಗಳ ಕಾಲ ನಾನು ಮತ್ತು ಅವರು ಒಟ್ಟಿಗೆ ಓಡಾಡಿಕೊಂಡಿದ್ದವರು. ಅವರನ್ನು ನಾನು ಒಂದು ವಿಚಾರದಲ್ಲಿ ಇಷ್ಟಪಡುತ್ತೇನೆ, ಏಕೆಂದರೆ ಅವರಗೆ ಬಸವಣ್ಣನವರ ಪದಗಳನ್ನು ಜಾಸ್ತಿ ಹೇಳುತ್ತಾರೆ.

ಇನ್ನು ಮಾನ್ಯ ವಿರೋಧಪಕ್ಷದ ನಾಯಕರು ಆಹಾರಪದಾರ್ಥಗಳ ಬಗ್ಗೆ ಹೇಳಿದ್ದಾರೆ ಮತ್ತು ಇದು ಕಾರ್ಪೊರೇಷನ್ ಆಡಳಿತ ವಿಚಾರದಲ್ಲಿ ಸಪ ಹೇಳಿದ್ದಾರೆ, ಇದರ ವ್ಯವಹಾರಕ್ಕೆ ಸಂಬಂಧಪಟ್ಟ ಆಡಿಟ್ ವರದಿಗಳು ಪ್ರಿಂಟ್ ಆಗುತ್ತಿವೆ. ಪ್ರಿಂಟ್ ಆದನಂತರ ಅದನ್ನು ಎಲ್ಲರಿಗೂ ಹಂಚುವವ್ಯವಸ್ಥೆ ಮಾಡುತ್ತೇನೆ ಆಗ ನಿಜ ಸಂಗತಿ ಏನೆಂಬುದು ತಿಳಿಯುತ್ತದೆ.

ಇನ್ನು ಮಾನ್ಯ ಗಂಗಾಧರ್ ಅವರು ಆನೆಗಳು ಸತ್ತ ವಿಚಾರವನ್ನು ಹೇಳಿದರು. ಈ ಬಗ್ಗೆ ಸರ್ಕಾರಕ್ಕೆ ಎಷ್ಟು ಲುಕ್ಸಾನಾಯಿತೆಂದು ಕೇಳಿದರು. ನಾವು ಮೊದಲೇ ಅವರಿಂದ ಅಡ್ವಾನ್ಸ್ ಹಣವನ್ನು ಲಕ್ಷ ಚಿಲ್ಲರೆ ವರೆಗೆ ಕಟ್ಟಿಸಿಕೊಂಡಿದ್ದೆವು. ಈಗ ಅವರ ಹಣ ನಮ್ಮ ಕಡೆಯೇ ಇದೆ, ಇದರ ಜೊತೆಗೆ ಟಸ್ಕ್ ಮಾರಾಟ ಇನ್ನೂ ಆಗಿಲ್ಲ. ಅದನ್ನು ಹಾಗೆಯೇ ಇಟ್ಟಿದ್ದೇವೆ. ಆನೆಗಳು ಸತ್ತ ಬಗ್ಗೆ ನಾವು ಕೇಸ್ ಸಹ ಹಾಕಿದ್ದೇವೆ. ಆ ಕೇಸ್ ಯಾವ ರೀತಿ ಇತ್ಯರ್ಥವಾಗುತ್ತದೆಂಬುದನ್ನು ನೋಡಬೇಕಾಗಿದೆ.

ಮಾನ್ಯ ಸದಸ್ಯರು ನೀಲಗಿರಿ ಮರಗಳನ್ನು ಎಲ್ಲ ಕಡೆಗಳಲ್ಲಿಯು ಬೆಳೆಸಲಾಗುತ್ತಿದೆ ಎಂಬುದಾಗಿ ಹೇಳಿದರು. ೪೦ ಇಂಚ್ ಮೇಲೆ ಮಳೆ ಬರುವ ಕಡೆಗಳಲ್ಲಿ ಇದನ್ನು ನಾವು ಬೆಳೆಸುತ್ತಿಲ್ಲ. ಒಂದು ವೇಳೆ ಯಾರಾದರೂ ಅಂತಹ ಕಡೆಗಳಲ್ಲಿ ಇದನ್ನು ಬೆಳೆಸಿದ್ದರೆ ಅವರ ಮೇಲೆ ಕ್ರಮ ಕೈಕೊಳ್ಳುತೇವೆ. ಆದ್ದರಿಂದ ಮಾನ್ಯ ಸದಸ್ಯರಿಗೇನಾದರೂ ತಿಳಿದಿದ್ದರೆ, ಅಂತಹ ಪ್ರಸಂಗಗಳನ್ನು ನನ್ನ ಗಮನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ರಾಮ್‌ದೇವ್ ಅವರು ತಮಿಳುನಾಡಿನ ತರಹ ಇಲ್ಲಿಯೂ ಶಾ ಸಕರನ್ನು ಪ್ರವಾಸ ಕರೆದುಕೊಂಡು ಹೋಗುವ ಏರ್ಪಾಡು ಮಾಡಿದ್ದಾರೆಂದು ಹೇಳಿದರು. ನಾನು ಕಳೆದ ಶಾಸನ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಆದರೆ ಯಾರೂ ನನ್ನ ಜೊತೆಯಲ್ಲಿ ಬರಲಿಲ್ಲ. ಈಗ ಅಸೆಂಬ್ಲಿ ಪ್ರಾರಂಭ ವಾಗಿದೆ. ನನ್ನ ಜೊತೆಯಲ್ಲಿ ಶಾಸಕರು ಬಂದರೆ ನಾನು ಸಂತೋಷದಿಂದ ಕರೆದುಕೊಂಡು ಹೋಗಿ ಎಲ್ಲ ವನ್ನೂ ತೋರಿಸುತ್ತೇನೆ. ಶಾಸಕರಿಗೆ ಕಾಡಿನಲ್ಲಿರುವ ವನಸಂಪತ್ತನ್ನು ತೋರಿಸದಿರುವುದು ನನ್ನ ತಪ್ಪು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಜನತಾ ಪ್ರತಿನಿಧಿಗಳಾದ ತಮಗೆ ಎಲ್ಲವನ್ನೂ ತೋರಿಸಿದರೆ ತಾವುಗಳು ಎಷ್ಟೋ ಸಮಾಧಾನ ಪಡುತ್ತೀರಿ. ನಾನು ಪ್ರವಾಸ ಹೋಗುವ ಕಾಲಕ್ಕೆ ತಾವುಗಳು ನನ್ನ ಜೊತೆಯಲ್ಲಿ ಬಂದರೆ ಕಾಡಿನಲ್ಲಿರುವ ಟೀಕ್ ಪ್ಲಾನ್‌ಟೇಷನ್ ಮತ್ತಿ ಪ್ಲಾನ್‌ಟೇಷನ್, ಸಾಫ್ಟ್ ವುಡ್ ಪ್ಲಾನ್‌ಟೇಷನ್ ಮುಂತಾದ ಬೆಳೆಗಳನ್ನು ತಮಗೆ ಪ್ರತ್ಯಕ್ಷವಾಗಿ ತೋರಿಸಿದರೆ, ಆಗ ಇಲ್ಲಿ ನೀವುಗಳು ಗಲಾಟೆ ಮಾಡುವುದು ಕಡಿಮೆಯಾಗುತ್ತದೆ. ೩ ಗಂಟೆಗಳೊಳಗೆ ನನ್ನ ಡಿಮ್ಯಾಂಡ್ಸ್ ಎಲ್ಲಾ ಪಾಸಾಗಿ ಬಿಡುತ್ತವೆ. ಆದಕಾರಣ ಇನ್ನು ಮೇಲೆ ಆದಷ್ಟೂ ತೋರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಇನ್ನು ಹಿರಿಯ ಶಾಸಕರೊಬ್ಬರು ಮರಗಳನ್ನು ಲೆಕ್ಕವಿಲ್ಲದಂತೆ ಕತ್ತರಿಸುವುದು ಸರಿಯಲ್ಲವೆಂದು ಹೇಳಿದರು ಈ ವಿಚಾರದಲ್ಲಿ ೫೦ ವರ್ಷಗಳ ಹಿಂದೆಯೇ ತಜ್ಞರು ಸೈಂಟಿಫಿಕ್ ಫೀಲಿಂಗ್ ಬಗ್ಗೆ ಒಂದು ಶಾಸ್ತ್ರೀಯುವಾದಂಥ ಗ್ರಂಥವನ್ನು ಬರೆದಿದ್ದಾರೆ. ಇದನ್ನು ಇಂಗ್ಲೇಂಡ್‌ನವರು ಸಹ ಒಪ್ಪಿಕೊಂಡಿದ್ದಾರೆ. ಇ ದರ ಬಗ್ಗೆ ಹೇಳಬೇಕೆಂದರೆ, ಒಂದು ಸಾವಿರ ಎಕರೆ ಪ್ರದೇಶದಲ್ಲಿ ಒಂದು ಕಾರ್ಖಾನೆಯುವರಿಗೆ ಮರ ಗಳನ್ನು ಕಡಿಯಲು ಅಧಿಕಾರ ಕೊಟ್ಟರೆ, ಅವರು ಒಂದು ಎಕರೆ ಪ್ರದೇಶದಲ್ಲಿ ನಾಲ್ಕು ಮರಗಳಂತೆ ಕಡಿಯುತ್ತಾ ಬಂದರೆ. ಮುವತ್ತು ವರ್ಷಗಳ ನಂತರ ಅವರು ಮೊದಲು ಮರಗಳನ್ನು ಕಡಿದ ಜಾಗಕ್ಕೆ ಬರುತ್ತಾರೆ. ಇದು ಕೇವಲ ೩೦ ವರ್ಷಗಳಿಗೆ ಸಮಿತವಾಗಿಲ್ಲ ೪೦ ವರ್ಷಗಳು, ೫೦ ವರ್ಷಗಳಿಗೂ ಸಂಬಂಧ ಪಟ್ಟಂತೆ ಶಾಸ್ತ್ರೀಯುವಾಗಿ ಮರಗಳನ್ನು ಕತ್ತರಿಸುವ ವಿಚಾರದಲ್ಲಿ ಒಂದು ಪದ್ಧತಿಯನ್ನು ಅನುಸರಿಸಿ ಕೊಂಡು ಬರಲಾಗಿದೆ. ಈ ರೀತಿ ಮಾಡುವುದರಿಂದ ಮೊದಲು ಮರಗಳನ್ನು ಕಡಿದ ಜಾಗದಲ್ಲಿ ಮತ್ತೆ ಮರಗಳು ಬೆಳೆದಿರುತ್ತವೆ. ಈ ಕ್ಲಿಯರ್ ಫೆಲಿಂಗ್ ಸಿಸ್ಟಂಮ್ ಏನಿದೆ. ಇದು ಬೇಡವೆಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಬೆಂಕಿ ಬಿದ್ದು ಇಲ್ಲವೇ ಭೂಮಿ ಫಲವತ್ತು ಇಲ್ಲದೆ ಕಾಡೆಲ್ಲಾ ಹಾಳಾಗಿ ಬಯಲಾಗುವುದುಂಟು ಅಂತಹ ಸಂದರ್ಭಗಳಲ್ಲಿ ನಾವು ೧೦ ಇಂಚಿನಿಂದ ಹಿಡಿದ ೧೮ ಇಂಚಿನ ಅಂತರದಲ್ಲಿ ಬೆಂಕಿಯನ್ನು ಹಾಕಿ ಆ ಜಾಗದಲ್ಲಿರುವ ಸಣ್ಣ ಸಣ್ಣ ಮರಗಳನ್ನೆಲ್ಲಾ ಸುಟ್ಟು ಹಾಕಿ. ಅಲ್ಲಿ ಯಾವ ಯಾವ ಜಾತಿಯ ಮರಗಳನ್ನು ಹಾಕಿದರೆ ಒಳ್ಳೆಯದೆಂದು ನೋಡಿ ಅದರ ಪ್ರಕಾರ ಗಿಡಗಳನ್ನು ನೆಟ್ಟು ಬೆಳೆಸುತ್ತೇವೆ, ಈ ರೀತಿ ಗಿಡಗಳನ್ನು ಬೆಳೆಸುವ ಪದ್ಧತಿಯಲ್ಲಿ ನಾವು ಯಾವತ್ತೂ ಫೇಲ್ ಆಗಿಲ್ಲ. ಡಗ ಳನ್ನ ನೆಟ್ಟ ಮೇಲೆ ಒಂದು ವರ್ಷದ ನಂತರ ಮತ್ತು ಎರಡು ವರ್ಷಗಳ ನಂತರ ಅದರ ಬಗ್ಗೆ ವರದಿ ಗಿಯನ್ನು ತರಿಸಿಕೊಂಡು ನೋಡಂತ್ತೇವೆ. ಮಧ್ಯೆ ಮಧ್ಯೆ ಏನಾದರೂ ಗಿಡಗಳು ಹಾಳಾಗಿ ಹೋಗಿದ್ದರೆ ಅಲ್ಲಿ

ಮತ್ತೆ ಗಿಡಗಳನ್ನು ನೆಡಿಸಿಬೆಳಿಸುವುದಕ್ಕೆಏರ್ಪಾಡು ಮಾಡಿದ್ದೇವೆ. ಆದಕಾರಣ ಮಾನ್ಯ ಸದಸ್ಯರು ಕ್ಲಿಯರ್ ಫೆಲಿಂಗ್ ಸಿಸ್ಟಮ್ ಬೇಡ ಎಂದು ಹೇಳುವುದು ಸರಿಯಲ್ಲ. ಈ ಪದ್ಧತಿ ಸರಿ ಎಂದು ಅನೇಕ ತಜ್ಞರು ಒಪ್ಪಿದ್ದಾರೆ. ತಜ್ಞರಾದಂಥ ಶರ್ಮಾಜಿ ಅವರು ಸಹ ಒಪ್ಪಿದ್ದಾರೆ. ಇವರನ್ನು ಪ್ರಪಂಚದ ನಾನಾ ಕಡೆಯ ದೇಶದವರು ಕರೆಸಿಕೊಂಡು ಇದರ ಬಗ್ಗೆ ಚರ್ಚೆ ಮಾಡುತ್ತಾರೆ. ಈ ಎಲ್ಲಾ ಕಾರಣಗಳಿಂದಲೇ ನಾನು Clear felling and developing forest is most useful ಎಂದು ಹೇಳಿದ್ದು ಕೆಲವು ಮಾನ್ಯ ಸದಸ್ಯರು ಗ್ಯಾಪ್ ಫೆಲಿಂಗ್ ಸಿಸ್ಟಮ್ ಒಳ್ಳೆಯದೆಂದು ಹೇಳಿದ್ದಾರೆ. ಇದನ್ನೂ ಕೂಡ ನಾವು ಅನುಸರಿಸುತ್ತಿದ್ದೇವೆ ಈಗ Clear felling and developing forest ಬಗ್ಗೆ ಒಂದುಪುಸ್ತಕವನ್ನು ಬರೆಸಿದ್ದೇನೆ ಅದನ್ನು ಪ್ರಿಂಟ್‌ಗೆ ಕೊಟ್ಟಿದ್ದೇನೆ. ಅದು ಪ್ರಿಂಟ್ ಆದಮೇಲೆ ತಮಗೆಲ್ಲಾ ಹಂಚುತ್ತೇನೆ. ಅದರಲ್ಲಿ ಎಲ್ಲ ವಿವರಗಳಿವೆ ಮರಗಳನ್ನು ಬೆಳೆಸುವ ವಿಚಾರದಲ್ಲಿ Perspective plan ಎಂದು ಮಾಡಿದ್ದೇವೆ. ಈ ಪುಸ್ತಕವನ್ನು ತಾವು ಓದಿದ ಮೇಲೆ ತಮಗೆ ಅನೇಕ ವಿಚಾರಗಳು ತಿಳಿದು ಬರುತ್ತವೆ ಮತ್ತು ಈಗ ತಾವು ಅನ್ಯಾಯವಾಗಿ ಮರಗಳನ್ನು ಕಡಿಯಲಾಗುತ್ತಿದೆ ಎಂದು ಹೇಳುತ್ತಿದ್ದೀರಿ, ಆ ಮಾತನ್ನು ಮತ್ತೆ ತಾವುಗಳು ಯಾರೂ ಹೇಳುವುದಿಲ್ಲ.

ಇನ್ನು ಮಾನ್ಯ ಫಾಡಿ ಸಾಹೇಬರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಸೌದೆಯನ್ನು ಟನ್ ಒಂದಕ್ಕೆ ೪೯ ರೂ.ಗಳ ಪ್ರಕಾರ ರಿಯಾಯಿತಿ ದರದಲ್ಲಿ ಕೊಡಲಾಗುತ್ತಿದೆ. ಎಂದು ಅವರು ಹೇಳಿದರು. ಅವರು ಹೇಳಿದ ಮೇಲೆ ನನಗೆ ಈ ವಿಚಾರ ತಿಳಿದಿದ್ದು ಬೇರೆ ಕಡೆಗಳಲ್ಲಿ ಟನ್ ಸೌದೆಗೆ ೧೨೦ ರೂಪಾಯಿಗಳಿಂದ ಹಿಡಿದು ೧೫೦ ರೂಪಾಯಿಗಳವರೆಗೆ ಇರುವಾಗ ಆ ಭಾಗದಲ್ಲಿ ಅಷ್ಟೊಂದು ಕಡಿಮೆ ದರದಲ್ಲಿ ಸೌದೆಯನ್ನು ಒದಗಿಸಿದರೆ ಸರ್ಕಾರದವರೇ ತಾರತಮ್ಯ ಮಾಡಿದಂತಾಗುತ್ತದೆ. ಈಗ ಟನ್ ಸೌದೆಗೆ ೪೯ ರೂಪಾಯಿಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಎಲ್ಲಿಯೂ ಕೊಡುತ್ತಿಲ್ಲ. ಆದರೆ ಅವರಿಗೆ ಮಾತ್ರ ಕೊಡುತ್ತಿದ್ದೇವೆ. ಆದರೂ ಸಹಕಾರ ಅವರ ಹೃದಯದಲ್ಲಿರುವಷ್ಟು ಬೇರೆ ಯಾರ ಹೃದಯದಲ್ಲಿಯೂ ಇಲ್ಲ. ಇದು ನನ್ನ ದುರಾದೃಷ್ಟ. ಆದರಿಂದ ನಾನು ಇದನ್ನು ನಾಳೆಯಿಂದಲೇ ವಜಾಮಾಡಿಸಲು ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿ ಈಗ ಅಲ್ಲಿರುವ ದರವನ್ನು ಏನಾದರೂ ಮಾಡಿ ಸ್ವಲ್ಪಮಟ್ಟಿಗೆ ಹೆಚ್ಚಿಸುವುದಕ್ಕೆ ನಾನು ಸರ್ವ ಪ್ರಯತ್ನ ಮಾಡುತ್ತೇನೆಂದು ಅವರಿಗೆ ಭರವಸೆ ಕೊಡುತ್ತೇನೆ. ನಮ್ಮಲ್ಲಿ ರಬ್ಬರ್ ಪ್ಲಾಂಟೇಷನ್ ಇದೆ, ಕಾಫಿ ಪ್ಲಾಂಟೇಷನ್ ಇದೆ. ಬೇರೆಯವರು ಮಾಡಿರತಕ್ಕ ಕಾಫಿ ಪ್ಲಾಂಟೇಷನ್‌ನ್ನು ನೋಡಿ ನನಗೆ ನಾಚಿಕೆಯಾಗುತ್ತದೆ. ಇದರ ಬಗ್ಗೆ ನಾವು ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ ಗೇರು ಬೀಜದ ಪ್ಲಾಂಟೇಷನ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದರು. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ವಿಶ್ವ ಬ್ಯಾಂಕಿನ ಹಣಸಹಾಯದಿಂದ ಅನೇಕ ಕಡೆ ಅರಣ್ಯವನ್ನು ಬೆಳಿಸತಕ್ಕ ಪ್ರಯತ್ನ ನಡೆದಿದೆ. ನಾವು ಮೈಸೂರು ಪೇಪರ್ಸ್ ಮಿಲಿಗೆ ೭೫,೦೦೦ ಎಕರೆ ಜಾಗವನ್ನು ಬಿಟ್ಟುಕೊಟ್ಟದ್ದೇವೆ. ಅವರು ಇದರಲ್ಲಿ ಬೊಂಬು ಹಾಗೂ ನೀಲಗಿರಿ ಮರಗಳನ್ನು ಪೇಪರ್ ಮಿಲ್‌ಗೆ ಬೇಕಾದ ಕಚ್ಚಾ ಮಾಲನ್ನು ಬೆಳೆಯತಕ್ಕ ಉದ್ದೇಶಕ್ಕೋಸ್ಕರ ಹತ್ತು ವರ್ಷಗಳ ಕೆಳಗೆ ಬಿಟ್ಟುಕೊಟ್ಟದ್ದೇವೆ. ಇದರಿಂದ ಅವರು ಸರ್ಕಾರಕ್ಕೆ ೭೦ ಪರ್ಸೆಂಟ್ ರಾಯಲ್ಟಿಯನ್ನು ಸರ್ಕಾರಕ್ಕೆ ಕೊಡುತ್ತಾರೆ. ಮತ್ತೆ ೪೦,೦೦೦ ಎಕರೆ ಜಮೀನನ್ನು ಇವರಿಗೆ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅವರು ಪ್ರಪಂಚ ಬ್ಯಾಂಕಿನಿಂದ ೧೦೦ ಕೋಟಿ ರೂಪಾಯಿಗಳ ಸಾಲ ತಂದು ಇದರಲ್ಲಿ ಉಪಯೋಗಿಸುತ್ತಾರೆ. ಹಾಗೇ ನ್ಯಾಷನಲ್ ಪೇಪರ್ ಮಿಲ್ಸ್‌ಗೆ ೪೦,೦೦೦ ಎಕರೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ವೆಸ್ಟ್ ಎಂಡ್ ಪೇಪರ್ ಮಿಲ್‌ಗೆ ಜಾಸ್ತಿ ಫಾರಸ್ಟನ್ನು ಕೊಟ್ಟಿದೆ ಇದನ್ನು ಕಡಿಮೆ ಮಾಡಿಕೊಳ್ಳಿ ಎಂದು ನಾವು ಹೇಳಿದಾಗ ಅವರು ಹೈಕೋರ್ಟಿಗೆ ಹೋಗಿದ್ದಾರೆ ಸ್ಟೇ ಕೂಡ ಬಂದಿದೆ. ಸ್ಟೇಯನ್ನು ವಾಪಸ್ಸು ತೆಗೆದುಕೊಂಡಿಲ್ಲ. ಕಾಂಪ್ರಮೈಸೂ ಮಾಡಿಕೊಂಡಿಲ್ಲ ಡಿಸ್ಕಷನ್ ಕೂಡ ಆಗಿಲ್ಲ ಅವರಿಗೂ ಕೂಡ ೩೦,೦೦೦ ಎಕರೆ ಕೊಡಬೇಕು ಎಂಬ ಉದ್ದೇಶ ಇತ್ತು. ಹರಿಹರ ಫಾಲಿಫೈಬರ್ ಫ್ಯಾಕ್ಟರಿಗೂ ಕೊಡಬಂದು ಎಕರೆಗೆ ಎಷ್ಟು ಹಣ ಕೊಡಬೇಕೋ ಅಷ್ಟು ಹಣವನ್ನು ಕೊಟ್ಟು ಅದರ ಮೇಲೆ ಏನಾದರೂಬಡ್ಡಿ ಕೊಡಿ ಎಂದು ಕೇಳುತ್ತಿದ್ದೇವೆ.ಅದುಇನ್ನೂ ತೀರ್ಮಾನ ಆಗಿಲ್ಲ. ಆದು ತೀರ್ಮಾನ ಆದ ತಕ್ಷಣನಾವು ಆ ಜಾಗದಲ್ಲಿ ರಾಮೆಟೀರಿಯಲ್ಸ್‌ನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

೬-೦೦ ಪಿ.ಎಂ.

ಮಾನ್ಯ ಸದಸ್ಯರೊಬ್ಬರು ಬೊಂಬು ಸರಬರಾಜು ಮಾಡುವ ಬಗ್ಗೆ ಮಾತನಾಡಿದರು ಧಾರವಾಡ ಜಿಲ್ಲೆಯಲ್ಲಿ ಹಾಗೂ ಬೇರೆ ಕಡೆಗಳಲ್ಲಿ ನಾವು ಬಿದಿರಿನ ಕೆಲಸಗಾರರಿಗೆ ಬೊಂಬುಗಳನ್ನು ಕೊಡುತ್ತಾ ಬಂದಿದ್ದೇವೆ. ಶ್ರೀಮಾನ್ ದಿವಾಕರ್ ಅವರು ಹೇಳಿದರು ಬಡವರಿಗೆ ಸುಲಭ ದರದಲ್ಲಿ ಸಾಕಷ್ಟು ಸಮಯಕ್ಕೆ ಸರಿಯಾಗಿ ಬೊಂಬುಗಳು ಸಿಕ್ಕುವಹಾಗೆ ಮಾಡಬೇಕೆಂದು ಹೇಳಿದರು ಹಾಗೆ ಹೇಳುವುದಕ್ಕಾಗುವುದಿಲ್ಲ. ನಾವು ಸಾಧ್ಯವಾದಷ್ಟು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಜನಗಳನ್ನು ಬಿದಿರು ತೆಗೆದುಕೊಳ್ಳಲು ಕಾಡಿನ ಒಳಕ್ಕೆ ಬಿಟ್ಟರೆ ಓಂಟೆಯನ್ನು ಡೇರೆಯಲ್ಲಿ ಬಿಟ್ಟಹಾಗೆ ಆಗುತ್ತದೆ. ಬಿಟ್ಟರೂ ಕಷ್ಟ ಬಿಡದಿದ್ದರೂ ಕಷ್ಟ ಇದೆ. ಆದ್ದರಿಂದ ಈ ಬಗ್ಗೆ ಏನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ ತಲೆಯಮೇಲೆ ಸೌದೆಯ ಹೊರೆಯನ್ನು ತರುವುದಕ್ಕೆ ಏನೂ ಅಭ್ಯಂತರವಿಲ್ಲ. ಆ ರೀತಿ ಅವರು ತರುವಾಗ ತೊಂದರೆ ಕೊಟ್ಟಂತಹ ಸಂದರ್ಭದಲ್ಲಿ ಆ ಅಧಿಕಾರಿಗಳಿಗೆ ನಾವು ಶಿಕ್ಷೆಯನ್ನೂ ಸಹ ಕೊಟ್ಟಿದ್ದೇವೆ. ಗಾಡಿಗಳಲ್ಲಿ ಸೌದೆಯನ್ನು ಕಾಡಿನಿಂದ ತರುವಾಗ ಅದಕ್ಕೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನು ಕೊಟ್ಟು ತೆಗೆದುಕೊಂಡು ಹೋಗುತ್ತಿದ್ದಾರೆ. ಟೊಬ್ಯಾಕೋ ಕಂಪನಿಯವರು ಒಂದೂವರೆ ಲಕ್ಷಟನ್ ಸೌದೆಯನ್ನು ಕೊಡಿ ಎಂದು ಕೇಳುತ್ತಿದ್ದಾರೆ ಇನ್ನು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟೈಲ್ಸ್ ಫ್ಯಾಕ್ಟರಿ ಇದೆ. ಒಂದೊಂದರಲ್ಲಿಒಂದೊಂದು ಅಸೋಷಿಯೇಷನ್‌ಗಳು ಇವೆ. ಅವರೂ ಕೂಡ ಇನ್ನೂ ಜಾಸ್ತಿ ಬೇಕು ಎಂದು ಕೇಳುತ್ತಿದ್ದಾರೆ. ಅದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಆದ್ದರಿಂದ ನಮ್ಮ ಕಾರ್ಯಕ್ರಮದಲ್ಲಿ ಯಾವ ದೋಷವೂ ಇಲ್ಲ. ಕಾಡನ್ನು ಆದಷ್ಟು ಸುಧಾರಿಸತಕ್ಕವ್ಯವಸ್ಥೆ ಇದೆ. ವಿತರಣೆಯನ್ನೂಕೂಡ ಸರಿಯಾಗಿ ಮಾಡುತ್ತಿದ್ದೇವೆ ವ್ಯವಸ್ಥಿತವಾಗಿ ಒಂದು ವರ್ಷ ಮತ್ತು ಎರಡು ವರ್ಷಗಳ ಪ್ಲಾಂಟೇಷನ್‌ಗಳನ್ನು ಬೆಳೆಸಿದ್ದೇವೆ. ಅವೆಲ್ಲಾ ಕೈಗೆ ಬಂದರೆ ಸ್ವಲ್ಪಮಟ್ಟಿಗೆ ಸಮಸ್ಯೆ ಸುಧಾರಿಸಬಹುದು. ಶ್ರೀಮಾನ್ ರಾಮ್‌ದೇವ್ ಅವರು ಹೇಳಿದಹಾಗೆ ಸೀಮೆಎಣ್ಣೆ ಹಾಗೂ ಸೌದೆಯನ್ನು ಅಗತ್ಯವಸ್ತುಗಳು ಎಂದು ಪರಿಗಣಿಸಬೇಕು. ಎಂದು ಹೇಳಿದರು ಆ ರೀತಿ ಮಾಡಿದರೆ ಆದರಬಂದು ಪರಿಸ್ಥಿತಿ ಸುಧಾರಿಸುತ್ತದೆ ಎಂದು ಹೇಳಿದರು, ಅದರ ಬಗ್ಗೆ ನಾನೂ ಕೂಡ ಪ್ರಯತ್ನ ಮಾಡುತ್ತೇನೆ ಆದರೆ ಕೇಂದ್ರ ಸರ್ಕಾರದವರು ಏನು ಮಾಡುತ್ತಾರೋ ಗೊತ್ತಿಲ್ಲ. ನಾನು ತಮಗೆ ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಶ್ರೀ ಮಾನ್ ಮಾದಯ್ಯನವರು ನಾನು ಮಾಡಿರತಕ್ಕ ಕೆಲಸಗಳ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ನಾನು ಅವರಿಗೆ ಅಭಾರಿಯಾಗಿದ್ದೇನೆ. ನಾನು ಒಳ್ಳೆಯ ಕೆಲಸಗಳನ್ನು ಮಾಡಿದ್ದಕ್ಕಾಗಿ ನನ್ನ ಬಗ್ಗೆ ಅವರು ಶ್ಲಾಘನೀಯ ಮಾತುಗಳನ್ನು ಆಡಿದ್ದಾರೆ. ಅದಕ್ಕಾಗಿ ಅವರು ನಾನು ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅವರು ಇನ್ನೊಂದು ವಿಷಯವನ್ನು ಹೇಳಿದ್ದಾರೆ ಅದು ಏನೆಂದರೆ ಬಡವರು ಮನೆಗಳನ್ನು ಕಟ್ಟಿಕೊಳ್ಳಬೇಕಾದರೆ ಅವರಿಗೆ ಬೊಂಬು, ಮರಗಳು ಇತ್ಯಾದಿಗಳನ್ನು ಒದಗಿಸಬೇಕೆಂದು ಹೇಳಿದರು. ಇದರ ಬಗ್ಗೆ ಏನಾದರೂ ಒಂದು ರೀತಿಯಲ್ಲಿ ಗೊತ್ತಾದ ಬೆಲೆಯಲ್ಲಿ ಇವುಗಳನ್ನು ಕೊಡುವ ಹಾಗೆ ಪ್ರಯತ್ನ ಮಾಡುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಆ ರೀತಿ ಯಾರು ಬಡವರು ಮನೆ ಕಟ್ಟಿಕೊಳ್ಳುವುದಕ್ಕೆ ಮುಂದೆ ಬರುತ್ತಾರೆ ಅವರಿಗೆ ಸುಲಭ ಬೆಲೆಯಲ್ಲಿ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬಾಕಿ ಎಲ್ಲಾ ವಿಚಾರಗಳನ್ನೂ ಸಹ ನಾನು ಹೇಳಿದ್ದೇನೆ ಬಹುಮುಖ್ಯವಾಗಿ ಮಾನ್ಯ ಸದಸ್ಯರು ಹೇಳಿದ್ದರಲ್ಲಿ ೪೫ ಇಂಚು ಮಳೆ ಬೀಳತಕ್ಕ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಹಾಕುತ್ತಾರೆ ಎಂದು ಹೇಳಿದ್ದಾರೆ. ಹಿಂದೆ ಅದು ಇತ್ತು. ಎಲ್ಲೆಲ್ಲಿ ಈ ನೀಲಗಿರಿ ಮರಗಳನ್ನು ಹಾಕಿ ೯ ವರ್ಷಗಳು ಆಗಿದೆ ಅಲ್ಲಿ ಈ ಮರಗಳನ್ನು ಪೂರ್ಣವಾಗಿ ಬೇರುಸಹಿತ ತೆಗೆಯಬೇಕೆಂದು ನಾನು ಇಲಾಖೆಯವರಿಗೆ ಹೇಳಿದ್ದೇನೆ. ಈ ರೀತಿ ಮಳೆ ಬರುವ ಕಡೆ ತೇಗ, ಮತ್ತಿ ಹೊನ್ನೆ ಮೆದುಮರ, ಹಿಪ್ಪೆ, ಈ ಮರಗಳನ್ನು ಬೆಳಸಬೇಕೆಂದು ನಾನು ಸೂಚನೆ ಕೊಟ್ಟಿದ್ದೇನೆ, ನೀಲಗಿರಿ ಮತ್ತು ಸರ್ವೆ ಮರಗಳನ್ನು ಹಾಕಬಾರದು ಎಂದು ಹೇಳಿದ್ದೇನೆ ಕೂಬಾಬಲ್ ಮಲ್ಟಿಪರ್ಪಸ್ ಫಾಡರ್ ಟ್ರೀಗಳನ್ನು ಜಾಸ್ತಿ ಮಳೆ ಬೀಳುವ ಕಡೆ ಸೌದೆಗಾಗಿ ಹೆಚ್ಚು ಹೆಚ್ಚು ಬೆಳೆಸುವಂತೆ ಸೂಚನೆ ಕೊಟ್ಟಿದ್ದೇನೆ ಮತ್ತು ಸಾವಿರಾರು ಎಕರೆಯಲ್ಲಿ ಇದನ್ನು ಬೆಳೆಸಬೇಕೆಂದು ನಾವು ಪ್ರಯತ್ನವನ್ನೂ ಕೂಡಮಾಡಿದ್ದೇವೆ. ಇವುಗಳ ನರ್ಸರಿಯನ್ನೂ ಕೂಡ ಕೆಲವು ಕಡೆ ಬೆಳೆಸಿದ್ದೇವೆ. ಕೂಬಾಬಲ್ ಜಾಯಿಂಟ್ ಮರಗಳ ಬೀಜವನ್ನು ಕೂಡ ಬೆಳೆಸುವುದಕ್ಕೆ ನಾವು ಪ್ರಯತ್ನಮಾಡಿದ್ದೇವೆ. ಈ ಬೀಜ ಎಲ್ಲರಿಗೂ ಮುಂದಿನ ವರ್ಷ ಸಿಕ್ಕುವಹಾಗೆ ಏರ್ಪಾಟು ಮಾಡುತ್ತೇವೆ. ಇಷ್ಟು ಹೇಳಿ ಇನ್ನು ಈ ಸಭೆಯ ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ.

ಖಂಡಿತ ವಾಗಿಯೂ ಕೂಡ ಈ ಇಲಾಖೆಯ ಬಗ್ಗೆ ಹೆಚ್ಚಿನ ಶ್ರಮವಹಿಸಿದ್ದೆ, ಮಾನ್ಯ ಸದಸ್ಯರು ಹೇಳಿದಂತಹ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟು ಕೊಂಡು ಅವುಗಳನ್ನು ಪರಿಹಾರ ಮಾಡುವುದಕ್ಕೆ ಶ್ರಮಿಸುತ್ತೇನೆ. ಎಂದು ಹೇಳಿ ಮಾನ್ಯ ಸದಸ್ಯರು ನನ್ನ ಬೇಡಿಕೆಗೆ ತಮ್ಮ ಒಪ್ಪಿಗೆಗಳನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ ರಾಮಕೃಷ್ಣ.—ನನ್ನ ಕ್ಷೇತ್ರವಾದ ಆನೇಕಲ್ಲಿನಲ್ಲಿ ಆನೆಗಳ ಕಾಟ ಜಾಸ್ತಿಯಾಗಿದೆ. ಅದನ್ನು ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಈಗ ತಮಗೆ ಗೊತ್ತಿರುವಹಾಗೆ ಸರ್ಕಾರದವರು ನ್ಯಾಯ ಬೆಲೆ ಅಂಗಡಿಗಳಿಗೆ ಮತ್ತು ಹಲ್ಲರ ಹಾಗೂ ರೈಸ್ ಮಿಲ್‌ಗಳಿಗೆ ಲೈಸನ್ಸ್ ಕೊಡುವಾಗ ಹರಿಜನಗಿರಿಜನರಿಗೆ ಪ್ರಾಶಸ್ತ್ಯ ಕೊಡಬೇಕೆಂದು ಕೇಂದ್ರ ಸರ್ಕಾರದಿಂದ ಆದೇಶಬಂದಿದೆ ಪ್ರತಿಯೊಂದರಲ್ಲೂ ಹರಿಜನಗಿರಿಜನರಿಗೆ ೨೫ ಪರ್ಸೆಂಟ್ ಮೀಸಲಾಗಿಡಬೇಕೆಂದು ಆದೇಶ ಇದೆ. ಈ ಸಭೆಯ ಸದಸ್ಯರು ಎಲ್ಲಾ ಕಡೆಗಳಲ್ಲೂ ಕಡಲೆಕಾಯಿಯನ್ನು ಬೆಳೆಯತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದಾರೆ. ನಮ್ಮ ಪಕ್ಕದ ರಾಜ್ಯವಾದ ಆಂಧ್ರದಲ್ಲಿ ಅನಂತಪುರ ಜಿಲ್ಲೆಯಲ್ಲಿ ಸರ್ಕಾರದವರು ಕಡಲೇಕಾಯಿ ಬೀಜವನ್ನು ರೈತರ ಮನೆಯ ಬಾಗಿಲಿಗೆ ಒದಗಿಸಿದ್ದಾರೆ. ಅಂಥ ಒಂದು ವ್ಯವಸ್ಥೆಯನ್ನು ಯಾವತ್ತು ನಮ್ಮ ರಾಜ್ಯದಲ್ಲಿ ಮಾಡುತ್ತೀರಿ ಜೋಳ, ನವಣೆ, ಸಜ್ಜೆ ಇವುಗಳ ಬೆಲೆಯನ್ನು ಏತಕ್ಕೆ ನಿಗದಿ ಮಾಡಿಲ್ಲ.

ಶ್ರೀ ಜಿ. ರಾಮೇಗೌಡ.—ಅವುಗಳನ್ನು ಜನಗಳು ಕಡಿಮೆ ಪ್ರಮಾಣದಲ್ಲಿ ಉಪಯೋಗ ಮಾಡುವುದರಿಂದ ಅದನ್ನು ಬಿಟ್ಟಿದ್ದೇವೆ. ಕಡಲೆಕಾಯಿ ಬೀಜದ ಸರಬರಾಜು ಮಾಡುವ ವಿಷಯ ವ್ಯವಸಾಯ ಶಾಖೆಯ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು, ಆದರೂ ಕೂಡ ನಾನೂ ಕೂಡ ವ್ಯವಸಾಯನಾಗಿರುವುದರಿಂದ ಇದರ ಬಗ್ಗೆ ಹೇಳುತ್ತೇನೆ. ಒಂದು ಮೂಟೆ ಕಡಲೇಕಾಯಿ ಬೀಜಕ್ಕೆ ಕೇಂದ್ರ ಸರ್ಕಾರದವರು ಇಷ್ಟು ಎಂದು ಸಬ್ಸಿಡಿ ಕೊಡುತ್ತಾರೆ. ಬೀಜ ಮಾಡಿದರೆ ಅದನ್ನು ಎಲ್ಲರೂ ತೆಗೆದುಕೊಂಡು ಹೋಗಿ ಕಡಲೇಕಾಯಿ ಹಾಕುತ್ತಾರೆ, ಆನೇಕಾಟವನ್ನು ತಪ್ಪಿಸಲು ಏನು ಮಾಡಬೇಕೆನ್ನುವ ಬಗ್ಗೆ ಮಾನ್ಯ ಸದಸ್ಯರು ಸಲಹೆ ಕೊಡುವುದಿಲ್ಲ. ಆನೆಗಳನ್ನು ಹಿಡಿಯುವುದಕ್ಕೆ ಏನಾದರೂ ಸುಡುವುದು ವಗೈರೆ ಮಾಡಿದರೆ ಸಾಯಿಸಿದರು ಎಂದು ಗಲಾಟೆ ಮಾಡುತ್ತಾರೆ. ಹಿಡಿದ ಆನೆಗಳು ನಮ್ಮ ಫೀಲ್ಡ್‌ನಲ್ಲಿ ಮೂರುನಾಲ್ಕು ದಿನ ಇದ್ದು ಎಂದು ಸತ್ತು ಹೋಗುತ್ತವೆ. ಮೈಸೂರಿನ ಕಾಕಾನಕೋಟೆಯಲ್ಲಿ ಕೆಲವುಕಡೆ ಆನೆಗಳನ್ನು ಹಿಡಿಸಿದ್ದೇನೆ. ೭ ಆನೆಗಳು ಬದುಕಿವೆ. ಬೆಂಗಳೂರಿನ ಬನ್ನೇರುಘಟ್ಟದಲ್ಲಿ ಹಿಡಿದದ್ದು ಎರಡು ಸತ್ತುಹೋಯಿತು, ಒಂದು ಮೊನ್ನೆ ಸತ್ತುಹೋಯಿತ್ತು, ರಾಮನಗರದಲ್ಲಿ ಹಿಡಿದಿದ್ದೂ ಸಹ ಸತ್ತುಹೋಯಿತು. ಈಗ ಹಿಡಿಯಲು ಒಂದೇ ವಿಧಾನ ಇರುವುದು ಯಾರಾದರೂ ಸಹಾಯಮಾಡಿ ಗಲಾಟೆಮಾಡಿ ಓಡಿಸುತ್ತೇವೆ ಎಂದರೆ ಅವರು ಎಷ್ಟು ಕೂಲಿಗೆ ಇಟ್ಟು ಕೊಳ್ಳುತ್ತಾರೋ ಅಷ್ಟು ಹಣವನ್ನು ನಾವು ಕೊಡುತ್ತೇವೆ. ಬೇರೆ ವಿಧಾನ ನನ್ನ ಹತ್ತಿರ ಇಲ್ಲ. ಹಿಡಿಯುವುದನ್ನು ಬಿಡುವುದಿಲ್ಲ. ಏಕೆಂದರೆ ಒಂದು ಆನೆಯಿಂದ ನಮಗೆ ೨೫ ಸಹಸ್ರ ರೂಪಾಯಿ ಬೆಲೆ ಬರುತ್ತದೆ. ಜನಗಳಿಗೆ ಕಾಟ ತಪ್ಪುತ್ತದೆ. ಬನ್ನೇರುಘಟ್ಟದ ಸುತ್ತ ಮುತ್ತ ೧೨ ಸಾವಿರ ಚಿಲ್ಲರೆ ರೂಪಾಯಿ ಬೆಲೆಬಾಳುವ ಧವಸಧಾನ್ಯಗಳು ಆನೆಗಳು ಹಾವಳಿಯಿಂದ ನಷ್ಟವಾಗಿದೆಯೆಂದು ಹೇಳಿದ್ದಾರೆ. ಸಾಮಾನ್ಯವಾಗಿ ೫ ಸಾವಿರ ಹೋದರೆ ೧೦ ಸಾವಿರ ಎನ್ನುವುದು ಸ್ವಾಭಾವಿಕ ಸತ್ತವರಿಗೆ ೨,೦೦೦ ರೂಪಾಯಿ ಕೊಟ್ಟಿದ್ದೇವೆ ಯಾರು ಲಾಯರ್ ನೋಟೀಸ್ ಕೊಟ್ಟರು ಆ ಲಾಯರ್‌ಗೇ ಕೊಟ್ಟಿದ್ದೇವೆ. ಆದುದರಿಂದ ಇದಕ್ಕಿಂತ ಇನ್ನೇನು ಮಾಡಬೇಕು ಎನ್ನುವುದು ನನಗೆ ಗೊತ್ತಿಲ್ಲ. ನಾನು ಇನ್ನೂ ಒಂದು ಆಲೋಚನೆ ಮಾಡುತ್ತಿದ್ದೇನೆ. ಬೇಸಿಗೆ ಕಾಲದಲ್ಲಿ ಒಂದೊಂದು ಏರಿಯಾ ವಿಂಗಡಿಸಿ ಅದರಲ್ಲಿ ಆನೆಗಳು ನುಗ್ಗುವಹಾಗೆ ಮಾಡುವುದಕ್ಕೆ ವೈಲ್ಡ್ ಲೈಫ್ ಬೋರ್ಡನ್ನು ಕರೆದಿದ್ದೇನೆ. ಅದರಲ್ಲಿ ಚರ್ಚೆಮಾಡುತ್ತೇನೆ. ಅವರು ಏನಾದರೂ ಸಲಹೆಕೊಟ್ಟರೆ ಎಷ್ಟೇ ಲಕ್ಷ ಖರ್ಚಾಗಲೀ ಬೇಸಿಗೆ ಕಾಲದಲ್ಲಿ ಆನೆಗಳ ಅವಾಂತರವನ್ನು ತಪ್ಪಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ ಮಾನ್ಯ ಸದಸ್ಯರು ಸೌದೆ ಡಿಪೋ ಬಗ್ಗೆ ಕೇಳಿದರು. ಸೌದೆ ಡಿಪೊ ಹರಿಜನರಿಗೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂದು ಏನಾದರೂ ಅವರಿಗೆ ಕೊಟ್ಟಿದ್ದರೆ ನಾನೇ ಮೊದಲು ಕೊಟ್ಟಿರುವುದು ದಾವಣಗೆರೆಯಲ್ಲಿ ಹರಿಜನರಿಗೆ ಕೊಡಲು Overrule all conditions and issue licencs. ಎಂದು ಬರೆದಿದ್ದೇನೆ. ಇದಕ್ಕಿಂತ ಒಳ್ಳೆಯ ಲಾಂಗ್ವೇಜ್ ಇದ್ದರೆ ಅದನ್ನು ಹೇಳಿ ನಾನು ಬರೆಯುತ್ತೇನೆ.

ಶ್ರೀ ವಿ. ಎಂ. ಘಾಡಿ.—ನಾರ್ತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ಸೌದೆಯನ್ನು ಟನ್‌ಗೆ ೪೦ ರೂಪಾಯಿನಂತೆ ಕೊಡುತ್ತಿದ್ದೇವೆ ಬೇರೆ ಕಡೆ ಇನ್ನೂ ಹೆಚ್ಚು ಇದೆ ಎಂದು ಹೇಳಿದಿರಿ. ಬ್ರಿಟಿಷರ ಕಾಲದಲ್ಲಿ ೨ ಪರ್ಸೆಂಟ್ ಕೊಡುತ್ತಿದ್ದರು ಇದನ್ನು ಸರ್ಕಾರದವರು ಕಸಿದುಕೊಳ್ಳುತ್ತಿರುವುದು ಬಹಳ ದುಃಖವೆನಿಸುತ್ತದೆ. ಅದನ್ನೇ

ಮುಂದುವರಿಸಿಕೊಂಡು ಹೋಗಬೇಕು ಎಂದು ತಮ್ಮಲ್ಲಿ ನನ್ನ ವಿನಂತಿ ನಾರ್ತ್ ಕೆನರಾ ಡಿಸ್ಟ್ರಿಕ್ಟ್‌ನ ಅರಣ್ಯ ಉತ್ಪತ್ತಿಯನ್ನು ತೆಗೆದುಕೊಂಡರೆ ಇಡೀ ರಾಜ್ಯದ ೩೦–೩೫ ಕೋಟಿ ಉತ್ಪನ್ನದಲ್ಲಿ ನಾರ್ತ್ ಕೆನರಾ ಡಿಸ್ಟ್ರಿಕ್ಟ್ ಒಂದೇ ೧೪–೧೫ ಕೋಟಿಯಷ್ಟು ಉತ್ಪನ್ನ ಕೊಡುತ್ತದೆ. ನಾರ್ತ್ ಕೆನರಾದಲ್ಲಿ ಖನಿಜಸಂಪತ್ತು ಕೊಡುತ್ತೇವೆ. ಜಲವಿದ್ಯುತ್ ಕೊಡುತ್ತೇವೆ. ತಾವು ಕಾರವಾರ ಜಿಲ್ಲೆಯನ್ನು ನೋಡಿಕೊಂಡು ಬಂದು ಬಹಳ ಚೆನ್ನಾಗಿದೆ ಎಂದು ಬಹಳಷ್ಟು ಮೇಲಕ್ಕೆ ಏರಿಸುತ್ತೀರಿ. ಆದರೆ ಅಲ್ಲಿನ ಮೇದಾರ ಜನರಿಗೆ ಮೆಟ್ ಬ್ಯಾಂಬು ಸಿಗುತ್ತಾ ಇಲ್ಲ. ಪೇಪರ್ ಮಿಲ್‌ಗೆ ಯಾವ ರೇಟಿನಲ್ಲಿ ಕೊಡುತ್ತಾರೋ ಅದಕ್ಕಿಂತ ಹೆಚ್ಚಿನ ರೇಟಿನಲ್ಲಿ ಇವರಿಗೆ ಕೊಡುತ್ತಾರೆ. ಆದುದರಿಂದ ಇವರಿಗೆ ಪೇಪರ್‌ಮಿಲ್ ರೇಟ್‌ಗಿಂತ ಕಡಿಮೆ ದರದಲ್ಲಿ ಬ್ಯಾಂಬು ಕೊಡಲಿಕ್ಕೆ ಪ್ರಯತ್ನಮಾಡುತ್ತಿರಾ.

ಶ್ರೀ ಜಿ. ರಾಮೇಗೌಡ.—ಪೇಪರ್ ಮಿಲ್‌ನವರಿಗೆ ಬ್ಯಾಂಬು ಗೊತ್ತು ಮಾಡಿರುವುದು ಪಾಪದ ಕೆಲಸ ಅದನ್ನು ನಾನು ಮಾಡಲಿಲ್ಲ. ಯಾರು ಆ ಪಾಪದ ಕೆಲಸವನ್ನು ಮಾಡಿದ್ದಾರೆಂದು ನಾನು ನಿಮ್ಮನ್ನೇ ಕೇಳಬೇಕಾಗಿದೆ. ನಾನು ಅಧಿಕಾರ ತೆಗೆದುಕೊಂಡಮೇಲೆ ಆದಷ್ಟೂ ಮಟ್ಟಿಗೆ ಹೆಚ್ಚಿಸಿದ್ದೇನೆ, ಹೆಚ್ಚಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಮಾನ್ಯ ಸಧಸ್ಯರಾದ ಘಾಡಿಯವರು ಪರಂಗಿಯವರ ಕಾಲದಿಂದ ಬಂದಿದ್ದು ಅದನ್ನೇ ಮುಂದುವರಿಸಬೇಕು. ೧೪ ಕೋಟಿಯಷ್ಟು ಉತ್ಪನ್ನ ಬರುತ್ತದೆ. ಎಂದು ಹೇಳಿದರು. ನಿಮ್ಮ ತಾಲ್ಲೂಕು ಬೋರ್ಡಿಗೆ ೨೫ ಲಕ್ಷ ಕೊಟ್ಟಿದ್ದೇವೆ ಇಷ್ಟು ಬೇರೆ ಯಾವ ಜಿಲ್ಲೆಯಲ್ಲೂ ಕೊಟ್ಟಿಲ್ಲ.

ಶ್ರೀ ವಿ. ಎಂ. ಘಾಡಿ.—ಬ್ರಿಟಿಷರ ಕಾಲದಲ್ಲಿ ಅರಣ್ಯದ ಉತ್ಪತ್ತಿಯಲ್ಲಿ ಎರಡು ಪರ್ಸೆಂಟ್ ಕೊಡುತ್ತಿದ್ದರು ಅದನ್ನು ಮುಂದುವರಿಸಿ.

ಶ್ರೀ ಜಿ. ರಾಮೇಗೌಡ.—ನೀವು ಕೇಳಿ. ಇನ್ನೂ ಹೆಚ್ಚು ಬೇಕಾದರೆ ಪರಿಶೀಲನೆ. ಮಾಡೋಣ. ನಾರ್ತ್ ಕೆನರಾದಲ್ಲಿ ನಾವು ಯಾವ ಟಿ, ಬಿ, ಯಲ್ಲಿ ಇಳಿದುಕೊಂಡರೂ ಆ ಟಿ. ಬಿ. ಫಾರೆಸ್ಟ್‌ನಲ್ಲಿದೆ ಎಂದು ಲೆಕ್ಕ ಜನರಲ್ ಆಸ್ಪತ್ರೆ ಫಾರೆಸ್ಟ್‌ನಲ್ಲಿದೆಯೆಂದು ಲೆಕ್ಕ ಲ್ಯಾಂಡ್ ಬ್ಯಾಂಕ್ ಕಟ್ಟುತ್ತಿದ್ದಾರೆ. ಅದಕ್ಕೆ ಪಾಯ ಹಾಕಿದೆ. ಅದೂ ಕೂಡ ಫಾರೆಸ್ಟ್‌ನಲ್ಲಿದೆ ಎಂದು ಹೇಳುತ್ತಿದ್ದಾರೆ ಅಲ್ಲಿ ಎಲ್ಲಾ ಫಾರೆಸ್ಟ್‌ನಲ್ಲಿದೆ ಎಂದಮೇಲೆ ಮಾನ್ಯ ಬಸವಲಿಂಗಪ್ಪನವರಿಗೆ ಲೇಷ ಮಾತ್ರವೂ ಇಲ್ಲ. ಅವರು ದಯಮಾಡಿ ಸ್ಕೀಂ ತಂದು ಬ್ಯಾಂಬುಗಿಡಗಳು ಎಲ್ಲೆಲ್ಲಿವೆ ಅಲ್ಲಿ ಕ್ಯಾಷೋನೆಟ್ ಅನಾನಸ್, ಮ್ಯಾಂಗೊ ಬೆಳೆಯುವುದಕ್ಕೆ ಏಕೆ ಕೊಡಬಾರದು ಎಂದರೆ ಅದಕ್ಕೂ ನಾನೂ ಒಪ್ಪುತ್ತೇನೆ. ಸುಮ್ಮನೆ ಬಿಟ್ಟುಕೊಂಡಿರುವುದಕ್ಕಿಂತಲೂ ಬಡವರಿಗೆ ಕೊಟ್ಟರೂ ಕೊಡಬಹುದು. ಅದಕ್ಕೆ ಏನಾದರೂ ಫೈನಾನ್ಸ್ ಮಾಡುವುದಾದರೆ ಕೊಡಿ. ಇಲ್ಲದೇಹೋದರೆ ಬಡವರಿಗ ಕೊಟ್ಟರೂ ಕೊಡದಹಾಗೆ ಇರಬಾರದು. ಇದಕ್ಕಿಂತಲೂ ಉಪಕಾರ ಮಾನ್ಯಘಾಡಿಯವರಿಗೆ ಇನ್ನೇನು ಮಾಡಬೇಕೋ ಗೊತ್ತಿಲ್ಲ. ಅವರು ಕೇಳಿದ್ದನ್ನೆಲ್ಲಾ ಮಾಡಿದ್ದೇನೆ, ಇನ್ನೂ ಹೆಚ್ಚು ಮಾಡಬೇಕು ಎಂದು ಆಸೆ ಇದೆ, ಅವರು ಭೇಷ್ ಅನ್ನಬೇಕು. ಅಲ್ಲಿಗೆ ಹೋದಾಗ ಸುಮ್ಮನೆ ಇರುತ್ತಾರೆ ಇಲ್ಲಿ ಅಸೆಂಬ್ಲಿಗೆ ಬಂದರೆ ಚಾರ್ಜ್ ಮಾಡುತ್ತಾರೆ. ಅಲ್ಲಿ ಚೆನ್ನಾಗಿದೆ, ಇನ್ನೂ ಹೆಚ್ಚು ಮಾಡಲು ಆಸೆ ಇದೆ. ಅದಕ್ಕೆ ಅವರ ಸಹಕಾರ ನನಗೆ ಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ, ಮಾನ್ಯ ಸದಸ್ಯರಿಗೆ ಎಷ್ಟು ವಯಸ್ಸಾಗಿದೆಯೋ ಅಷ್ಟು ಮರಗಳನ್ನು ಹಾಕಿ ನನಗೆ ತೋರಿಸಿದರೆ ನಾನು ಪಟ್ಟಷ್ಟು ಸಂತೋಷ ಇನ್ಯಾರೂ ಪಡುವುದಿಲ್ಲ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಕರ್ನಾಟಕದ ಕಾಡುಗಳಲ್ಲಿ ಒಳ್ಳೆಯ ತೇಗದ ಮರಗಳನ್ನು ಬೆಳೆಯುತ್ತೇವೆ. ಆದರೂ ನಮ್ಮ ರಾಜ್ಯದಲ್ಲಿ ಉತ್ತಮ ಕ್ವಾಲಿಟಿಯ ತೇಗದ ಮರಗಳನ್ನು ಮಾರಾಟ ಮಾಡದೆ ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಗೆ ಮತ್ತು ಡಿಫೆನ್ಸ್ ಸರ್ವೀಸ್‌ಗೆ ಕೊಟ್ಟು ಮೂರನೇ ವೆರೈಟಿಯನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡುತ್ತಾರೆ. ಇಂಜಿನಿಯರ್ಸ್ ನಮ್ಮದು ಫಸ್ಟ್‌ಕ್ಲಾಸ್ ಟೀಕ್‌ವುಡ್ ಎಂದು ಸ್ಪೆಸಿಫಿಕೇಷನ್ ಬುಕ್‌ನಲ್ಲಿ ಬರೆಯುತ್ತಾರೆ. ಅದನ್ನು ಇಲ್ಲಿ ಮಾರಾಟಮಾಡುವುದಿಲ್ಲ ಆದುದರಿಂದ ಫಸ್ಟ್‌ಕ್ಲಾಸ್ ಟೀಕ್‌ವುಡ್‌ನ್ನು ಕರ್ನಾಟಕದಲ್ಲಿ ಆದ್ಯತೆಯ ಪ್ರಕಾರ ಮಾರಾಟಮಾಡುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಯಾರಿಗೆ ಮಾರಾಟಮಾಡುವುದು ಎಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಮೊದಲು ಕೇಂದ್ರಸರ್ಕಾರದವರು ಎತ್ತಿಕೊಂಡು ಹೋದಮೇಲೆ ಉಳಿದಿದ್ದನ್ನು ಕರ್ನಾಟಕದಲ್ಲಿ ಮಾರಾಟಮಾಡುತ್ತಿದ್ದಾರೆ. ಅವರು ಬಿಟ್ಟಿದ್ದು ಬಿಳಿ ಮರ,

ಗಂಟುಗಳು ತುಂಡುಗಳನ್ನು ಇಲ್ಲಿ ಮಾರಾಟಮಾಡುತಾರೆ. ಮೊದಲನೆಯದು ರೈಲ್ವೆಯವರಿಗೆ ಕೊಡ ತ್ತಾರೆ, ಮೂರನೆಯದನ್ನು ಎಚ್.ಎ.ಎಲ್.ಗೆ ಕೊಡುತ್ತಾರೆ, ಉಳಿದಿದ್ದನ್ನು ಕರ್ನಾಟಕದಲ್ಲಿ ಮಾರಾಟ ಮಾಡುತ್ತಾರೆ.

ಶ್ರೀ ಜಿ. ರಾಮೇಗೌಡ.—ಎ.ಬಿ.ಸಿ. ಎಂಬ ಮೂರು ಕ್ವಾಲಿಟಿಯನ್ನು ನಾವು ಮಾರಾಟದಲ್ಲಿ ಮಾಡಿದ್ದೇವೆ. ಎ ಬಿ ಯನ್ನು ಆಕ್ಷನ್‌ಗೆ ಇಡುತ್ತೇವೆ ಯಾರು ಬೇಕಾದರೂ ತೆಗೆದುಕೊಳ್ಳಬಹುದು. ಡಿಫೆನ್ಸ್‌ಗೆ ಪ್ರಿಫರೆನ್ಸ್ ಕೊಡುತ್ತೇವೆ. ಅದು ನಮ್ಮ ಧರ್ಮ ಕೊಡಲೇಬೇಕು ನ್ಯಾಯ. ಆಕ್ಷನ್‌ನಲ್ಲಿ ಏನು ಇಟ್ಟಿದ್ದೇವೆ ಅದನ್ನು ತೆಗೆದುಕೊಂಡರೆ ಯಾರೂ ಬೇಡ ಎಂದು ಹೇಳುವುದಿಲ್ಲ. ಸಿ ಕ್ವಾಲಿಟಿಯನ್ನು ಆಕ್ಷನ್‌ಲ್ಲೂ ಇಡುತ್ತೇವೆ. ಸ್ಥಳೀಯವಾಗಿ ಸೊಸೈಟಿಗಳಿಗೆ ಸಹ ಕೊಡುತ್ತೇವೆ. ಎ ಬಿ ಸಿ ವೆರೈಟಿಯನ್ನು ಹರಾಜು ಮಾಡಿದಾಗ ತೆಗೆದುಕೊಂಡರೆ ನಮ್ಮ ಅಭ್ಯಂತರವಿಲ್ಲ. ಮಾನ್ಯ ರಾಮಚಂದ್ರರೆಡ್ಡಿಯವರೇ ಹರಾಜಿನಲ್ಲಿ [illegible] ಕೊಡಬೇಡ ಎಂದು [illegible]. ಅದರಲ್ಲೂ ರೋಸ್‌ವುಡ್‌ಗೆ ಬಹಳ ಬೆಲೆ ಇದೆ. ೧೨ ಅಡಿ ಉದ್ದ ಇರತಕ್ಕಂಥದ್ದು ಒಂದು ಲಕ್ಷಕ್ಕೆ ಹೋಗಿದೆ. ಕಷ್ಟ ಹರಾಜಿನಲ್ಲಿ ಹೋಗಬೇಕಾಗುತ್ತದೆ. ಸುಲಭವಾಗಿ ಕೊಡುವುದಕ್ಕೆ ಆಗುವುದಿಲ್ಲ ಟಿಂಬರ್‌ಗೆ ಮಾತ್ರ ಈ ಒಂದು ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ಮಾದಯ್ಯ.—ನಮ್ಮಲ್ಲಿ ಸೌದೆ ಸಿಕ್ಕುವುದು ಬಹಳ ಕಷ್ಟವಾಗಿದೆ. ಇದರ ಜೊತೆಗೆ ಪಕ್ಕದ ರಾಜ್ಯದವರು ಸೌದೆಯನ್ನು ಹರಾಜು ಮಾಡುತ್ತಿದ್ದಾರೆ. ಅಲ್ಲಿಗೆ ನಮ್ಮ ಕಾಂಟ್ರಾಕ್ಟುದಾರರನ್ನು ಕಳುಹಿಸಿ ಹರಾಜಿನಲ್ಲಿ ಭಾಗವಹಿಸಿ ಅವರು ಮಾರಾಟ ಮಾಡುವ ಸೌದೆಯನ್ನು ನಮ್ಮ ರಾಜ್ಯಕ್ಕೆ ಏಕೆ ಡೈವರ್ಟ್ ಮಾಡಬಾರದು ? ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ರಾಮೇಗೌಡ.—ಬಹಳ ಒಳ್ಳೆಯ ಸಲಹೆ. ಈ ಕೆಲಸವನ್ನು ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ವಹಿಸಿದ್ದೇನೆ. ಕೇರಳಾ ಮತ್ತು ತಮಿಳುನಾಡಿನಲ್ಲಿ ಹರಾಜಾದಂತಹ ಸೌದೆಯನ್ನು ನಾವು ತೆಗೆದುಕೊಂಡು ಬರಬೇಕೆಂದು ತೀರ್ಮಾನವಾಗಿದೆ. ಹರಾಜಿನಲ್ಲಿ ಭಾಗವಹಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ನಾವು ಅಲ್ಲಿಂದ ತಂದು ಇಲ್ಲಿ ಮಾರಾಟ ಮಾಡುವಾಗ ಎಷ್ಟರ ಮಟ್ಟಿಗೆ ನಮಗೆ ಬೆಲೆ ಬರುತ್ತದೆ ಎನ್ನುವುದನ್ನೂ ನೋಡಿ, ಬೆಲೆ ಆಧಾರದ ಮೇಲೆ ನೋಡಿಕೊಂಡು ವ್ಯವಹಾರ ಮಾಡ ಬೇಕೆಂದು ತಿಳಿಸಿದ್ದೇನೆ. ಮತ್ತೆ ಈ ವರ್ಷ ನಮ್ಮ ರಾಜ್ಯದಲ್ಲಿರುವ ಯಾರಾದರು ರೈತರು ಬಂದು ನಮ್ಮನ್ನು ಕೇಳಿದರೆ ೨ ಸಾವಿರ ಸಸಿಗಳನ್ನು ಮುಫತ್ತಾಗಿ ಕೊಡುತ್ತೇವೆ. ಅವರಿಂದ ದುಡ್ಡು ಕೇಳುವುದಿಲ್ಲ. ಆ ಸಸಿಗಳನ್ನು ಬೆಳೆಸಿ ಅದರಿಂದ ಆನಂದ ಪಟ್ಟರೆ ಸಾಕು. ೨-೩ ಅಡಿಯವರೆಗೆ ಬೆಳೆಸಿರುವಂತಹ ಸಸಿಗಳು ನಮ್ಮಲ್ಲಿವೆ. ಅವುಗಳನ್ನು ಬೆಳೆಸುವುದಕ್ಕೂ ನಾವು ಪ್ರೋತ್ಸಾಹ ಕೊಡುತ್ತೇವೆ.

ಶ್ರೀ ಎಚ್. ಡಿ. ಚೌಡಯ್ಯ.—ನಾನು ಕೊಟ್ಟಿದ್ದಂತಹ ಸಲಹೆಗಳಲ್ಲಿ ಒಂದಕ್ಕಾದರೂ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ. ಹಲ್ಲರ್ ಮತ್ತು ಸೆಲ್ಲರ್‌ಗಳಿಗೆ ಲೈಸನ್ಸ್‌ನ್ನು ಕೊಡುವಾಗ ಈಗ ಇರತಕ್ಕಂತಹ ಪದ್ಧತಿಯನ್ನು ತಪ್ಪಿಸಿ ನೇರವಾಗಿ ಜಿಲ್ಲಾಧಿಕಾರಿಗಳಿಗೆ ಈ ಒಂದು ಅಧಿಕಾರವನ್ನು ಏಕೆ ಕೊಡ ಬಾರದು ? ಎರಡನೆಯದಾಗಿ ಸೀಮೆ ಎಣ್ಣೆಯ ವಿತರಣೆಯ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಸರಬ ರಾಜು ಮಾಡುವಾಗ ಸಂಜೆ ೪-೫ ಘಂಟೆಯಾದ ಮೇಲೆ ಹಳ್ಳಿಗಳಿಗೆ ಸೀಮೆಎಣ್ಣೆ ಲಾರಿಗಳು ಹೋಗುತ್ತಿವೆ. ಆ ಸಮಯದಲ್ಲಿ ಹಳ್ಳಿಯಲ್ಲಿರತಕ್ಕಂತಹ ಸಹಕಾರ ಸಂಘಗಳ ಬಾಗಿಲು ಹಾಕಿರುತ್ತವೆ. ಆದ್ದರಿಂದ ಬೆಳಕು ಇರುವ ಸಮಯದಲ್ಲಿ ಸೀಮೆಎಣ್ಣೆಯನ್ನು ಗ್ರಾಮಾಂತರ ಪ್ರದೇಶಗಳಿಗೆ ಸರಬರಾಜು ಮಾಡಬೇಕೆಂದು ಹೇಳಿದ್ದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಜಿ. ರಾಮೇಗೌಡ.—ಬೆಳಗಿನ ಸಮಯದಲ್ಲಿ ಸೀಮೆಎಣ್ಣೆ ವಿತರಣೆಯಾಗಬೇಕೆಂದು ಈಗಾಗಲೇ ಹೇಳಿದ್ದೇನೆ. ಆ ರೀತಿ ಮಂಡ್ಯಕ್ಕೆ ಬರದಿದ್ದರೆ ಮಾನ್ಯ ಸದಸ್ಯರು ತಿಳಿಸಿ. ಬೆಳಗಿನ ಸಮಯದಲ್ಲಿ ನಿಮ್ಮ ಜಿಲ್ಲೆಗೆ ಸೀಮೆಎಣ್ಣೆ ಬರುವಂತೆ ಪ್ರಯತ್ನ ಮಾಡುತ್ತೇನೆ. ಹಲ್ಲರ್ ವಿಷಯದಲ್ಲಿ ೫೦೦ ಕ್ಕಿಂತ ಜಾಸ್ತಿ ಜನಸಂಖ್ಯೆ ಇರುವ ಕಡೆ ಹಲ್ಲರ್‌ನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದನ್ನು ಆರ್ಡರ್ ಮೂಲಕ ನಾವು ಅಧಿಕಾರಿಗಳಿಗೆ ತಿಳಿಸಬೇಕಾಗಿದೆ. ಆದಷ್ಟು ಜಾಗ್ರತೆ ತಿಳಿಸುತ್ತೇನೆ. ಇದರಲ್ಲಿ ಒಂದು ರಬ್ಬರ್ ಕವರಿಂಗ್ ಎಂಬುದಾಗಿ ಬರುತ್ತದೆ ಅದನ್ನು ಕಡ್ಡಾಯ ಹಾಕಲೇಬೇಕೆಂಬ ನಿರ್ಬಂಧ ಇದೆ. ಈದಕ್ಕೆ ಕಾರಣವೇನೆಂದರೆ ರಬ್ಬರ್ ಕವರನ್ನು ಹಾಕುವುದರಿಂದ ಹೆಚ್ಚಿಗೆ ನುಚ್ಚು

ಬರುವುದಿಲ್ಲ. ರಬ್ಬರ್ ಕವರನ್ನು ಹಾಕಬೇಕೆಂಬ ಬಗ್ಗೆ ತಜ್ಞರೂ ಕೂಡ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಆದ್ದರಿಂದ ಅದನ್ನು ಹಾಕಲೇಬೇಕು. ಇಂತಹ ನಿರ್ಬಂಧವನ್ನು ತಪ್ಪಿಸುವುದಕ್ಕಾಗುವುದಿಲ್ಲ. ಲೈಸನ್ಸನ್ನು ಫ್ರೀಯಾಗಿ ಕೊಡತಕ್ಕಂಥ ವಿಚಾರವನ್ನೂ ಕೂಡ ತೀರ್ಮಾನ ಮಾಡಿದ್ದೇವೆ. ಆದಷ್ಟು ಜಾಗ್ರತೆ ಸಂಬಂಧಪಟ್ಟ ಆರ್ಡರನ್ನು ಹೊರಡಿಸುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಡೀ ಸೆಂಟ್ರಲೈಜೇಷನ್ ಬಗ್ಗೆ ?

ಶ್ರೀ ಜಿ. ರಾಮೇಗೌಡ.—ಡೀ ಸೆಂಟ್ರಲೈಜೇಷನ್ ಮಾಡುವ ಬಗ್ಗೆ ಸ್ವಲ್ಪ ತೊಂದರೆ ಇದೆ. ಯಾವುದಾದರೂ ಒಂದರಲ್ಲಿ ಲೆಕ್ಕ ಇಲ್ಲದಿದ್ದರೆ ಅವರು ಮಾಡುವಂತಹ ಹಣ ದುರುಪಯೋಗವನ್ನು ಕಂಡುಹಿಡಿಯುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಡೀ ಸೆಂಟ್ರಲೈಜೇಷನ್ ಮಾಡುವುದಿಲ್ಲ.

ಶ್ರೀ ವಿ. ವಿ. ಪೋತ್ದಾರ್.—ಬಿಜಾಪುರ ಜಿಲ್ಲೆಗೆ ಸೌದೆಯನ್ನು ಒದಗಿಸುವ ವಿಚಾರವನ್ನು ನಾನು ಕಳೆದ ಸಾರಿಯೂ ಹೇಳಿದೆ. ನಂತರ ಮಾನ್ಯ ಮಂತ್ರಿಗಳನ್ನು ಈ ವಿಚಾರದ ಬಗ್ಗೆ ಸ್ವತಃ ಕಂಡು ವಿಚಾರವನ್ನು ತಿಳಿಸಿದೆ. ಅದಕ್ಕೆ ಅವರು ಮಂಜೂರು ಮಾಡಿದರು. ಅವರು ಮಂಜೂರು ಮಾಡಿದ ಆಜ್ಞೆ ನಮಗೆ ಸಿಕ್ಕಿಲ್ಲ. ಬಿಜಾಪುರದಲ್ಲಿ ಸೌದೆಯ ಬೆಲೆ ಒಂದು ಟನ್‌ಗೆ ೩೦೦ ರೂಪಾಯಿಗಳಿಗಿಂತ ಹೆಚ್ಚಾಗಿದೆ. ಬಡವರು ಸೌದೆಯನ್ನು ಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಾಗರೀಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೌದೆಯನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ರಾಮೇಗೌಡ.—ನಿಜ. ಬಹಳ ಜಾಸ್ತಿ ಇದೆ. ನಿನ್ನೆ ನಮ್ಮ ಕನ್ಸರ್ವೇಟರನ್ನು ಕರೆಸಿ ಮಾತನಾಡಿದ್ದೇನೆ, ಸೂಕ್ತ ಸೂಚನೆಯನ್ನೂ ಕೂಡ ಕೊಟ್ಟಿದ್ದೇನೆ. ಅವರು ಆದಷ್ಟು ಜಾಗ್ರತೆ ಮಾಡುತ್ತಾರೆ.

ಶ್ರೀ ಯು. ಬಿ. ಬೋರ್ಕರ್.—ಕಾರವಾರದಲ್ಲಿ ಮೊನ್ನೆ ನಾನು ಒಂದು ಸಮಾರಂಭಕ್ಕೆ ಹೋಗಿದ್ದಾಗ ಅಲ್ಲಿ ಜನರು ೩ ರೂಪಾಯಿ ಉರುವಲ ಕಟ್ಟಿಗೆಗೆ ಇದ್ದುದ್ದು ಏಕಾ ಏಕಿ ೫ ರೂಪಾಯಿಗೆ ಏರಿದೆ ಎಂಬುದಾಗಿ ಅಲ್ಲಿಯ ಜನರು ತಿಳಿಸಿದ್ದಾರೆ. ಇದರಿಂದ ಅವರು ಬಹಳ ತೊಂದರೆ ಪಡುತ್ತಿದ್ದಾರೆ. ಈ ತರಹ ಬೆಲೆ ಏಕಾಏಕಿ ಜಾಸ್ತಿ ಮಾಡುವುದಕ್ಕೆ ನಿಮ್ಮ ಸಪ್ಲೈ ರೇಟ್ಸ್ ಜಾಸ್ತಿಯಾಗಿದೆಯೋ ? ಏನೋ ನನಗೆ ಗೊತ್ತಿಲ್ಲ. ಈ ರೀತಿ ಒಮ್ಮೆಲೆ ಜಾಸ್ತಿ ಮಾಡುವುದನ್ನು ತಪ್ಪಿಸಿ ಬಡವರಿಗೆ ಯೋಗ್ಯವಾದ ಬೆಲೆಗೆ ಉರುವಲು ಕಟ್ಟಿಗೆಯನ್ನು ಸರಬರಾಜು ಮಾಡಬೇಕು.

ಶ್ರೀ ಜಿ. ರಾಮೇಗೌಡ.—ಕಾರವಾರದಲ್ಲಿ ಸೌದೆಯ ಬೆಲೆ ಜಾಸ್ತಿಯಾಗಿದೆ ಎಂಬ ವಿಚಾರ ನನ್ನ ಗಮನಕ್ಕೆ ಇನ್ನೂ ಬಂದಿಲ್ಲ. ವಿಚಾರ ಮಾಡುತ್ತೇನೆ.

ಶ್ರೀ ಡಿ. ಟಿ. ರಾಮು.—ಹಲ್ಲರ್‌ಗಳಿಗೆ ಲೈಸನ್ಸನ್ನು ಕೊಡುವಾಗ ಕೆಲವು ನಿರ್ಬಂಧಗಳು ಉಂಟು. ಅವುಗಳು ಯಾವುವೆಂದರೆ ಒಂದು ಹಲ್ಲರ್‌ನಿಂದ ಇನ್ನೊಂದು ಹಲ್ಲರ್‌ನ ಅಂತರ ಒಂದು ಮೈಲಿ ಮೇಲೆ ಇರಬೇಕು. ಅದರ ಒಳಗೆ ಬಂದರೆ ಲೈಸನ್ಸನ್ನು ಕೊಡುವುದಿಲ್ಲ. ಇದಕ್ಕೆ ಬದಲಾಗಿ ಕೇಳಿದವರಿಗೆಲ್ಲಾ ಲೈಸನ್ಸ್ ಕೊಟ್ಟುಬಿಟ್ಟರೆ ಯಾರು ಸರಿಯಾಗಿ ನಡೆಸುತ್ತಾರೋ ಆತನು ಇರುತ್ತಾರೆ, ಯಾರು ಸರಿಯಾಗಿ ನಡೆಸುವುದಿಲ್ಲವೋ ಅವನು ತನ್ನಷ್ಟಕ್ಕೆ ತಾನೇ ಬಾಗಿಲು ಮುಚ್ಚಿಕೊಂಡು ಹೋಗುತ್ತಾನೆ. ಈ ನಿರ್ಬಂಧ ಏಕೆ ?

ಶ್ರೀ ಜಿ. ರಾಮೇಗೌಡ.—ಕೇಳಿದವರಿಗೆಲ್ಲಾ ಕೊಡುವುದಕ್ಕಿಂತ ಜನಸಂಖ್ಯೆ ಆಧಾರದ ಮೇಲೆ ಕೊಟ್ಟರೆ ಬಹಳ ಒಳ್ಳೆಯದು. ಅದರಿಂದ ಬೇರೆಯವರಿಗೆ ಧಕ್ಕೆಯಾಗಲಾರದು.

ಶ್ರೀ ಟಿ. ರಾಮದೇವ್.—ನಾನು ಎರಡು ಸಲಹೆಗಳನ್ನು ಕೊಟ್ಟಿದ್ದೆ. ಮೊದಲನೆಯದಾಗಿ ಬೆಂಗಳೂರು ನಗರದಲ್ಲಿರುವ ಬಿಸಿ ವಾತಾವರಣವನ್ನು ಕಡಿಮೆ ಮಾಡುವ ಸಲುವಾಗಿ ಗ್ರೀನ್ ಪ್ಲಾಂಟೇಷನ್ ಮಾಡುತ್ತೇವೆಂದು ತಾವು ಹೇಳಿದ್ದೀರಿ ಅದರ ಬಗ್ಗೆ ಏನೂ ಹೇಳಿಲ್ಲ. ಮತ್ತೆ ಆಹಾರಪದಾರ್ಥಗಳ ಬೆಲೆ ಕಡಿಮೆಯಾಗಿದೆ ಎಂಬುದಾಗಿ ಹೇಳುತ್ತೀರಿ. ಆದರೆ ಗ್ರಾಹಕನಿಗೆ ಈ ಒಂದು ಪ್ರಯೋಜನ ದೊರಕುತ್ತಿಲ್ಲ. ಇದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ ? ತಿಳಿಸಬೇಕು.

ಶ್ರೀ ಜಿ. ರಾಮೇಗೌಡ .—ಎರಡನೆಯ ಪ್ರಶ್ನೆಗೆ ಕೇಂದ್ರ ನೀತಿಯೂ ಇದಕ್ಕೆ ಸ್ವಲ್ಪ ಕಾರಣ. ಮೊದಲನೆಯ ಪ್ರಶ್ನೆಗೆ ನಾನು ವ್ಯವಸ್ಥೆ ಮಾಡಿದ್ದೇನೆ. ಅದೇನೆಂದರೆ ಟ್ರೀ ಆಫೀಸರನ್ನು ನೇಮಕ ಮಾಡಿದ್ದೇನೆ. ಅವರಿಗೆ ಕೆಲವು ಸಿಬ್ಬಂದಿಗಳನ್ನೂ ಕೂಡ ಕೊಟ್ಟಿದ್ದೇನೆ. ಒಂದು ಲಕ್ಷ ನರ್ಸರಿಗಳನ್ನು ತಯಾರು ಮಾಡಿದ್ದೇನೆ. ಇದರ ಬಗ್ಗೆ ಈಗ ನಾನು ಸರ್ಕಾರಕ್ಕೆ ಒಂದು ಶಿಫಾರಸ್ಸು ಮಾಡಿದ್ದೇನೆ. ಒಂದು ವೆಹಿಕಲ್ ಬೇಕು. ಇಬ್ಬರು ಮಹಿಳಾ ಅಧಿಕಾರಿಗಳು ಬೇಕು, ಒಬ್ಬರು ಆಫೀಸರ್ಸ್ ಬೇಕು, ಅವರು ಮನೆ ಮನೆಗೆ ಹೋಗಿ ಮನೆಯ ಒಡತಿಯನ್ನು ಕಂಡು ಅವರಿಗೆ ಮನವರಿಕೆ ಮಾಡಿ ಅವರ ಅನುಮತಿ ಪಡೆದು ಸಸಿಗಳನ್ನು ನಡತಕ್ಕಂತಹ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದರೆ ನಮ್ಮ ಶಿಫಾರಸ್ಸು ಸರ್ಕಾರದಿಂದ ಇನ್ನೂ ಮಂಜೂರಾಗಿ ಬಂದಿಲ್ಲ. ಟ್ರೀ ಆಫೀಸರ್ ಮಾತ್ರ ಕೆಲಸ ಮಾಡುತ್ತಿದ್ದಾನೆ. ಆದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದೇನೆ. ಬಹುಶಃ ತಾವು ನಾಳೆ ಹೊರಗಡೆ ಹೋಗುವಾಗ ಎಚ್.ಎ.ಎಲ್., ಬಿ.ಇ.ಎಲ್. ಏರಿಯಾಕ್ಕೆ ಹೋದರೆ ಅಲ್ಲಿ ಉದಾಹರಣಾರ್ಥವಾಗಿ ಮಾಡಿದ್ದೇವೆ. ಅದನ್ನು ತಾವು ನೋಡಿದರೆ ತಮ್ಮ ಮನಸ್ಸು ಸಮಾಧಾನವಾಗಬಹುದೆಂದು ನನಗನ್ನಿಸುತ್ತದೆ.

MR. SPEAKER .—The question is :

"That the respective sums not exceeding the amounts mentioned in the list of demands be granted to the Government to defray inclusive of amounts granted on account the charges which will come in course of payment during the financial year for the period ending with 31st day of March 1980 in respect of Demands Nos. 19 and 20."

The Motion was adopted and the sums were granted. As directed by the Chair the motion for Demands for grant adopted by the House are reproduced below :—

DEMAND NO. 19—FOOD AND CIVIL SUPPLIES

"That a sum not exceeding Rs. 33,45.43,000 inclusive of the sum granted, on account' be granted to the Government to defray the charges which will come in course of payment during the financial year ending 31st day of March 1980 in respect of Demand No. 19 "Fo d and Civil Supplies".

DEMAND NO. 20—FOREST

"That a sum not exceeding Rs. 26,48,30,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 20 "Forest".

MR. SPEAKER.—Now the House stands adjourned to meet tomorrow at 1 P.M.

The House adjourned at Thirty Minutes Past Six of the Clock to meet again at One of the Clock on Wednesday the 2nd May 1979.